RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 92 ಪುಟ: 06 ಗುರುವಾರ 06-03-2025 ₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu



ರಾಜಮೌಳಿ – ಮಹೇಶ್ ಬಾಬು ಸಿನಿಮಾ ಶೂಟಿಂಗ್‌ಗೆ ಬೃಹತ್ ಸೆಟ್

ಮೌನ ಮುರಿದ ಮಾಧವನ್

ನೆಪೋಟಿಸಂ: ನಕಾರಾತ್ಮಕತೆಗೆ ಬಲಿ ಪುಟ 6

ಬೆಂಗಳೂರು | ಬೆಂ.ಗ್ರಾಮಾಂತರ ತುಮಕೂರು ಚಿತ್ರದುರ್ಗ ಮೈಸೂರು ಮಂಡ್ಯ ರಾಮನಗರ ಚಾ.ನಗರ ಹಾಸನ ಚಿಕ್ಕಬಳ್ಳಾಪುರ ಕೋಲಾರ

Honourary Editor: Venkatesh

# ಭ್ರಷ್ಟರು ಲೋಕಾ ಬಲೆಗೆ

## ರಾಜ್ಯದ 8 ಅಧಿಕಾರಿಗಳ ನಿವಾಸ, ಕಚೇರಿ ಮೇಲೆ ಲೋಕಾಯುಕ್ತ ದಾಳಿ;ಭಾರೀ ಪ್ರಮಾಣದ ಹಣ-ಆಸ್ತಿ ಪತ್ತೆ

**ಬೆಂಗಳೂರು:** ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂಬ ಖಚಿತ ಮಾಹಿತಿ ಆಧಾರದ ಮೇಲೆ ಗುರುವಾರ ರಾಜ್ಯದ ಏಳು ಜಿಲ್ಲೆಗಳಲ್ಲಿನ 8 ಅಧಿಕಾರಿಗಳ ಮನೆಗಳ ಮೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಅಪಾರ ಪ್ರಮಾಣದ ಆಸ್ತಿಗಳ ದಾಖಲೆ, ಹಣ ಹಾಗೂ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ದಾಳಿಗಾಗಿ ಪ್ರತ್ಯೇಕ ತಂಡ ರಚಿಸಿಕೊಂಡು ಬೆಂಗಳೂರು, ಕೋಲಾರ, ಕಲಬುರಗಿ, ತುಮಕೂರು, ದಾವಣಗೆರೆ, ವಿಜಯಪುರ ಹಾಗೂ ಬಾಗಲಕೋಟೆಯ ವಿವಿಧೆಡೆ ದಾಳಿ ನಡೆಸಿರುವ ಪೊಲೀಸರು ಅಧಿಕಾರಿಗಳ ಬೆವರಿಳಿಸಿದ್ದಾರೆ.

ಬೆಳಗಿನ ಜಾವ 4ರಿಂದ 5 ಗಂಟೆ ಸಮಯದಲ್ಲಿ ಏಕಕಾಲಕ್ಕೆ ಎಲ್ಲೆಡೆ ದಾಳಿ ನಡೆಸಿದ್ದು, ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದಾರೆ.

ಬೆಂಗಳೂರಿನ ಡಿಎಪಿಆರ್ ಚೀಫ್ ಇಂಜಿನಿಯರ್ ಟಿ.ಡಿ.ನಂಜುಡಪ್ಪ, ಬಿಬಿಎಂಪಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್.ಬಿ.ಕಲ್ಲೇಶಪ್ಪ, ಕೋಲಾರದಲ್ಲಿರುವ ಬೆಸ್ಕಾಂ ಎಇಇ ಜಿ.ನಾಗರಾಜ್, ಕಲಬುರಗಿ ಲೋಕೋಪಯೋಗಿ ಚೀಫ್ ಇಂಜಿನಿಯರ್ ಜಗನ್ನಾಥ್, ದಾವಣಗೆರೆ ಫುಡ್ ಸೇಫ್ಟಿ ಅಧಿಕಾರಿ ಜಿ.ಎಸ್.ನಾಗರಾಜು, ಬಾಗಲಕೋಟೆ ಪಂಚಾಯತ್ ರಾಜ್ ಇಲಾಖೆ ಅಕೌಂಟೆಂಟ್ ಮಲ್ಲೇಶ್,ತುಮಕೂರು ಜಿಲ್ಲೆ ಶಿರಾ ತಾಲೂಕಿನ ತಾವರೆಕೆರೆ ಪಿಹೆಚ್ಸಿ ವೈದ್ಯ ಜಗದೀಶ್, ಬಾಗಲಕೋಟೆಯ ಎಷ್ಡಿಎ ಮಲ್ಲಪ್ಪ ಸಾಬಣ್ಣ ದುರ್ಗದ, ವಿಜಯಪುರದ ಎಷ್ಡಿಎ ಶಿವಾನಂದ ಶಿವಶಂಕರ ಕೆಂಭಾವಿ ಅವರುಗಳ ಮನೆ ಹಾಗೂ ಕಚೇರಿ ಮೇಲೆ ದಾಳಿ ನಡೆಸಿದ್ದಾರೆ.

ದಾಳಿ ವೇಳೆ ಸ್ವತಃ ಅಧಿಕಾರಿಗಳೇ ಬೆಚ್ಚಿಬೀಳುವಷ್ಟು ದಾಖಲೆ ಪ್ರಮಾಣದ ಆಸ್ತಿಗಳು, ಹಣ ಮತ್ತು ಚಿನ್ನಾಭರಣಗಳು ಪತ್ತೆಯಾಗಿವೆ. ಈ ಅಧಿಕಾರಿಗಳು ಭಾರೀ ಪ್ರಮಾಣದ ಹಣ-ಆಸ್ತಿ ಲೂಟಿ ಮಾಡಿರುವುದು ಪತ್ತೆಯಾಗಿದ್ದು, ಒಬ್ಬರಿಗಿಂತ ಒಬ್ಬರು ಶ್ರೀಮಂತರಾಗಿದ್ದಾರೆ. ಪ್ರತಿಯೊಬ್ಬರ ಮನೆ-ಕಚೇರಿಗಳಲ್ಲೂ ಆಸ್ತಿ ಪತ್ರಗಳಲ್ಲದೇ ಹಣ-ಚಿನ್ನಾಭರಣ ಹಾಗೂ ವಜ್ರದ ಆಭರಣಗಳು ಪತ್ತೆಯಾಗಿವೆ.

ಕಲಬುರಗಿ ನಗರದ ಎನ್‌ಜಿಒ ಕಾಲೋನಿಯಲ್ಲಿ ವಾಸವಿರುವ ರಾಜ್ಯ ಹೆದ್ದಾರಿ ಯೋಜನಾ ಪ್ರಾಧಿಕಾರದ





ಮುಖ್ಯ ಯೋಜನಾಧಿಕಾರಿ ಜಗನ್ನಾಥ ಹಲಂಗೆ ಅವರ ನಿವಾಸದ ಮೇಲೆ ಲೋಕಾಯುಕ್ತ ಎಸ್ಪಿ ಉಮೇಶ್ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ಈ ಆಸಾಮಿ ಭಾರೀ ಪ್ರಮಾಣದ ಆಸ್ತಿ ಗಳಿಸಿರುವುದು ಶೋಧ ಕಾರ್ಯದ ವೇಳೆ ಬೆಳಕಿಗೆ ಬಂದಿದೆ.

ಜಗನ್ನಾಥ ಹಾಗೂ ಅವರ ಪತ್ನಿ ಬೆಂಗಳೂರಿನಲ್ಲಿದ್ದಾರೆ. ಜಗನ್ನಾಥ ಅವರ ಪುತ್ರ ವಿದೇಶದಲ್ಲಿದ್ದಾರೆ. ಪುತ್ರಿ ಕಲಬುರಗಿಯಲ್ಲಿದ್ದು, ಪುತ್ರಿಯಿಂದ ಮನೆಯ ಕೀ ತರಿಸಿಕೊಂಡು ಅಧಿಕಾರಿಗಳು ಪರಿಶೀಲನೆ ಮಾಡಿದ್ದಾರೆ. ಲಾಕರ್ ಕೀಗಳು ಇಲ್ಲದ ಕಾರಣ ಮುರಿಯಲು ಎಕ್ಸ್‌ಪರ್ಟ್‌ಳನ್ನು ಕರೆಸಲಾಗಿತ್ತು ಎಂದು ತಿಳಿದು ಬಂದಿದೆ.

ಸುದೀರ್ಘ ಕಾಲ ಕಲಬುರಗಿಯ ಕಛಾಆ ಇಲಾಖೆಯಲ್ಲಿಯೇ ಕೆಲಸ ಮಾಡಿದ ಜಗನ್ನಾಥ, ಚೀಫ್ ಇಂಜಿನಿಯರ್ ಆಗಿ ಕೆಲಸ ಮಾಡಿ ಇತ್ತೀಚೆಗಷ್ಟೇ ರಾಜ್ಯ ಹೆದ್ದಾರಿ ಪ್ರಾಧಿಕಾರಕ್ಕೆ ವರ್ಗಾವಣೆಗೊಂಡಿದ್ದರು.

ಕಲಬುರಗಿ ನಿವಾಸ ಮಾತ್ರವಲ್ಲದೆ ಬೀದರ್, ಬಸವಕಲ್ಯಾಣ, ಬೆಂಗಳೂರು ಸೇರಿ ಆರು ಪುಟ 2



ಶ್ರೀ ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಗುರುವಾರ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದರು

## ಟನಲ್ ಕುಸಿತ: ರಕ್ಷಣಾ ಕಾರ್ಯಕ್ಕೆ ಶ್ವಾನಗಳ ಬಳಕೆ

**ಕೇರಳ:** ತೆಲಂಗಾಣದ ಎಸ್‌ಎಲ್‌ಬಿಸಿ ಟನಲ್ ಕುಸಿದ ಸ್ಥಳದಲ್ಲಿ ಕಳೆದ ಹಲವು ದಿನಗಳಿಂದ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಸಂಕಷ್ಟದಲ್ಲಿ ಸಿಲುಗಿದ ಕಾರ್ಮಿಕರ ಪತ್ತೆಗೆ ಕೇರಳ ಪೊಲೀಸ್ ಇಲಾಖೆಯ ಕೆಡಾವರ್ ಶ್ವಾನಗಳನ್ನು ಬಳಸುತ್ತಿದೆ. ಈ ಕೆಡಾವರ್ ಶ್ವಾನಗಳು ನಾಪತ್ತೆಯಾದ ಜನರು, ಮಾನವನ ಮೃತದೇಹ ಪತ್ತೆ ಮಾಡಲು ವಿಶೇಷ ತರಬೇತಿ ಪಡೆದಿವೆ ಎಂದು ಕೇರಳ ಸರ್ಕಾರ ತಿಳಿಸಿದೆ. ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮನವಿಯ ಮೇರೆಗೆ ಕೆಡಾವರ್ ಶ್ವಾನಗಳನ್ನು ರಕ್ಷಣಾ ಕಾರ್ಯಕ್ಕೆ ಕಳುಹಿಸಲಾಗಿದೆ. ರಾಷ್ಟ್ರೀಯ ವಿಪತ್ತು ಪ್ರಾಧಿಕಾರ ಕೂಡ ಈ ವಿಚಾರದಲ್ಲಿ ಸಹಾಯ ಕೇಳಿತ್ತು ಎಂದು ಹೇಳಿದೆ. ಪುಟ 2

## ಪಂಪ್ ಸೆಟ್‌ಗಳಿಗೆ 7 ಗಂಟೆ ವಿದ್ಯುತ್ ಪೂರೈಕೆ

**ಬೆಂಗಳೂರು:** ರಾಜ್ಯದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆಯೇ ನಿರಂತರ 7 ಗಂಟೆಗಳ ಕಾಲ ತ್ರಿಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ವಿಧಾನಸಭೆಯಲ್ಲಿಂದು ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಸಿ.ಬಿ. ಸುರೇಶ್‌ಬಾಬು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ತಾಂತ್ರಿಕ ಸಾಧ್ಯತೆ ಇರುವ ಉಪಕೇಂದ್ರಗಳಿಂದ ನಿರಂತರ 7 ಗಂಟೆ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುವುದು. ತಾಂತ್ರಿಕ ಸಾಧ್ಯತೆ ಇಲ್ಲದಿರುವ ಉಪಕೇಂದ್ರಗಳಲ್ಲಿ ಪಾಳಿಯಲ್ಲಿ ಹಗಲಿನ ವೇಳೆ 4 ಗಂಟೆ ರಾತ್ರಿ ವೇಳೆ 3 ಗಂಟೆ ಒಟ್ಟು 7 ಗಂಟೆಗಳ ಕಾಲ ತ್ರೀಫೇಸ್ ವಿದ್ಯುತ್‌ನ್ನು ಸರಬರಾಜು ಮಾಡಲಾಗುತ್ತಿದೆ ಎಂದರು.

ಅಂತರ್ಜಲ ಕುಸಿತದ ಕಾರಣಗಳನ್ನು ಉಲ್ಲೇಖಿಸಿ ತ್ರಿಫೇಸ್ ವಿದ್ಯುತ್ ಸರಬರಾಜಿನ ಬ್ಯಾಚ್‌ಗಳನ್ನು ಸಮಯ ಬದಲಾಯಿಸಲು ಯಾವುದೇ ಕೋರಿಕೆ ಬಂದಿಲ್ಲ. ಈ ರೀತಿಯ ಸಮಯ ಬದಲಾವಣೆಯೂ ಸಾಧ್ಯವೇ ಇಲ್ಲ ಎಂದರು.



ರಾಜ್ಯದ ಯಾವುದೇ ಕಡೆ ವಿದ್ಯುತ್ ಪರಿವರ್ತಕಗಳು (ಟಿಸಿ) ಸುಟ್ಟು ಹೋದ ಸಂದರ್ಭದಲ್ಲಿ ಅದನ್ನು 48 ಗಂಟೆಗಳಲ್ಲಿ ಬದಲಿಸಬೇಕು ಎಂದು ಸರ್ಕಾರ ಹೇಳಿದೆ. 48 ಗಂಟೆಗಳಲ್ಲಿ ಟಿಸಿ ಬದಲಾವಣೆ ಮಾಡದೆ ಹೋದರೆ ಅಲ್ಲಿನ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಪರಿವರ್ತಕಗಳ ಸಮಸ್ಯೆ ನೀಗಿಸಲು ವಿದ್ಯುತ್ ಪರಿವರ್ತಕಗಳ ಪುಟ 2

## ಶಾಸಕರನ್ನ ವೈರಿಗಳಂತೆ ನೋಡಬೇಡಿ

**ಬೆಂಗಳೂರು:** ಶಾಸಕರನ್ನ ವೈರಿಗಳಂತೆ ನೋಡಬೇಡಿ ಎಂದು ಸಭಾಧ್ಯಕ್ಷ ಯುಟಿ ಖಾದರ್ ಹೇಳಿದ್ದಾರೆ. ವಿಧಾನಸೌಧದಲ್ಲಿ ರಿಕ್ಲೈನರ್ ಚೇರ್ ವ್ಯವಸ್ಥೆ ಮಾಡಿದ್ದಕ್ಕೆ ವಿರೋಧ ವ್ಯಕ್ತವಾದ ಹಿನ್ನೆಲೆಯಲಿ ಮಾತನಾಡಿದ ಸ್ಪೀಕರ್ ಯುಟಿ ಖಾದರ್, ಸಭಾಧ್ಯಕ್ಷನಾಗಿ ವ್ಯವಸ್ಥೆ ಮಾಡೋದು ನನ್ನ ಕೆಲಸ ಶಾಸಕರನ್ನ ವೈರಿಗಳಂತೆ ನೋಡಬೇಡಿ. 4 ಲಕ್ಷ ಹಣ ಆಗಬಹುದು. ಪುಟ 2

## ಅಪಘಾತ : ಆರು ಮಂದಿ ದಾರುಣ ಸಾವು

**ರಾಜಸ್ಥಾನ:** ಜಿಲ್ಲೆಯಲ್ಲಿ ಗುರುವಾರ ನಸುಕಿನಜಾವ 3 ಗಂಟೆ ಸುಮಾರಿಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 6 ಮಂದಿ ದಾರುಣವಾಗಿ ಸಾವನ್ನಪ್ಪಿರುವ ಘಟನೆ ಅಬುರೋಡ್ ಸದರ್ ಪೊಲೀಸ್ ಠಾಣೆ ಪ್ರದೇಶದ ಕಿವರ್ಲಿ ಬಳಿ ನಡೆದಿದೆ. ಮೃತಪಟ್ಟವರೆಲ್ಲರೂ ಜಾಲೋರ್ ಜಿಲ್ಲೆಯ ನಿವಾಸಿಗಳು. ಮೃತರಲ್ಲಿ ದಂಪತಿ ಮತ್ತು ಅವರ ಮಗ ಸೇರಿದ್ದಾರೆ. ಅಪಘಾತದಲ್ಲಿ ಸಾವನ್ನಪ್ಪಿದವನ್ನು ನಾರಾಯಣ್ ಪ್ರಜಾಪತ್ (58), ಪುಟ 2

## ಜೋಡಿ ಕೊಲೆ ಆರೋಪಿಗೆ ಜೀವಾವಧಿ ಶಿಕ್ಷೆ

**ಬೆಂಗಳೂರು:** ಬೇರೊಬ್ಬನ ಜೊತೆ ಸಲುಗೆಯಿಂದ ಇದ್ದ ಕಾರಣಕ್ಕೆ ಆಕ್ರೋಶಗೊಂಡು ಮಹಿಳೆ ಹಾಗೂ ಆಕೆಯ 11 ವರ್ಷದ ಮಗನ ಜೋಡಿ ಕೊಲೆ ಮಾಡಿದ್ದ ಆರೋಪಿಗೆ ನಗರದ 50ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 50 ಸಾವಿರ ರೂ ದಂಡ ವಿಧಿಸಿ ತೀರ್ಪು ನೀಡಿದೆ. ಪುಟ 2

## ನಾಳೆ ಬೆಂಗಳೂರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ

**ಬೆಂಗಳೂರು:** ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ. ವಾರತ್ತಹಳ್ಳಿಯಲ್ಲಿ ನಡೆಯಲಿರುವ "ವಿಶ್ವೇಶತೀರ್ಥ ಸ್ಮಾರಕ ಆಸ್ಪತ್ರೆ" ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಇದೇ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ , ಮಾಜಿ ಸಚಿವ ಅರವಿಂದ ಲಿಂಬಾವಳಿ ಕೂಡ ವೇದಿಕೆ ಹಂಚಿಕೊಳ್ಳಲಿದ್ದಾರೆ. ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಉಪಸ್ಥಿತರಿರಲಿದ್ದಾರೆ. ಆದರೆ, ಅಮಿತ್ ಶಾ ಬೆಂಗಳೂರು ಭೇಟಿ ವೇಳೆ ರಾಜ್ಯ ಬಿಜೆಪಿ ಬೆಳವಣಿಗೆಗಳ ಕುರಿತು ಕರ್ನಾಟಕದ ನಾಯಕರ ಯಾವುದೇ ಭೇಟಿ ನಿಗದಿಯಾಗಿಲ್ಲ ಎಂದು ಪಕ್ಷದ ಮೂಲಗಳು ತಿಳಿಸಿವೆ.

2018ರ ಚುನಾವಣೆ ವೇಳೆ ಅಮಿತ್ ಶಾ ಸೂಚನೆ ಮೇರೆಗೆ ಸಿದ್ದರಾಮಯ್ಯ ವಿರುದ್ಧ ಶ್ರೀರಾಮುಲು ಸ್ಪರ್ಧೆ ಮಾಡಿದ್ದರು.



ಬಾದಾಮಿಯಲ್ಲಿ ನಾಮಪತ್ರ ಸಲ್ಲಿಸುವ ವೇಳೆ ಹಾಗೂ ಆ ನಂತರ ಪ್ರಚಾರಕ್ಕೂ ಶ್ರೀರಾಮುಲು ಜೊತೆಗೆ ಅಮಿತ್ ಶಾ ಬಂದಿದ್ದರು. 2023ರಲ್ಲಿ ಹೈದರಾಬಾದ್‌ನಲ್ಲಿ ನಡೆದ 'ವಿಮೋಚನಾ ದಿನಾಚರಣೆ' ಧ್ವಜಾರೋಹಣದ ವೇಳೆಯೂ ಶ್ರೀರಾಮುಲುವನ್ನು ಅಮಿತ್ ಶಾ ಕರೆಸಿಕೊಂಡಿದ್ದರು. ಹೀಗಾಗಿ, ಅಮಿತ್ ಶಾ ಜೊತೆಗೆ ಇರುವ ಹಳೆಯ ನಂಟಿನ ಸದ್ಬಳಕೆ ಮಾಡಿಕೊಳ್ಳಲು ಶ್ರೀರಾಮುಲು ಮುಂದಾಗಿದ್ದಾರೆ ಎನ್ನಲಾಗಿದೆ. ಪುಟ 2

## ಎಸ್‌ಡಿಪಿಐ ಕಚೇರಿಗಳ ಮೇಲೆ ಇ.ಡಿ ದಾಳಿ



**ಬೆಂಗಳೂರು:** ಅಕ್ರಮ ಹಣ ವರ್ಗಾವಣೆ ಆರೋಪದ ಮೇಲೆ ಇತ್ತೀಚೆಗೆ ಎಸ್‌ಡಿಪಿಐ ಮುಖಂಡ ಫೈಜಿಯನ್ನು ಬಂಧಿಸಿದ್ದ ಇಡಿ ಅಧಿಕಾರಿಗಳು ಗುರುವಾರ ದೇಶದ ಪ್ರಮುಖ ಎಸ್‌ಡಿಪಿಐ ಕಚೇರಿಗಳ ಮೇಲೆ ದಾಳಿ ನಡೆಸಿದ್ದಾರೆ,

ಬೆಂಗಳೂರಿನ ಎಸ್‌ಡಿಪಿಐ ಕಚೇರಿ ಮೇಲೆ ದಾಳಿ ನಡೆಸಿ ದಾಖಲೆ ಪರಿಶೀಲಿಸುತ್ತಿರುವ ಅಧಿಕಾರಿಗಳು, ಎಸ್‌ಡಿಪಿಐ ಖಾತೆಗಳಿಗೆ ವಿದೇಶಗಳಿಂದ ಹಣ ವರ್ಗಾವಣೆ ಆಗುತ್ತಿದೆ ಎಂಬ ಅನುಮಾನ ಬಂದ ಹಿನ್ನೆಲೆಯಲ್ಲಿ ದೇಶದ ವಿವಿಧೆಡೆಗಳಲ್ಲಿರುವ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಗುರುವಾರ ದಾಳಿ ಮಾಡಿದ್ದಾರೆ. ಪುಟ 2

## ಗಂಗಾ ಆರತಿ ನೆರವೇರಿಸಿದ ಮೋದಿ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಉತ್ತರಾಖಂಡದ ಮುಖ್ವಾ ದೇವಿ ದೇವಸ್ಥಾನದಲ್ಲಿ ಗಂಗಾ ಆರತಿ ನೆರವೇರಿಸಿದರು.

ಡೆಹ್ರಾಡೂನ್‌ಗೆ ಆಗಮಿಸಿದ ಪ್ರಧಾನಿಯನ್ನು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಇತರ ಗಣ್ಯರು ಸ್ವಾಗತಿಸಿದರು. ಪ್ರಧಾನಿ ಮೋದಿ ಅವರು ಧಾರ್ಮಿಕ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಸರಣಿಯಲ್ಲಿ ಭಾಗವಹಿಸಲಿದ್ದಾರೆ.

ತಮ್ಮ ಶಕ್ತಿಯುತ ನಾಯಕತ್ವ ಮತ್ತು ದಣಿವರಿಯದ ಪ್ರಯತ್ನಗಳಿಂದ ದೇವಭೂಮಿ ಉತ್ತರಾಖಂಡದ ಅಭಿವೃದ್ಧಿಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದ, ರಾಷ್ಟ್ರದ ಉನ್ನತಿಗಾಗಿ ಮಹಾನ್ ಅನ್ವೇಷಕರಾದ ವಿಶ್ವದ ಅತ್ಯಂತ ಜನಪ್ರಿಯ ನಾಯಕ, ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಜಿ ಅವರನ್ನು ಇಂದು ಡೆಹ್ರಾಡೂನ್‌ನ ಜಾಲಿ ಗ್ರಾಂಟ್ ವಿಮಾನ ನಿಲ್ದಾಣದಲ್ಲಿ ದೇವಭೂಮಿ ಉತ್ತರಾಖಂಡಕ್ಕೆ ಆಗಮಿಸಿದಾಗ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಸನ್ಮಾನಿಸುತ್ತೇನೆ ಎಂದು ಮುಖ್ಯಮಂತ್ರಿ ಧಾಮಿ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಪುಟ 2

## ಮಹಿಳಾ ಸ್ನೇಹಿ ಗ್ರಾಪಂ ಅಭಿಯಾನ

**ಬೆಂಗಳೂರು:** ಮಹಿಳಾ ಸಶಕ್ತೀಕರಣ ಹಾಗೂ ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗಾಗಿ ಅಂತರರಾಷ್ಟ್ರೀಯ ಮಹಿಳಾ ದಿನವಾದ 2025ರ ಮಾರ್ಚ್ 08ರಿಂದ 2025ರ ಜೂನ್ 30ರವರೆಗೆ ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ಮತ್ತು ಮಹಿಳಾ ಗ್ರಾಮ ಸಭೆಗಳನ್ನು ನಡೆಸಲು ಸೂಚಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಗ್ರಾಮಗಳ ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸಮಸ್ಯೆಗಳು ಮತ್ತು ಬೇಡಿಕೆಗಳನ್ನು ಮಂಡಿಸುವುದು ಬಹಳ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 3-ಹೆಚ್ ಅನ್ವಯ ಮಹಿಳೆಯರಿಗಾಗಿ ಗ್ರಾಮ ಸಭೆಗಳನ್ನು ಆಯೋಜಿಸಲು ಅವಕಾಶ ಕಲ್ಪಿಸಲಾಗಿದೆ. ಗ್ರಾಮ ಪಂಚಾಯತಿಗಳಲ್ಲಿ ಸ್ಥಳೀಯ ಮಹಿಳಾ ಸ್ವಸಹಾಯ ಹಾಗೂ ಸ್ತ್ರೀಶಕ್ತಿ ಸಂಘಗಳ ಸಹಭಾಗಿತ್ವದಲ್ಲಿ ಪೂರ್ವ ಸಿದ್ಧತೆಯೊಂದಿಗೆ ಮಹಿಳೆಯರಿಗಾಗಿ ವಿಶೇಷ ಕಾರ್ಯಕ್ರಮ, ಚಟುವಟಿಕೆಗಳನ್ನು ಆಯೋಜಿಸಿ, ಅರ್ಥಪೂರ್ಣವಾಗಿ ಮಹಿಳಾ ಗ್ರಾಮ ಸಭೆಗಳನ್ನು ನಡೆಸಬೇಕೆಂದು ಸಚಿವರು ಹೇಳಿದ್ದಾರಲ್ಲದೆ, ಮಹಿಳೆಯರಿಂದ ಬರುವ ಬೇಡಿಕೆ, ಸಮಸ್ಯೆ ಹಾಗೂ ಪ್ರಶ್ನೆಗಳಿಗೆ ಸಂಬಂಧಿಸಿದ ಇಲಾಖೆಗಳು ಸ್ಪಂದಿಸುವ ಮೂಲಕ ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು ಹೇಳಿದ್ದಾರೆ. ಪುಟ 2

## ಚಾಕು, ಚೂರಿ ತೋರಿಸಿ ವ್ಹೀಲಿಂಗ್

## 1342 ಪ್ರಕರಣಗಳು, 1046 ಜನರ ಬಂಧನ

**ಬೆಂಗಳೂರು:** ಅಪಾಯಕಾರಿ ವ್ಹೀಲಿಂಗ್ ಮಾಡಿ ಚಾಕು, ಚೂರಿ ತೋರಿಸಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದವರ ವಿರುದ್ಧ ಮುಲಾಜಿಲ್ಲದೆ ಪ್ರಕರಣ ದಾಖಲಿಸಿ ಬಂಧಿಸಲಾಗುತ್ತಿದೆ. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 1342 ಪ್ರಕರಣಗಳು ದಾಖಲಾಗಿದ್ದು, 1046 ಜನರನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಮಾಹಿತಿ ನೀಡಿದರು.



ವ್ಹೀಲಿಂಗ್ ಮಾಡುವುದಲ್ಲದೆ ಚಾಕು, ಚೂರಿ ಹಾಗೂ ಲಾಂಗ್ ಹಿಡಿದುಕೊಂಡು ಓಡಾಡಿ ಸಮಾಜದ ಸ್ವಾಸ್ಥ್ಯ ಕದಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ರಾಜ್ಯದೆಲ್ಲೆಡೆ ದಾಖಲಾದ ಒಟ್ಟು ವ್ಹೀಲಿಂಗ್ ಪ್ರಕರಣಗಳಲ್ಲಿ ಬೆಂಗಳೂರು ನಗರದಲ್ಲಿ 893 ಪ್ರಕರಣ ದಾಖಲಾಗಿದ್ದು, 788 ಮಂದಿಯನ್ನು ಬಂಧಿಸಲಾಗಿದೆ. ರಾಜ್ಯದ ಇತರೆಡೆ 449 ಪ್ರಕರಣ ದಾಖಲಾಗಿದ್ದು, 258 ಆರೋಪಿಗಳನ್ನು ಅರೆಸ್ಟ್ ಮಾಡಿದ್ದೇವೆ ಎಂದು ಪ್ರಶೋತ್ತರ ಪುಟ 2

# ಮೂಲ ಜನನ ಪ್ರಮಾಣ ಪತ್ರ ಹಿಂದಿರುಗಿಸಲು ಹೈಕೋರ್ಟ್ ಆದೇಶ

**ಬೆಂಗಳೂರು:** ಜನನ ಮತ್ತು ಮರಣ ಪ್ರಮಾಣ ಪತ್ರವನ್ನು ರದ್ದುಪಡಿಸುವಂತೆ ಎಲ್ಲ ಜನನ ಮತ್ತು ಮರಣ ನೋಂದಣಾಧಿಕಾರಿಗಳಿಗೆ ಸೂಚನೆ ನೀಡುವಂತೆ ಪೌರಾಡಳಿತ ನಿರ್ದೇಶಕರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಇ-ಜನ್ಮ ಪೋರ್ಟಲ್‌ಗೆ ಅಗತ್ಯ ನವೀಕರಣಗಳೊಂದಿಗೆ ಹಿಂದಿನ ಪ್ರಮಾಣಪತ್ರವನ್ನು ರದ್ದುಪಡಿಸಲಾಗಿದೆ ಎಂದು ಹೇಳುವ ಅನುಮೋದನೆಯನ್ನು ನೀಡಬೇಕು ಎಂದು ನ್ಯಾಯಾಲಯ ತೀರ್ಪು ನೀಡಿತು.

ವಿಜಯನಗರ ಜಿಲ್ಲೆಯ ಹೊಸಪೇಟೆಯ ಎಂ.ಜಿ.ನಗರದ ನಿವಾಸಿ ಸಯೀದಾ ಅಫೀಫಾ ಐಮೆನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರು ವಿಚಾರಣೆ ನಡೆಸಿದರು. ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಪಟ್ಟಣ ಪಂಚಾಯಿತಿ ಕಚೇರಿಯ ಜನನ ಮತ್ತು ಮರಣ ವಿಭಾಗದ ಮುಖ್ಯಾಧಿಕಾರಿ ಮತ್ತು ರಿಜಿಸ್ಟ್ರಾರ್ ಅವರಿಗೆ 1993ರ ಮೇ 13ರಂದು ತಪ್ಪಾದ ಜನನ ಪ್ರಮಾಣ ಪತ್ರವನ್ನು ರದ್ದುಪಡಿಸುವಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರು ಮಾರ್ಚ್ 15, 1993 ರಂದು ಜನಿಸಿದರು. ಆದಾಗ್ಯೂ, ದೋಷದಿಂದಾಗಿ,




ಜನನ ಪ್ರಮಾಣಪತ್ರವನ್ನು ಜನ್ಮ ದಿನಾಂಕವನ್ನು 15 ಏಪ್ರಿಲ್ 1993 ಎಂದು ದಾಖಲಿಸುವುದರೊಂದಿಗೆ ನೀಡಲಾಯಿತು.

ತಪ್ಪಿನ ಅರಿವಿಲ್ಲದೆ, ಅರ್ಜಿದಾರರು ಶಿಕ್ಷಣ ದಾಖಲೆಗಳು ಸೇರಿದಂತೆ ಇತರ ಎಲ್ಲಾ ಅಧಿಕೃತ ಉದ್ದೇಶಗಳಿಗಾಗಿ ಸರಿಯಾದ ಹುಟ್ಟಿದ ದಿನಾಂಕವನ್ನು ಒದಗಿಸಿದ್ದರು. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಕಾಲೇಜು, ಚಾಲನಾ ಪರವಾನಗಿ ಮತ್ತು ಮತದಾರರ ಗುರುತಿನ ಚೀಟಿ ಎಲ್ಲವೂ 15 ಮಾರ್ಚ್ 1993 ಅನ್ನು ಜನ್ಮ ದಿನಾಂಕವೆಂದು ಪ್ರತಿಬಿಂಬಿಸುತ್ತವೆ.

ಜನನ ಮತ್ತು ಮರಣ ನೋಂದಣಿ ಕಾಯ್ದೆಯ ಸೆಕ್ಷನ್ 13 (3) ರ ಅಡಿಯಲ್ಲಿ ಅರ್ಜಿದಾರರು ಹೊಸಪೇಟೆಯ ವಿಚಾರಣಾ ನ್ಯಾಯಾಲಯವನ್ನು ಸಂಪರ್ಕಿಸಿದರು. ಲೋಕ ಅದಾಲತ್ ಉಲ್ಲೇಖದ ಮೂಲಕ, ಸರಿಯಾದ ಜನ್ಮ ದಿನಾಂಕದೊಂದಿಗೆ ಹೊಸ ಜನನ ಪ್ರಮಾಣಪತ್ರವನ್ನು ನೀಡುವಂತೆ ನಿರ್ದೇಶಿಸಿ ಆದೇಶವನ್ನು ಹೊರಡಿಸಲಾಯಿತು, ನಂತರ ಅದನ್ನು ಹೊರಡಿಸಲಾಯಿತು. ಆದಾಗ್ಯೂ, ಅರ್ಜಿದಾರರು ನಂತರ ಪಾಸ್ಪೋರ್ಟ್‌ನಲ್ಲಿ ಹುಟ್ಟಿದ ದಿನಾಂಕವನ್ನು ತಿದ್ದುಪಡಿ ಮಾಡಲು ಅರ್ಜಿ ಸಲ್ಲಿಸಿದಾಗ, ಪಾಸ್ಪೋರ್ಟ್ ಪ್ರಾಧಿಕಾರವು ಎರಡು ಜನನ ಪ್ರಮಾಣಪತ್ರಗಳ ಅಸ್ತಿತ್ವದಿಂದಾಗಿ ಸ್ಪಷ್ಟೀಕರಣವನ್ನು ಕೋರಿತು. 1993ರ ಏಪ್ರಿಲ್ 15ರ ತಪ್ಪಾದ ದಿನಾಂಕದೊಂದಿಗೆ ಹಿಂದಿನ ಪ್ರಮಾಣಪತ್ರದ ಆಧಾರದ ಮೇಲೆ ಪಾಸ್ಪೋರ್ಟ್ ನೀಡಿದ್ದರಿಂದ, ವ್ಯತ್ಯಾಸವನ್ನು ಸರಿಪಡಿಸುವ ಅಗತ್ಯವಿತ್ತು.

ನಂತರ ಅರ್ಜಿದಾರರು ಸ್ಪಷ್ಟೀಕರಣ ಕೋರಿ ಜನನ ಮತ್ತು ಮರಣ ರಿಜಿಸ್ಟ್ರಾರ್ ಗೆ ಅರ್ಜಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ರಿಜಿಸ್ಟ್ರಾರ್ 5 ಡಿಸೆಂಬರ್ 2024 ರಂದು ಅನುಮೋದನೆಯನ್ನು ನೀಡಿದರು, ಪ್ರಾಧಿಕಾರವು ಸ್ಪಷ್ಟೀಕರಣವನ್ನು ನೀಡಲು ಸಾಧ್ಯವಿಲ್ಲ ಮತ್ತು ಅರ್ಜಿದಾರರು ಸೂಕ್ತ ನ್ಯಾಯಾಲಯದ ಆದೇಶವನ್ನು ಪಡೆಯಬೇಕಾಗಿದೆ ಎಂದು ಹೇಳಿದರು.

## ಹೈಕೋರ್ಟ್ ಆದೇಶವನ್ನೇ ನಕಲಿ ಮಾಡಿ ವಂಚನೆ

**ಬೆಂಗಳೂರು:** ಕರ್ನಾಟಕ ಹೈಕೋರ್ಟ್ ಆದೇಶವನ್ನೇ ನಕಲಿ ಮಾಡಿ ಲಕ್ಷಾಂತರ ರೂ ಹಣ ವಂಚನೆ ಮಾಡಿದ ಆರೋಪದ ಮೇಲೆ ಇಬ್ಬರು ಆರೋಪಿಗಳನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುಣಿಗಲ್ ಮೂಲದ ವಿಜೇತ್, ಲೋಹಿತ್ ಬಂಧಿತ ಆರೋಪಿಗಳು. ಆರೋಪಿಗಳು ಹೈಕೋರ್ಟ್ ನೀಡುವ ಆದೇಶದ ಪ್ರತಿಯನ್ನೇ ಹೋಲುವ ನಕಲಿ ಆದೇಶ ಪ್ರತಿ ತಯಾರಿಸುತ್ತಿದ್ದರು. ಅದನ್ನು ಬಳಸಿಕೊಂಡು ಅನೇಕರನ್ನು ವಂಚಿಸಿದ್ದರು ಎನ್ನಲಾಗಿದೆ. ಆರೋಪಿ ವಿಜೇತ್, ಜಾರಿ ನಿರ್ದೇಶನಾಲಯ (ಇಡಿ) ಹಣ ಮುಟ್ಟುಗೋಲು ಹಾಕಿಕೊಂಡ ಪ್ರಕರಣವೊಂದಕ್ಕೆ ಸಂಬಂಧಿಸಿದ್ದು ಎಂಬ ನಂಬಿಕೆ ಬರುವ ರೀತಿಯಲ್ಲಿ ಹೈಕೋರ್ಟ್ ಆದೇಶವನ್ನೇ ಹೋಲುವಂತೆ ನಕಲಿ ಆದೇಶ ಪ್ರತಿ ತಯಾರಿಸಿದ್ದನು.

ಪ್ರಕರಣವೊಂದರಲ್ಲಿ ಜಾರಿ ನಿರ್ದೇಶನಾಲಯ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಮುಟ್ಟುಗೋಲು ಹಾಕಿಕೊಂಡಿದೆ. ಆದರೆ, ಹೈಕೋರ್ಟ್ ಈ ತಮ್ಮ ಪರ ತೀರ್ಪು ನೀಡಿದ್ದು, ಸೀಜ್ ಮಾಡಿದ ಹಣವನ್ನು ಜಾರಿ ನಿರ್ದೇಶನಾಲಯ ನಮಗೆ ನೀಡಬೇಕಿದೆ.

ಆ ಹಣವನ್ನು ಬಿಡಿಸಿಕೊಳ್ಳಲು ಸ್ವಲ್ಪ ಹಣ ಬೇಕಾಗಿದೆ. ಮೊತ್ತ ಕೈಸೇರಿದ ಕೂಡಲೇ ಹಿಂದಿರುಗಿಸುವುದಾಗಿ ಆರೋಪಿಗಳು ಜನರನ್ನು ವಂಚಿಸುತ್ತಿದ್ದರು. ಹೈಕೋರ್ಟ್ ಆದೇಶವನ್ನೇ ಹೋಲುವ ನಕಲಿ ಪ್ರತಿ ತಯಾರಿಸಿ ಜನರಲ್ಲಿ ನಂಬಿಕೆ ಬರುವಂತೆ ಮಾಡಿ ಹಣ ಪೀಕುತ್ತಿದ್ದರು ಎನ್ನಲಾಗಿದೆ.

ಆರೋಪಿಗಳು ಇದನ್ನು ನಂಬಿ ಹಣ ಕೊಟ್ಟ ಮೂವರಿಗೆ ವಂಚನೆ ಮಾಡಿದ್ದರು. ಸುಮಾರು 70 ಲಕ್ಷ ರೂಪಾಯಿಗೂ ಹೆಚ್ಚಿನ ಹಣ ಪಡೆದು ವಂಚಿಸಿದ್ದರು ಎಂದು ಹೇಳಲಾಗುತ್ತಿದೆ.

# ಬೆಂಕಿ ಬಿಸಿಲು: ಬೇಸಿಗೆ ರಜೆ ಘೋಷಣೆ ಸಾಧ್ಯತೆ..?

**ಬೆಂಗಳೂರು:** ರಾಜ್ಯದಲ್ಲಿ ಶಾಲಾ ಮಕ್ಕಳಿಗೆ ಪರೀಕ್ಷೆಗಳು ಆರಂಭವಾಗಿರುವ ಬೆನ್ನಲ್ಲೇ, ತಾಪಮಾನ ದಿನದಿಂದ ದಿನಕ್ಕೆ ಏರಿಕೆ ಆಗುತ್ತಲಿದ್ದು, ಈ ಹಿನ್ನೆಲೆ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಪರೀಕ್ಷೆಗಳನ್ನು ಬೇಗ ಮುಗಿಸಿ ಶಾಲೆಗಳಿಗೆ ಅವಧಿಗೂ ಮುನ್ನ ಬೇಸಿಗೆ ರಜೆ ಘೋಷಣೆ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಈಗಾಗಲೇ ಹವಾಮಾನ ಇಲಾಖೆ ಕೂಡ ಬಹುತೇಕ ಜಿಲ್ಲೆಗಳಲ್ಲಿ ಬೇಸಿಗೆಗೂ ಮುನ್ನ ಬಹುತೇಕ ಜಿಲ್ಲೆಗಳಲ್ಲಿ ತಾಪಮಾನದಲ್ಲಿ ಏರಿಕೆಯಾಗುತ್ತಿದೆ ಎಂದು ಎಚ್ಚರಿಕೆ ಸಂದೇಶವನ್ನು ರವಾನಿಸಿದೆ. ಈ ಹಿನ್ನೆಲೆ ಪೋಷಕರು ತಮ್ಮ ಮಕ್ಕಳಿಗೆ ಬೇಸಿಗೆ ರಜೆ ಯಾವಾಗ ಸಿಗುತ್ತದೆ ಎಂದು ಕಾಯುತ್ತಿದ್ದಾರೆ.

ಸಾಮಾನ್ಯವಾಗಿ ರಾಜ್ಯದಲ್ಲಿ ಏಪ್ರಿಲ್‌ನಿಂದ ಶಾಲಾ ಮಕ್ಕಳಿಗೆ ಬೇಸಿಗೆ ರಜೆ ನೀಡಲಾಗುತ್ತದೆ. ಆದರೆ ಈ ಬಾರಿ ರಾಜ್ಯಾದ್ಯಂತ ಬೇಸಿಗೆಗೂ ಮುನ್ನ ತಾಪಮಾನ ಪ್ರಮಾಣ ಏರಿಕೆ ಆಗುತ್ತಲೇ ಇದೆ. ಆದ್ದರಿಂದ ಈ ಬಾರಿ ಅವಧಿಗೂ ಮುನ್ನ ಬೇಸಿಗೆ ರಜೆ ಘೋಷಣೆ ಮಾಡುವ ಸಾಧ್ಯತೆಯಿದೆ. ಮಾರ್ಚ್‌ನಲ್ಲಿಯೇ ಶಾಲಾ ಮಕ್ಕಳಿಗೆ ಬೇಗ ಪರೀಕ್ಷೆಗಳನ್ನು ಮುಗಿಸಿ ಬಳಿಕ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೇಗ ಅಂದ್ರೆ ಏಪ್ರಿಲ್‌ಗೂ ಮುನ್ನ ರಜೆ ಘೋಷಿಸುವ ಸಾಧ್ಯತೆಯಿದೆ.

ಕಳೆದ ಬಾರಿಗೆ ಹೋಲಿಕೆ ಮಾಡಿದ್ರೆ ಈ ಬಾರಿ 2025ರಲ್ಲಿ ಬೇಸಿಗೆಗೂ ಮುನ್ನ ರಣಭೀಕರ ಬಿಸಿಲು ಮುಂದುವರೆದಿದೆ. ಪರಿಣಾಮ ಜನರು ಮನೆಯಿಂದ ಹೊರಬರಲು ಹೆದರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯಲ್ಲೂ ಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪೋಷಕರು ಗಮನ ಹರಿಸಿ ಬೇಸಿಗೆ ರಜೆ ಅವವಧಿಗೂ ಮುನ್ನ ಘೋಷಣೆ ಮಾಡುವ ನಿರೀಕ್ಷೆಯಲ್ಲಿದ್ದಾರೆ.



ರಾಜ್ಯದಲ್ಲಿ ಹೆಚ್ಚುತ್ತಿರುವ ತಾಪಮಾನದಲ್ಲಿ ಮುಂಬರುವ ದಿನಗಳಲ್ಲಿ ಬಿಸಿ ಗಾಳಿ ಬೀಸುವ ಸಾಧ್ಯತೆ ಇದೆ. ಹಾಗಾಗಿ, ಮಕ್ಕಳು ಸೇರಿದಂತೆ ಜನ-ಜಾನುವಾರುಗಳನ್ನು ಬಿಸಿಲಿನಿಂದ ರಕ್ಷಿಸಿಕೊಳ್ಳಲು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಟ್ಟು ನಿಟ್ಟಿನ ಸೂಚನೆ ನೀಡಿದೆ.

ಮಧ್ಯಾಹ್ನ 12 ರಿಂದ 3 ರವರೆಗೆ ಬಿಸಿಲಿನಲ್ಲಿ ಹೋಗುವುದನ್ನು ತಪ್ಪಿಸಬೇಕು. ಹೆಚ್ಚಾಗಿ ಬಾಯಾರಿಕೆ ಇಲ್ಲದಿದ್ದರೂ ಸಹ ಸಾಕಷ್ಟು ನೀರು ಕುಡಿಯಬೇಕು. ಸಾಧ್ಯವಾದಷ್ಟು ಹಗುರವಾದ, ತಿಳಿ ಬಣ್ಣದ, ಸಡಿಲವಾದ ಮತ್ತು ರಂಧ್ರವಿರುವ ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಿಸಿಲಿನಲ್ಲಿ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಛತ್ರಿ, ಟೋಪಿ, ಬೂಟುಗಳು ಅಥವಾ ಚಪ್ಪಲಿ ಬಳಸಬೇಕು. ತಾಪಮಾನ

ಹೆಚ್ಚಿರುವಾಗ ಶ್ರಮದಾಯಕ ಚಟುವಟಿಕೆಗಳನ್ನು, ಮಧ್ಯಾಹ್ನ 12 ರಿಂದ 3ರವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಬೇಕು ಎಂದು ಸಲಹೆ ನೀಡಿದೆ. ದೇಹವನ್ನು ನಿರ್ಜಲೀಕರಣಗೊಳಿಸುವ ಆಲೋಹಾಲ್, ಚಹಾ, ಕಾಫಿ ಬೇಡ. ಹೊರಗೆ ಕೆಲಸ ಮಾಡುತ್ತಿದ್ದರೆ, ರಕ್ಷಣಾತ್ಮಕ ವಿಧಾನಗಳನ್ನು ಅನುಸರಿಸಬೇಕು. ನಿಲ್ಲಿಸಿದ ವಾಹನಗಳಲ್ಲಿ ಮಕ್ಕಳನ್ನು ಅಥವಾ ಸಾಕುಪ್ರಾಣಿಗಳನ್ನು ಬಿಡಬಾರದು.

ಮೂರ್ಛೆ ಅಥವಾ ಅನಾರೋಗ್ಯ ಅನಿಸಿದರೆ, ತಕ್ಷಣ ವೈದ್ಯರನ್ನು ಭೇಟಿ ಮಾಡಬೇಕು. ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ತೋರಣಿ (ಅಕ್ಕಿ ನೀರು), ನಿಂಬೆ ನೀರು, ಮಜ್ಜಿಗೆ ಮತ್ತಿತರನ್ನು ಬಳಸಬೇಕು. ಇದು ದೇಹವನ್ನು ಮರು-ಜಲೀಕರಣ ಮಾಡಲು ಸಹಾಯ ಮಾಡುತ್ತದೆ. ಪ್ರಾಣಿಗಳನ್ನು ನೆರಳಿನಲ್ಲಿ ಇರಿಸಬೇಕು. ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಬೇಕು. ಮನೆಯನ್ನು ತಂಪಾಗಿ ಇರಿಸಿ, ಪರದೆಗಳು, ಶಟರ್ಗಳು ಅಥವಾ ಸನ್‌ಶೇಡ್‌ಗಳನ್ನು ಬಳಸಬೇಕು. ರಾತ್ರಿ ಕಿಟಕಿಗಳನ್ನು ತೆರೆಯಬೇಕು. ಫ್ಯಾನ್, ಒದ್ದೆ ಬಟ್ಟೆಗಳನ್ನು ಬಳಸಿ ಮತ್ತು ಆಗಾಗ ತಣ್ಣೀರಿನಲ್ಲಿ ಸ್ನಾನ ಮಾಡಬೇಕು.

ರೈತರು, ಪ್ರಯಾಣಿಕರು ಪ್ರಯಾಣಿಸುವಾಗ, ನಿಮ್ಮೊಂದಿಗೆ ನೀರನ್ನು ತೆಗೆದುಕೊಂಡು ಹೋಗಬೇಕು. ಸಾಧಾರಣ ತಾಪಮಾನ ಮತ್ತು ಶಾಖವು ಸಾಮಾನ್ಯ ಜನರಿಗೆ ಸಹಿಸಿಕೊಳ್ಳಬಲ್ಲದು. ಆದರೆ ಶಿಶುಗಳು, ವೃದ್ಧರು, ದೀರ್ಘಕಾಲದ ಕಾಯಿಲೆ ಇರುವ ಜನರನ್ನು ಶಾಖಕ್ಕೆ ಒಡ್ಡಿಕೊಳ್ಳುವುದನ್ನು ತಪ್ಪಿಸಿ. ಹಗುರವಾದ, ತಿಳಿ ಬಣ್ಣದ, ಸಡಿಲವಾದ, ಹತ್ತಿ ಬಟ್ಟೆಗಳನ್ನು ಧರಿಸಬೇಕು ಎಂದು ಇಲಾಖೆ ಸಲಹೆ ನೀಡಿದೆ.

ಸನ್‌ಸ್ಟ್ರೋಕ್ ಪೀಡಿತ ವ್ಯಕ್ತಿಯ ಚಿಕಿತ್ಸೆ ಕುರಿತು ಜಿಲ್ಲಾಡಳಿತ ಸಲಹೆ ನೀಡಿದೆ. ಇಂತಹ ವ್ಯಕ್ತಿಯನ್ನು ತಂಪಾದ ಸ್ಥಳದಲ್ಲಿ, ನೆರಳಿನ ಕೆಳಗೆ ಇರಿಸಿ. ಅವರನ್ನು ಒದ್ದೆ ಬಟ್ಟೆಯಿಂದ ಒರೆಸಿ, ಆಗಾಗ ದೇಹವನ್ನು ತೊಳೆಯಿರಿ. ತಲೆಯ ಮೇಲೆ ಸಾಮಾನ್ಯ ತಾಪಮಾನದ ನೀರನ್ನು ಸುರಿಯಿರಿ. ದೇಹದ ಉಷ್ಣತೆಯನ್ನು ಕಡಿಮೆ ಮಾಡುವುದು ಮುಖ್ಯ.

ವ್ಯಕ್ತಿಗೆ ಕುಡಿಯಲು ಅಥವಾ ನಿಂಬೆ ಶರಬತ್, ತೋರಣೆ ಅಥವಾ ದೇಹವನ್ನು ಪುನರ್ಜಲೀಕರಣಗೊಳಿಸಲು ಉಪಯುಕ್ತವಾದ ಯಾವುದನ್ನಾದರೂ ನೀಡಬೇಕು. ತಕ್ಷಣ ವ್ಯಕ್ತಿಯನ್ನು ಹತ್ತಿರದ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಬೇಕು. ರೋಗಿಗೆ ತಕ್ಷಣದ ಆಸ್ಪತ್ರೆಯ ಅಗತ್ಯವಿರುತ್ತದೆ, ಏಕೆಂದರೆ ಶಾಖದ ಹೊಡೆತಗಳು ಮಾರಣಾಂತಿಕವಾಗಬಹುದು. ಅಪಾಯದಲ್ಲಿರುವ ಜನರು ತಂಪಾದ ವಾತಾವರಣದಿಂದ ಬಿಸಿ ವಾತಾವರಣಕ್ಕೆ ಹೋಗಬೇಕು.

ಶಾಖದ ಅಲೆಯ ಸಮಯದಲ್ಲಿ ನಿಮ್ಮ ಕುಟುಂಬಕ್ಕೆ ಅಂತಹ ವ್ಯಕ್ತಿ ಭೇಟಿ ನೀಡುತ್ತಿರಬಹುದು. ದೇಹವು ಶಾಖಕ್ಕೆ ಒಗ್ಗಿಕೊಳ್ಳುವವರೆಗೆ ಅವರು ಒಂದು ವಾರದವರೆಗೆ ತೆರೆದ ಮೈದಾನದಲ್ಲಿ ಚಲಿಸಬಾರದು ಮತ್ತು ಸಾಕಷ್ಟು ನೀರು ಕುಡಿಯಬೇಕು. ಶಾಖ ತರಂಗದ ಸಮಯದಲ್ಲಿ ಬಿಸಿ ವಾತಾವರಣಕ್ಕೆ ಕ್ರಮೇಣ ಒಡ್ಡಿಕೊಳ್ಳುವುದರಿಂದ ಒಗ್ಗಿಕೊಳ್ಳುವಿಕೆಯನ್ನು ಸಾಧಿಸಲಾಗುತ್ತದೆ ಎಂದು ಇಲಾಖೆಯ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

## ಸಿನಿಮಾ ಟಿಕೆಟ್ ಏಕರೂಪ ದರ ನಿಗದಿ

**ಬೆಂಗಳೂರು:** ರಾಜ್ಯ ಸರ್ಕಾರದಿಂದ ಸಿನಿಮಾ ಟಿಕೆಟ್ 'ಗೆ ಏಕರೂಪ ದರ ನಿಗದಿ ಮಾಡಲಾಗುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ಈ ಸಂಬಂಧ ವಿಧಾನಸಭೆ ಕಲಾಪದಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಗೃಹ ಸಚಿವ ಜಿ.ಪರಮೇಶ್ವರ್ 'ಚಿತ್ರಮಂದಿರದ ಮಾಲೀಕರೇ ಟಿಕೆಟ್ ದರ ನಿಗದಿ ಮಾಡುವ ಪರಿಸ್ಥಿತಿ ಇದೆ. ಬೇಕಾಬಿಟ್ಟಿಯಾಗಿ ಟಿಕೆಟ್ ದರ ಫಿಕ್ಸ್ ಮಾಡಲಾಗುತ್ತಿದೆ. ಮಲ್ಟಿಪ್ಲೆಕ್ಸ್ ಗಳು ಬೇಕಾಬಿಟ್ಟಿ ವಸೂಲಿ ಮಾಡುತ್ತಿದೆ. ಕನ್ನಡ ಸಿನಿಮಾಗಳಿಗೆ 100, 200 ರೂ ಇದ್ದರೆ ಪರಭಾಷಾ ಸಿನಿಮಾದ ಟಿಕೆಟ್ ಗೆ 500 ,1000 ಇದೆ ಎಂದರು.

ಹಾಗೆಯೇ ಚಿತ್ರಮಂದಿರದಲ್ಲಿ ವಾಟರ್ ಬಾಟಲ್ ಸೇರಿ ಎಲ್ಲವನ್ನೂ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಸಿನಿಮಾದ ಟಿಕೆಟ್ ದರಗಿಂತ ಗ್ರಾಹಕರಿಗೆ ನೀರಿನ ಬಾಟಲ್, ತಿನಿಸುಗಳ ದರವೇ



ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಿನಿಮಾ ಟಿಕೆಟ್ ಗೆ ಏಕರೂಪ ದರ ನಿಗದಿ ಮಾಡಲು ಚಿಂತನೆ ನಡೆಸಿದ್ದೇವೆ ಎಂದು ಮಾಹಿತಿ ನೀಡಿದರು.

## ತಮಿಳುನಾಡು: ಸಚಿವರ ಮನೆ ಮೇಲೆ ಇಡಿ ದಾಳಿ

**ಚೆನ್ನೈ:** ತಮಿಳುನಾಡಿನಲ್ಲಿ ಮದ್ಯ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಲು ನಡೆಸಿರುವ ಅಕ್ರಮಗಳಿಗೆ ಸಂಬಂಧಿಸಿದಂತೆ ಸಚಿವ ಸೆಂಥಿಲ್ ಬಾಲಾಜಿ ಮತ್ತಿತರ ಮನೆಗಳ ಮೇಲೆ ಇಡಿ ದಾಳಿ ನಡೆಸಿದೆ.

ತಮಿಳುನಾಡು ರಾಜ್ಯ ಮದ್ಯ ಮಾರುಕಟ್ಟೆ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದ ಸಚಿವ ಸೆಂಥಿಲ್ ಬಾಲಾಜಿ ಮತ್ತು ಇತರರ ವಿರುದ್ಧ ಅಕ್ರಮ ಹಣ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಇಂದು ತಮಿಳುನಾಡಿನ ಹಲವು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಾಲಾಜಿ, ಕೆಲವು ಸರ್ಕಾರಿ ಗುತ್ತಿಗೆದಾರರು ಮತ್ತು ಇತರ ಸಂಸ್ಥೆಗಳು ಸೇರಿದಂತೆ ರಾಜ್ಯದ ಸುಮಾರು 10 ಸ್ಥಳಗಳಲ್ಲಿ ದಾಳಿ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮದಲ್ಲಿ (ಟಿಎಎಸ್‌ಎಂಎಸಿ) ನಡೆದಿದೆ ಎನ್ನಲಾದ ಅಕ್ರಮಗಳಿಗೆ




ತನಿಖೆ ಸಂಬಂಧಿಸಿದಂತೆ ಈ ದಾಳಿ ನಡೆಸಲಾಗಿದೆ.

ರಾಜ್ಯ ಸಾರಿಗೆ ಇಲಾಖೆಯಲ್ಲಿ ಉದ್ಯೋಗಕ್ಕಾಗಿ ನಗದು ಹಗರಣಲಿಕ್ಕೆ ಸಂಬಂಧಿಸಿದ ಈ ಹಿಂದಿನ ಮನಿ ಲಾಂಡರಿಂಗ್ ತನಿಖೆಯಲ್ಲಿ ತಮಿಳುನಾಡು ವಿದ್ಯುತ್ ಸಚಿವರೂ ಆಗಿರುವ ಡಿಎಂಕೆ ನಾಯಕನ ಪಾತ್ರದ ಬಗ್ಗೆ ಇಡಿ ತನಿಖೆ ನಡೆಸುತ್ತಿದೆ. ಈ ಪ್ರಕರಣದಲ್ಲಿ ಅವರು ಫೆಡರಲ್ ಏಜೆನ್ಸಿ ಯಿಂದ ಬಂಧಿಸಲ್ಪಟ್ಟಿದ್ದಾರೆ ಮತ್ತು ಈಗ ಜಾಮೀನಿನ ಮೇಲೆ ಹೊರಗಿದ್ದಾರೆ.

ಮೊದಲ ಪುಟದಿಂದ

### ಶ್ವಾನಗಳ ಬಳಕೆ

ಫೆ.22ರಂದು ಶ್ರೀಶೈಲಂ ಎಡ ದಂಡೆ ಕಾಲುವೆ ಸುರಂಗ ಕುಸಿಯಿತು. 8 ಕಾರ್ಮಿಕರು ಸುರಂಗದಲ್ಲಿ ಸಂಕಷ್ಟದಲ್ಲಿ ಸಿಲುಕಿದ್ದಾರೆ. ರಕ್ಷಣಾ ಕಾರ್ಯದಲ್ಲಿ ಎನ್‌ಡಿಆರ್‌ಎಫ್, ಭಾರತೀಯ ಸೇನೆ, ನೌಕಾ ದಳ ಹಾಗೂ ಇತರೆ ಸಂಸ್ಥೆಗಳು ಕೈಜೋಡಿಸಿವೆ.

ವಾಟರ್ ಜೆಟ್‌ಗಳ ಬಳಕೆ: ಎಸ್‌ಎಲ್‌ಬಿಸಿ ಟನಲ್‌ನ ಕೊನೆಯ 300 ಮೀಟರ್‌ನಲ್ಲಿ ಶೇಖರಣೆಯಾಗಿರುವ ಮಣ್ಣನ್ನು ಹೊರತೆಗೆಯಲು ವಾಟರ್ ಜೆಟ್‌ಗಳನ್ನು ಬಳಸಲಾಗಿದೆ. ಕಳೆದ 12 ದಿನಗಳಿಂದ ಟನಲ್‌ನಲ್ಲಿ ನಿರಂತರವಾಗಿ ರಕ್ಷಣಾ ಕಾರ್ಯ ನಡೆಯುತ್ತಿದೆ. ಆದರೆ, ಯಾವುದೇ ಸಕಾರಾತ್ಮಕ ಫಲಿತಾಂಶ ಕಂಡುಬಂದಿಲ್ಲ. ಇದೀಗ ರಕ್ಷಣಾ ಕಾರ್ಯದ ಭಾಗವಾಗಿ ವಾಟರ್ ಜೆಟ್‌ಗಳನ್ನು ಬಳಸಲಾಗುತ್ತಿದೆ. ಮಣ್ಣುಸಹಿತ ನೀರನ್ನು ಪಂಪ್ ಮಾಡಿ ಹೊರಹಾಕಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

### 7 ಗಂಟೆ ವಿದ್ಯುತ್ ಪೂರೈಕೆ

ಬ್ಯಾಂಕ್‌ನ್ನು ಮಾಡಲಾಗಿದೆ. ದುರಸ್ತಿ ಕಾರ್ಯಾಗಾರವೂ ಇಲ್ಲ ಎಲ್ಲೂ ಟಿಸಿಗಳ ಸಮಸ್ಯೆ ಇಲ್ಲ ಎಂದು ಅವರು ಹೇಳಿದರು.ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪರಿವರ್ತಕಗಳು ಸುಟ್ಟು ಹೋಗುವುದು ಮತ್ತಿತರ ಸಮಸ್ಯೆಗಳಿಗೆ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮ ಮುಗಿದ ನಂತರ ಪರಿಹಾರ ಸಿಗುತ್ತದೆ ಎಂದು ಅವರು ಹೇಳಿದರು ರಾಜ್ಯದಲ್ಲಿ ಒಟ್ಟು ನೀರಾವರಿ ಪಂಪ್‌ಸೆಟ್‌ಗಳ ಸಕ್ರಮಗಳಿಗೆ 4.5 ಲಕ್ಷ ಅರ್ಜಿಗಳು ಬಂದಿದ್ದು, ಈ ಪೈಕಿ 2.5 ಲಕ್ಷ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ. ಇನ್ನೊಂದು ವರ್ಷದಲ್ಲಿ ಎಲ್ಲ ನೀರಾವರಿ ಪಂಪ್‌ಸೆಟ್‌ಗಳ ಅಕ್ರಮ ಸಕ್ರಮ ಕಾರ್ಯಕ್ರಮ ಪೂರ್ಣಗೊಳ್ಳಲಿದೆ ಎಂದು ಸಚಿವ ಜಾರ್ಜ್ ಹೇಳಿದರು.

### ಭ್ರಷ್ಟರು ಲೋಕಾ ಬಲೆಗೆ

ಕಡೆಗಳಲ್ಲಿ ಏಕಕಾಲಕ್ಕೆ ದಾಳಿ ಮಾಡಿ ಪರಿಶೀಲನೆ ಮಾಡಲಾಗಿದೆ. ಬೆಂಗಳೂರಿನ ಡಿಪಿಎಆರ್‌ಚೀಫ್ ಇಂಜಿನಿಯರ್ ಟಿ.ಡಿ.ನಂಜುಡಪ್ಪ, ಬಿಬಿಎಂಪಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಹೆಚ್.ಬಿ.ಕಲ್ಲೇಶಪ್ಪ ಮನೆಗಳ ಮೇಲೆ ದಾಳಿ ನಡೆದಿದ್ದು, ಇವರಂತೂ ಲೆಕ್ಕವೇ ಇಲ್ಲದಷ್ಟು ಆಸ್ತಿ ಗಳಿಸಿರುವುದು ಪತ್ತೆಯಾಗಿದೆ.

ಕೋಲಾರದಲ್ಲಿ ಬೆಸ್ಕಾಂ ಎಇಇ ಜಿ.ನಾಗರಾಜ್ ಮನೆ ಹಾಗೂ ಅವರಿಗೆ ಸೇರಿದ ಕಚೇರಿಗಳ ಮೇಲೆ ದಾಳಿ ನಡೆದಿದೆ. ನಾಗರಾಜ್ ಪ್ರಸ್ತುತ ಬೆಂಗಳೂರು ರಾಜಾಜಿನಗರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾಗರಾಜ್ ಅವರ ನಿವಾಸ, ಕೆ.ಆರ್.ಪುರಂ ಬಳಿಯ ಪ್ರಿಯದರ್ಶಿನಿ ಬಡಾವಣೆಯಲ್ಲಿನ ಮನೆ, ರಾಜಾಜಿನಗರ ಬೆಸ್ಕಾಂ ಕಚೇರಿ, ಅವರ ಸಂಬಂಧಿಕರೊಬ್ಬರ ಮನೆ ಮೇಲೆ ದಾಳಿ ನಡೆದಿದ್ದು, ನಾಗರಾಜ್ ಕೂಡ ಭಾರೀ ಕುಳವೇ ಆಗಿದ್ದಾನೆ.

ನಾಗರಾಜ್ ಮೂಲತಃ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಮಲೇ ಮಹದೇಶ್ವರ ಬೆಟ್ಟದವರು. ಲೋಕಾಯುಕ್ತ ದಾಳಿ ವೇಳೆ ಕೋಟ್ಯಾಂತರ ರೂಪಾಯಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ನಾಗರಾಜ್ ಕೊಳ್ಳೇಗಾಲ ಬಳಿ 6 ಎಕರೆ ಜಮೀನು, ಬೆಂಗಳೂರಿನಲ್ಲಿ ಒಂದು ಮನೆ, ಎರಡು ನಿವೇಶನಗಳು, ಕೋಲಾರ ತಾಲ್ಲೂಕು ನರಸಾಪುರ ಬಳಿ ಭೂಮಿ ಹೊಂದಿರುವುದು ಗೊತ್ತಾಗಿದೆ.

ಬಾಗಲಕೋಟೆಯಲ್ಲಿ ಪಂಚಾಯತ್ ರಾಜ್ ಇಲಾಖೆ ಅಕೌಂಟೆಂಟ್ ಮಲ್ಲೇಶ್ ಅವರ ಬಾಗಲಕೋಟೆ ಕಚೇರಿ, ಬೀಳಗಿ ತಾಲೂಕಿನ ತಳ್ಳಿಕೇರಿ ಮನೆಯಲ್ಲಿ ಲೋಕಾಯುಕ್ತ ಅಧಿಕಾರಿಗಳ ಪರಿಶೀಲನೆ ನಡೆಯುತ್ತಿದೆ. ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಆರೋಪ ಹಿನ್ನೆಲೆ ಲೋಕಾಯುಕ್ತ ಡಿವೈಎಸ್‌ಪಿ ಸಿದ್ದೇಶ್ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ದಾಖಲೆಗಳ ಪರಿಶೀಲನೆ ನಡೆಯುತ್ತಿದೆ.

ತುಮಕೂರಿನ ವೈದ್ಯ ಡಾ.ಜಗದೀಶ್ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ತಾವರೆಕೆರೆಯಲ್ಲಿರುವ ತಾವರೆಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯನಾಗಿರುವ ಜಗದೀಶ್ ಅವರು ತುಮಕೂರಿನ ಮಂಜುನಾಥ್ ನಗರದಲ್ಲಿ ಹೊಂದಿರುವ ಜಗದೀಶ್ ಕಾಂಪ್ಲೆಕ್ಸ್, ಶಿರಾ ತಾಲೂಕಿನ ಯಲ್ಲೆನಹಳ್ಳಿರುವ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆದಿದೆ. ಜಗದೀಶ್ ಪತ್ನಿ ರೂಪಾ, ಸೋದರ ಕಾಂತರಾಜ್ ಮನೆ ಮೇಲೂ ರೇಡ್ ಮಾಡಲಾಗಿದೆ. ಶಿರಾ ತಾಲೂಕಿನ ಬರಗೂರಿನಲ್ಲಿ ತಾಯಿಯ ಹೆಸರಿನಲ್ಲಿ ಆಸ್ತಿ ಮಾಡಿರುವುದು ದಾಳಿ ವೇಳೆ ಪತ್ತೆಯಾಗಿದೆ.

ಗುರುವಾರ ದಾಳಿಗೆ ಒಳಗಾಗಿರುವ ಎಲ್ಲಾ ಅಧಿಕಾರಿಗಳು ಬಹುತೇಕ ಹತ್ತಾರು ಕೋಟಿ ಲೂಟಿ ಮಾಡಿರುವ ಕುಳಗಳೇ ಆಗಿದ್ದು, ಅಧಿಕಾರಿಗಳಿಂದ ಪರಿಶೀಲನೆ ಮುಂದುವರಿದಿದೆ.

### ವೈರಿಗಳಂತೆ ನೋಡಬೇಡಿ

ಅದಕ್ಕೆ ಅಧಿಕ ಹಣ ಬೇಕಿಲ್ಲ. ಬಿಜೆಪಿಯವರು ಚೇರ್ ವ್ಯವಸ್ಥೆಗೆ ಕೇಳಿದ್ದರು ಎಂದರು.ಇನ್ನು ಸದ್ಯಕ್ಕೆ ನನ್ನದು ಯಾವುದೇ ಬೇಡಿಕೆ ಇಲ್ಲ. ನಾನು ಎಲ್ಲಿದ್ದರೂ ಖುಷಿಯಾಗಿಯೇ ಇರುತ್ತೇನೆ. ರಾಜಕೀಯ ಖುಷಿ ಅನಿಸದ ದಿನ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಸ್ಪೀಕರ್ ಯುಟಿ ಖಾದರ್ ತಿಳಿಸಿದರು.

### ಮಂದಿ ದಾರುಣ ಸಾವು

ಅವರ ಪತ್ನಿ ಪೋಷಿ ದೇವಿ (55) ಮತ್ತು ಅವರ ಮಗ ದುಷ್ಯಂತ್ (24), ಕಲುರಾಮ್ (40), ಅವರ ಮಗ ಯಶ್‌ರಾಮ್ (4) ಎಂದು ಗುರುತಿಸಲಾಗಿದೆ. ಮತ್ತೊಬ್ಬ ಮಹಿಳೆ ಜಾಲೋರ್ ನಿವಾಸಿ ದರಿಯಾ ದೇವಿ (35) ಅವರು ಸಿರೋಹಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರಿನಲ್ಲಿ ಒಟ್ಟು 7 ಜನರಿದ್ದರು, ಅದರಲ್ಲಿ 6 ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಸಿಒ ಗೋಮಾರಾಮ್, ಸದರ್ ಎಸ್‌ಹೆಚ್‌ಒ ದರ್ಶನ್ ಸಿಂಗ್, ಎಸ್‌ಐ ಗೋಕುಲ್‌ರಾಮ್, ಹೆಡ್ ಕಾನ್‌ಸ್ಟೇಬಲ್ ವಿನೋದ್ ಮತ್ತು ಇತರ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಮಾಹಿತಿ ಸಂಗ್ರಹಿಸಿದ್ದಾರೆ. ಜಾಲೋರ್ ನಿವಾಸಿಗಳು ಅಹಮದಾಬಾದ್‌ನಿಂದ ಜಾಲೋರ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು ಎಂದು ಅಧಿಕಾರಿ ಗೋಮಾರಾಮ್ ತಿಳಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ 27 ರ ಅಬುರೋಡ್ ಸದರ್ ಪೊಲೀಸ್ ಠಾಣೆಯ ಕಿವರ್ಲಿ ಬಳಿ ಕಾರು ಮುಂದೆ ಚಲಿಸುತ್ತಿದ್ದ ಟ್ರಾಲಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಕಾರಿನಲ್ಲಿದ್ದವರ ಪೈಕಿ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದರೆ, ಇಬ್ಬರು ಚಿಕಿತ್ಸೆಯ ಸಮಯದಲ್ಲಿ ಕೊನೆಯುಸಿರೆಳೆದಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಇನ್ನೋರ್ವ ಮಹಿಳೆಯನ್ನು ಆಂಬ್ಯುಲೆನ್ಸ್ ಸಹಾಯದಿಂದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ, ಅಲ್ಲಿ ಪ್ರಥಮ ಚಿಕಿತ್ಸೆಯ ನಂತರ ಅವರನ್ನು ಸಿರೋಹಿ ಆಸ್ಪತ್ರೆಗೆ ಸೇರಿಸಲಾಗಿದೆ. ಮೃತದೇಹಗಳನ್ನು ಶವಾಗಾರದಲ್ಲಿ ಇಡಲಾಗಿದ್ದು, ಕುಟುಂಬ ಸದಸ್ಯರಿಗೆ ಮಾಹಿತಿ ನೀಡಲಾಗಿದೆ ಎಂದು ಅವರು ಹೇಳಿದರು.

### ಜೀವಾವಧಿ ಶಿಕ್ಷೆ

ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಟಿ.ದಾಸರಹಳ್ಳಿಯಲ್ಲಿಯ ಪತಿಯಿಂದ ದೂರವಿದ್ದ ನವಾನೀತ(33) ಆಕೆಯ ಹಾಗೂ ಆಕೆಯ 2ನೇ ಮಗ ಸಾಯಿಸೃಜನ್‌ರನ್ನು ಕೊಲೆ ಮಾಡಿದ ಆರೋಪಿ ಶೇಖಪ್ಪ ಪೂಜಾರಿಗೆ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಸಿ.ಬಿ.ಸಂತೋಷ್ ಅವರು ಜೀವಾವಧಿ ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಕಳೆದ 2023 ರ ಸೆಪ್ಟೆಂಬರ್ 5 ರಂದು ಆರೋಪಿಯು ತಾನು ಇಷ್ಟಪಟ್ಟಿದ್ದ ಪತಿಯಿಂದ ದೂರವಿದ್ದ 2 ಮಕ್ಕಳ ತಾಯಿ ನವಾನೀತ ಬೇರೊಬ್ಬನೊಂದಿಗೆ ಸಲುಗೆಯಿಂದ ಇರುವುದನ್ನು ನೋಡಿ ಆಕ್ರೋಶಗೊಂಡು ನವನೀತಾ ಜೊತೆಗೆ 11 ವರ್ಷದ 2ನೇ ಮಗ ಸಾಯಿಸೃಜನ್‌ರನ್ನು ಕೊಲೆ ಮಾಡಿದ್ದು ಆರೋಪಿಯನ್ನು ಕಾರ್ಯಾಚರಣೆ ಕೈಗೊಂಡ ಬಾಗಲಗುಂಟೆ ಪೊಲೀಸ್ ಇನ್ಸ್‌ಪೆಕ್ಟರ್ ಹನುಮಂತರಾಜು. ಎಂ ಅವರು ಬಂಧಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದಲ್ಲಿ ಕೊಲೆಯಾದ ನವಾನೀತ ಹಾಗೂ ಆಕೆಯ 2ನೇ ಮಗ ಸಾಯಿಸೃಜನ್ ಟಿ.ದಾಸರಹಳ್ಳಿ ವ್ಯಾಪ್ತಿಯಲ್ಲಿ ಇಬ್ಬರೇ ವಾಸವಾಗಿದ್ದು 2017 ರಲ್ಲಿ ಮೃತೆ ತನ್ನ ಪತಿಯಿಂದ ಬೇರೆಯಾಗಿ ವಾಸ ಮಾಡುತ್ತಿದ್ದು ಜಾಲಹಳ್ಳಿ ವೆಸ್ಟ್ ಏರ್‌ಪೋರ್ಸ್‌ಗೆ ಸೇರಿದ ಕ್ವಾಂಟ್ರಸ್‌ನಲ್ಲಿ ಮನೆಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಆರೋಪಿ ಶೇಖಪ್ಪ ಪೂಜಾರಿ ಅಲ್ಲಿಯೇ ಎಲೆಕ್ಟ್ರೀಷಿಯನ್ ಕೆಲಸ ಮಾಡುತ್ತಿದ್ದು, ಒಬ್ಬರಿಗೊಬ್ಬರು ಪರಿಚಯವಾಗಿ ಆರೋಪಿ ಆಕೆಯ ಕಷ್ಟ ಸುಖಗಳನ್ನು ತಿಳಿದುಕೊಂಡು ಆಕೆಯೊಂದಿಗೆ ಪ್ರೀತಿಸ ತೊಡಗಿದ್ದು ಈ ವಿಚಾರ ಆಕೆಯ ಪತಿಗೆ ಗೊತ್ತಾಗಿ ಆತನು ಸಂಪೂರ್ಣವಾಗಿ ಆಕೆಯಿಂದ ದೂರವಿದ್ದನು.

ಇದೇ ಸಂದರ್ಭದಲ್ಲಿ ಆಕೆಗೆ ಕೆಲಸ ಕೊಡಿಸುವ ವಿಚಾರದಲ್ಲಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಪರಿಚಯವಾಗಿ ಆತನ ಜೊತೆ ಸುತ್ತಾಡುವುದನ್ನು ಆರೋಪಿ ಗಮನಿಸಿ 2023ರ ಸೆ. 4 ರಂದು ಮದ್ಯಾಹ್ನ 2 ಗಂಟೆ ಸುಮಾರಿನಲ್ಲಿ ನವನೀತಾ ಮನೆಗೆ ಹೋಗಿ ಹಾಲು ತರಲೆಂದು ಆಕೆಯ 2ನೇ ಮಗನನ್ನು ಅಂಗಡಿಗೆ ಕಳುಹಿಸಿ ಮೃತಳೊಂದಿಗೆ ಜಗಳ ತೆಗೆದು ತಾನು ತಂದಿದ್ದ ಚಾಕುವಿನಿಂದ ಆಕೆಯ ಕತ್ತನ್ನು ಸೀಳಿ ಕೊಲೆ ಮಾಡಿದ್ದು ಇದೇ ಸಂದರ್ಭದಲ್ಲಿ ಅಂಗಡಿ ಹೋಗಿದ್ದ ಮಗನು ಮನೆಗೆ ಬಂದಿದ್ದು ಕೊಲೆ ಮಾಡುವ ವಿಚಾರವನ್ನು ಮಗುವು ಪೊಲೀಸರಿಗೆ ತಿಳಿಸಬಹುದು ಎಂದು ಸದರಿ ಮಗುವನ್ನು ಸಹ ಉಸಿರುಗಟ್ಟಿಸಿ ಕೊಲೆ ಮಾಡಿ ಸ್ಥಳದಿಂದ ಪರಾರಿಯಾಗಿದ್ದನು. ಈ ವಿಚಾರವಾಗಿ ಮೃತೆಯು ತಾಯಿ ನೀಡಿದ ದೂರಿನ ಮೇರೆಗೆ ದೂರನ್ನು ಅಂದಿನ ತನಿಖಾಧಿಕಾರಿಗಳಾದ ಬಾಗಲಗುಂಟೆ ಪೊಲೀಸ್ ಇನ್ಸ್‌ಪೆಕ್ಟರ್ ಹನುಮಂತರಾಜು. ಎಂ ರವರು ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು, ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕ ಬಿ.ಹೆಚ್.ಭಾಸ್ಕರ್ ವಾದ ಮಂಡಿಸಿದ್ದರು.

### ಆರತಿ ನೆರವೇರಿಸಿದ ಮೋದಿ

ತಮ್ಮ ಭೇಟಿಯ ಭಾಗವಾಗಿ, ಗಂಗಾ ನದಿಯ ಚಳಿಗಾಲದ ಸ್ಥಾನವಾದ ಮುಖ್ಯಾದಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ, ಪಿಎಂ ಮೋದಿ ಹರ್ಸಿಲ್ ಕಣಿವೆಗೆ ತೆರಳಲಿದ್ದಾರೆ, ಅಲ್ಲಿ ಅವರು ಚಾರಣ ಮತ್ತು ಬೈಕ್ ರ್ಯಾಲಿಗೆ ಚಾಲನೆ ನೀಡಲಿದ್ದಾರೆ ಮತ್ತು ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

### 1046 ಜನರ ಬಂಧನ

ವೇಳೆಯಲ್ಲಿ ಬಿಜೆಪಿ ಸದಸ್ಯ ಎಸ್.ಎಲ್.ಬೋಜೇಗೌಡ ಪ್ರಶ್ನೆಗೆ ಸಚಿವರು ಮಾಹಿತಿ ನೀಡಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ. ಸಮಾಜದ ಶಾಂತಿ ಹಾಳು ಮಾಡುವ ಉದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಗಲಭೆ ಸೃಷ್ಟಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಗೂಂಡಾ ಕಾಯ್ದೆಯಡಿ ಮೂರು ವರ್ಷಗಳಲ್ಲಿ 139 ಗೂಂಡಾಗಳನ್ನು ಬಂಧಿಸಿ ಜೈಲಿಗಟ್ಟಲಾಗಿದೆ. ಪೊಲೀಸ್ ಠಾಣೆಗಳಲ್ಲಿ ಬೀಟ್ ವ್ಯವಸ್ಥೆ ಹೆಚ್ಚಿಸಲಾಗಿದೆ. ಹೊಯ್ಸಳ ಗಸ್ತು ಕರ್ತವ್ಯ ಬಲಪಡಿಸಲಾಗಿದೆ. ನಗರದ ಯಾವುದೇ ಸ್ಥಳದಿಂದ 112ಗೆ ಕರೆ ಮಾಡಿದರೆ ಸರಾಸರಿ 9 ನಿಮಿಷಗಳಲ್ಲಿ ಸ್ಥಳಕ್ಕೆ ಹೊಯ್ಸಳ ಬರುವ ವ್ಯವಸ್ಥೆ ಮಾಡಲಾಗಿದೆ ಎಂದರು. ಬೆಂಗಳೂರು ನಗರ ಸುರಕ್ಷತೆ ದೃಷ್ಟಿಯಿಂದ 1,640 ಕಡೆಗಳಲ್ಲಿ 7,500 ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದೆ. ನಗರದ ಪ್ರಮುಖ ಜಂಕ್ಷನ್‌ಗಳಲ್ಲಿ ಎಐ ಕ್ಯಾಮರಾ ಹಾಕಲಾಗಿದೆ. ತಂತ್ರಜ್ಞಾನ ಸದ್ಬಳಕೆ ಮಾಡಿಕೊಂಡು ಆರೋಪಿಗಳ ಹೆಡೆಮುರಿ ಕಟ್ಟುವ ಕೆಲಸ ಮಾಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಹತ್ಯೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿವೆ ಎಂದು ಅಂಕಿ-ಅಂಶ ಸಮೇತ ವಿವರಿಸಿದರು. ಬೆಂಗಳೂರು ಮಾತ್ರವಲ್ಲದೆ ರಾಜ್ಯದಲ್ಲಿ ಸೈಬರ್ ಅಪರಾಧಗಳು ದಿನೇ ದಿನೆ ಹೆಚ್ಚಾಗುತ್ತಿವೆ. ದಿನನಿತ್ಯ ಕೋಟ್ಯಂತರ ರೂಪಾಯಿ ಹಣವನ್ನ ಜನರು ಕಳೆದುಕೊಳ್ಳುತ್ತಿದ್ದಾರೆ. 2022ರಲ್ಲಿ 10,575 ಸೈಬರ್ ಪ್ರಕರಣಗಳು ದಾಖಲಾದರೆ, 2024ರ ಅಂತ್ಯಕ್ಕೆ 21,984 ಪ್ರಕರಣಗಳು ದಾಖಲಾಗಿವೆ. ಸೈಬರ್ ವಂಚನೆ ನಿಯಂತ್ರಣಕ್ಕಾಗಿ ಮೊದಲ ಬಾರಿಗೆ ಪ್ರತ್ಯೇಕ ಡಿಜಿಪಿ ಹುದ್ದೆ ಸೃಷ್ಟಿಸಲಾಗಿದೆ. ಇವರ ನೇತೃತ್ವದಲ್ಲಿ ಓರ್ವ ಐಜಿಪಿ, ಏಳು ಮಂದಿ ಎಸ್ಪಿ ಸೇರಿ ಇನ್ನಿತರ ಅಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

### ಗೃಹ ಸಚಿವ ಅಮಿತ್ ಶಾ

ಸದ್ಯದ ಮಟ್ಟಿಗೆ ರಾಮುಲು ರಾಜ್ಯ ಬಿಜೆಪಿ ನಾಯಕರಿಂದ ಅಂತರ ಕಾಯ್ದುಕೊಂಡಿದ್ದಾರೆ. ಕೋರ್ ಕಮಿಟಿಯಲ್ಲಾದ ಅಪಮಾನದ ಬಳಿಕ ಪಕ್ಷದ ನಾಯಕರೊಂದಿಗೆ ಅಂತರ ಕಾಯ್ದುಕೊಂಡಿದ್ದಾರೆ. ಶಾ ಅವರನ್ನು ಒಂದು ವೇಳೆ ನಾಳೆ ಭೇಟಿಯಾದರೆ ನಂತರ ಎಲ್ಲವೂ ಸರಿ ಹೋಗಲಿದೆಯೇ ಎಂಬುದನ್ನು ಕಾದುನೋಡಬೇಕಿದೆ.

### ಮಹಿಳಾ ಸ್ನೇಹಿ ಗ್ರಾಮ ಅಭಿಯಾನ

ಮಹಿಳಾ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ ನಡೆಸುವ ಹಿನ್ನಲೆಯಲ್ಲಿ ಪೂರ್ವಭಾವಿಯಾಗಿ ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದ ಉಪ ಸಮಿತಿಗಳ ಸಭೆಗಳನ್ನು ನಡೆಸಲು ಸೂಚಿಸಲಾಗಿದೆ, ಪ್ರತಿ ಗ್ರಾಮದ ಮಹಿಳೆಯರ ಅಂಕಿ-ಸಂಖ್ಯೆಯ ವಿವರಗಳನ್ನು ಸಂಗ್ರಹಿಸಿ ಮಹಿಳಾ ಗ್ರಾಮಸಭೆಯಲ್ಲಿ ಮಂಡಿಸಬೇಕು ಗ್ರಾಮಗಳಲ್ಲಿನ ಎಲ್ಲಾ ಸ್ವಸಹಾಯ ಸ್ತ್ರೀ ಶಕ್ತಿ ಸಂಘಗಳ ಸದಸ್ಯರು, ಸ್ವ-ಸಹಾಯ ಸಂಘಗಳ ಎಲ್ಲಾ ಸದಸ್ಯರು ಮಹಿಳಾ ಗ್ರಾಮ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಖಾತರಿ ಪಡಿಸಿಕೊಳ್ಳಬೇಕು ಎಂದು ನಿರ್ದೇಶಿಸಿದ್ದಾರೆ. ಮಹಿಳಾಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನದ 16 ವಾರಗಳ ಅವಧಿಯಲ್ಲಿ ವಾರಕ್ಕೊಂದರಂತೆ ಸಾಂಸ್ಕೃತಿಕ, ಮನರಂಜನೆ, ಕ್ರೀಡೆ, ಆರೋಗ್ಯ, ಪೌಷ್ಟಿಕಾಂಶ, ನೈರ್ಮಲ್ಯ, ಮಹಿಳಾ ಕಾನೂನುಗಳು ಮುಂತಾದ ವಿಷಯಗಳನ್ನು ಕಾರ್ಯಕ್ರಮಗಳನ್ನು ಆಯೋಜಿಸಲು ಸಚಿವರು ಸೂಚಿಸಿದ್ದಾರೆ. ಗ್ರಾಮಸಭೆ ನಡೆಸುವ ಸಮಯದಲ್ಲಿ ಆರೋಗ್ಯ ಶಿಬಿರ, ವಸ್ತು ಪ್ರದರ್ಶನ, ಸಸಿ ನೆಡುವ ಕಾರ್ಯಕ್ರಮ ಏರ್ಪಾಡು ಮಾಡಲು ಸಚಿವರು ಸಲಹೆ ನೀಡಿದ್ದಾರೆ.

### ಕಚೇರಿಗಳ ಮೇಲೆ ಇ.ಡಿ ದಾಳಿ

ನವದೆಹಲಿ, ತಿರುವನಂತಪುರಂ, ಕೇರಳ, ಬೆಂಗಳೂರು, ಆಂಧ್ರಪ್ರದೇಶ, ಚೆನ್ನೈ ಜಾರ್ಖಂಡ್, ಕೊಲ್ಕತ್ತಾ ಲಖ್ನೋ, ಜೈಪುರ ಸೇರಿದಂತೆ ವಿವಿಧೆಡೆಗಳಲ್ಲಿನ ಕಚೇರಿಗಳ ಮೇಲೆ ದಾಳಿ ನಡೆದಿದೆ.

ಪಿಎಫ್‌ಐ ಸಂಘಟನೆ ನಿಷೇಧದ ನಂತರ ಅದರ ಬದಲಿಗೆ ಎಸ್‌ಡಿಪಿಐ ಸಂಘಟನೆ ಪರ್ಯಾಯವಾಗಿ ಕಾರ್ಯ ನಿರ್ವಹಿಸುತ್ತಿತ್ತು ಎಂದು ಹೇಳಲಾಗಿದೆ.

# ರಾಮಸಮುದ್ರ ಕೆರೆ: ಕೃಷಿ ಚಟುವಟಿಕೆಗೆ ಸಹಕಾರಿ



ಶಿಡ್ಲಘಟ್ಟ : ಶಿಡ್ಲಘಟ್ಟ ನಗರಕ್ಕೆ ಕುಡಿಯುವ ನೀರು ಕಲ್ಪಿಸಲು ಯೋಜನೆ ರೂಪಿಸಿದ್ದು ಇದು ಅವೈಜ್ಞಾನಿಕವಾಗಿದೆ ರಾಮಸಮುದ್ರ ಕೆರೆಯಿಂದ ನಗರಕ್ಕೆ ಸುಮಾರು 35 ಕಿಲೋ ಮೀಟರ್ ಆಗಲಿದ್ದು ಯಾವುದೇ ಪ್ರಯೋಜನವಿಲ್ಲ, ನಮ್ಮ ಭಾಗದಲ್ಲಿ ಯಾವುದೇ ಜೀವನಾಡಿ ಕೆರೆ ಇಲ್ಲಾ ರಾಮಸಮುದ್ರ ಕೆರೆ ಒಂದೇ ಇಲ್ಲಿನ ಕೃಷಿ ಚಟುವಟಿಕೆ ನಡೆಸಲು ಸಹಕಾರಿಯಾಗಿದ್ದು ಯಾವುದೇ ರೀತಿ ನಾವು ನೀರು ಕೊಡಲು ಆಗೋದಿಲ್ಲ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಡಿ.ವಿ.ಓಬಳಪ್ಪ ತಿಳಿಸಿದ್ದಾರೆ.

ತಾಲ್ಲೂಕಿನ ಸಾದಲಿ ಹೋಬಳಿಯ ಎಸ್.ದೇವಗಾನಹಳ್ಳಿ ಗ್ರಾಮದಲ್ಲಿ ನಡೆದ ರಾಮಸಮುದ್ರ ಕೆರೆ ಅಭಿರುದ್ದಿ, ಗ್ರಾಮ ಪಂಚಾಯತ್ ಉಪ ಸಮಿತಿ ಹಾಗೂ ಅಚ್ಚುಕಟ್ಟು ರೈತರ ಸಮ್ಮುಖದಲ್ಲಿ ನಡೆದ ಗ್ರಾಮಸಭೆ–2025 ಹಾಗೂ ವಿಶೇಷ ಸಭೆ–2025 ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಈ ಕೆರೆಯನ್ನು 1889 ರಲ್ಲಿ ಜಯಚಮರಾಜೇಂದ್ರ ಒಡೆಯರ್ ಕಾಲದಲ್ಲಿ ಹಾಗೂ ಮುಖ್ಯ ಕಾರ್ಯದರ್ಶಿಯಾದ ಶೇಷಾಗಿರಿ ಅಯ್ಯರ್ 1894 ರಲ್ಲಿ ಕೃಷಿ ಬಳಕೆಗೆಂದೆ ನಿರ್ಮಿಸಿ ಎಸ್. ದೇವಗಾನಹಳ್ಳಿ, ಎಸ್.ಗುಂಡ್ಲಹಳ್ಳಿ, ಯರ್ರಾನಾಗೇನಹಳ್ಳಿ, ಎಸ್.ಕುರಬರಹಳ್ಳಿ, ಸತ್ಯ ಸಾಯಿ ನಗರ, ಗಡಿಮಿಂಚೇನಹಳ್ಳಿ ವರದಾಗನಹಳ್ಳಿ, ಮಂಡಿಕಲ್ ಹೋಬಳಿಯ ಬೋಯನಹಳ್ಳಿ ಗ್ರಾಮಗಳ ಅಚ್ಚುಕಟ್ಟು ಹಾಗೂ ಜಲಾನಯನ ಪ್ರದೇಶದ ಸೋಮೇನಹಳ್ಳಿ ಸೋಮೇಶ್ವರ ನಿಲುವರಾತಹಳ್ಳಿ ತಿಮ್ಮಗಾರಹಳ್ಳಿ ಇನ್ನಿತರೆ ಸುಮಾರು 1500ಎಕರೆ ಪ್ರದೇಶಕ್ಕೆ ಕೃಷಿ ಚಟುವಟಿಕೆಯನ್ನು ನಡೆಸಲು ರಾಮಸಮುದ್ರ ಕೆರೆ ಆಗಿದ್ದು ಜೂನ್, ಜುಲೈ 2025 ಕ್ಕೆ ಈ ಪ್ರದೇಶಕ್ಕೆ ಬೆಳೆಗಳಿಗೆ ನೀರು ಬಿಡಲು ಜಿಲ್ಲಾಡಳಿತ ಕೂಡಲೇ ಕ್ರಮ ವಹಿಸಬೇಕು ಹಾಗೂ ತಕ್ಷಣದಿಂದಲೇ ನಗರಕ್ಕೆ ಕುಡಿಯೋ ನೀರು ಸರಬರಾಜು ಯೋಜನೆ ಕೈ ಬಿಟ್ಟು ಬದಲಿ ವ್ಯವಸ್ಥೆ ಮಾಡಿ ನಗರಕ್ಕೆ ನೀರು ಒದಗಿಸಿ ಎಂದರು.

ಗ್ರಾಮ ಪಂಚಾಯತಿ ಉಪಾಧ್ಯಕ್ಷ ಎನ್ ಮಂಜುನಾಥ್ ಮಾತನಾಡಿ ನಮ್ಮ ಕೆರೆ ಪೂರ್ವಜರು ನಿರ್ಮಿಸಿ ನಮ್ಮ ಭಾಗದಲ್ಲಿ ಕೃಷಿ ಹೈನುಗಾರಿಕೆ ನಡಿಸಿ ಇಲ್ಲಿ ಬೇರೆ ಯಾವುದೇ ಆದರ ಇಲ್ಲಾ ನಮಗೆ ಇಲ್ಲಿ ನೀರು ಕೃಷಿಗೆ ಮುಂದಿನ ಜೂನ್ ಜುಲೈ 2025 ಕ್ಕೆ ಮುಂಗಾರು ಬೆಳೆಗಳಿಗೆ ನೀರು ಬಿಡಲು ಜಿಲ್ಲಾಧಿಕಾರಿ ಅವರಿಗೆ ಈ ಗ್ರಾಮ ಸಭೆ ಹಾಗೂ ವಿಶೇಷ ಸಭೆಯ ಮೂಲಕ ಒತ್ತಾಯ ಮಾಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಸುನಂದಮ್ಮವಿಜಯಕುಮಾರ್, ಮಾಜಿ ಅಧ್ಯಕ್ಷ ಅಶ್ವತ್ತಪ್ಪ, ಸಾದಲಿ ಹೊಸ ತಾಲ್ಲೂಕು ಹೋರಾಟ ಸಮಿತಿ ಅಧ್ಯಕ್ಷ ಜಿ.ವಿ.ತಿಮ್ಮರಾಜು ,ವೇಣುಗೋಪಾಲ್,ಸ್ಥಳೀಯ ಮುಖಂಡರಾದ ಯರ್ರ ನಾಗೇನಹಳ್ಳಿ ಗಂಗಾಧರ್, ನೀಲವರತೀಹಳ್ಳಿ ವೆಂಕಟೇಶ್, ಭೂ ವಿಜ್ಞಾನಿ ಡಿ.ಎಲ್.ನಾಗೇಶ್, ಜಿ.ವಿ.ವೆಂಕಟಾಚಲಪತಿ, ಬಿ.ಎಲ್. ಮಂಜುನಾಥ,ಎನ್. ಮುನಿವೆಂಕಟಸ್ವಾಮಿ,ರಾಮದಾಸ್, ವರ್ಧಗಾನಹಳ್ಳಿ ವೆಂಕಟೇಶ್, ರಮೇಶ್, ದೇವರಾಜ್, ಮುನಿವೆಂಕಟಪ್ಪ, ನೀರು ಗಂಟೆ ರಾಮಣ್ಣ, ಬೋಯನಹಳ್ಳಿ ಹನುಮಂತ್, ತೂಮಕುಂಟೆ ರಾಮಪ್ಪ, ಪುಸಾಗನದೊಡ್ಡಿ ಪಿ. ಎನ್. ಗಂಗರಾಜು, ಶ್ರೀನಿವಾಸಪ್ಪ, ಬಿ, ಚಂದ್ರಶೇಖರ್, ಜಿ.ಎ. ಲಕ್ಷ್ಮೀಪತಿ, ಜಿ,ದೇವರಾಜ್, ಕಾರ್ಯದರ್ಶಿ ಡಿ.ವಿ.ಪ್ರಸಾದ್ ಮುಂತಾದವರು ಭಾಗವಹಿಸಿದ್ದರು.

# ಕೃಷಿ ಉಳಿಸುವ ಕೆಲಸವಾಗಬೇಕಾದರೆ ಗೋವು ಸಂಪತ್ತು ಉಳಿಸಬೇಕು




**ದೇವಲಾಪುರ:** ನಾವು ಕೃಷಿ ಉಳಿಸುವ ಕೆಲಸವಾಗಬೇಕಾದರೆ ಗೋವು ಸಂಪತ್ತನ ಉಳಿಸಬೇಕಾಗುತ್ತದೆ ಎಂದು ತಾಲೂಕು ಭಾರತಿಯ ಕಿಸಾನ್ ಸಂಘದ ಪ್ರಧಾನ ಕಾರ್ಯದರ್ಶಿಯಾದ ಬಸವರಾಜ್ ತಿಳಿಸಿದರು.

ಅವರು ನಾಗಮಂಗಲ ತಾಲೂಕು ದೇವಲಾಪುರ ಹೋಬಳಿ ಕೇಂದ್ರಕ್ಕೆ ಗೋ ಸೇವಾ ಗತಿವಿಧಿ ಹಾಗೂ ರಾಧಾ ಸುರಭಿ ಗೋ ಮಂದಿರ ರಾಷ್ಟ್ರೀಯ ಗೋ ಸೇವಾ ಸಂಸ್ಥಾನ ಟ್ರಸ್ಟ್ ಸಹಯೋಗದಲ್ಲಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ನಂದಿ ರಥಯಾತ್ರೆಗೆ ದೇವಲಾಪುರದಲ್ಲಿ ಅದ್ದೂರಿ ಸ್ವಾಗತ ಮಂಗಳವಾದ್ಯದೊಂದಿಗೆ ದೇವಲಾಪುರ ವಾಹನ ನಿಲ್ದಾಣದಲ್ಲಿ ಸ್ವಾಗತಿಸಿ ಗೋ ಪೂಜೆ ಮಾಡಿ ಮಾತನಾಡಿದರು

ನಮ್ಮ ಬದುಕು ಕಟ್ಟಿಕೊಳ್ಳಬೇಕಾದರೆ ಗೋವು ಸಂಪತ್ತು ಉಳಿಯಬೇಕು. ಗೋವು ಆಧಾರಿತ ಕೃಷಿ ನಾವು ಮರೆತಿರುವುದರಿಂದ ಮಾರಕ ರೋಗಗಳು ಬರುತ್ತವೆ ಇದರಿಂದ ನಾವುಗಳು ನಮ್ಮ ಸಂಸ್ಕೃತಿಯ ಕೃಷಿಯನ್ನ ಮೈಗೂಡಿಸಿಕೊಳ್ಳುವಂತೆ ತಿಳಿಸಿದರು

ದೇಶದ ಸಂಸ್ಕೃತಿ ಹಾಗೂ ಮಣ್ಣಿನ ಸಂಪತ್ತು ಉಳಿಸಿದಾಗ ಮಾತ್ರ ನಾಗರಿಕತೆ ಉಳಿಯುತ್ತದೆ. ಕೃಷಿಯ ಮೂಲ ಆಧಾರ ಗೋವು. ವಿದೇಶಿ ವ್ಯಾಮೋಹದಿಂದ ನಮ್ಮ ಮೂಲ ಸಂಸ್ಕೃತಿ ಮರೆಯುತ್ತಿದ್ದೇವೆ. ಮುಂದಿನ ನಮ್ಮ ಪೀಳಿಗೆಯು ಗೋವು ಸಂಪತ್ತು ನೋಡಬೇಕಾದರೆ ನಾವು ಇಂದು ಮನೆಗೊಂದು ಗೋವು ಸಾಕಬೇಕು. ನಮ್ಮ ಸಂಸ್ಕೃತಿ ಹಾಳು ಮಾಡಬಾರದು. ಈ ದೇಶದ ಸಂಸ್ಕೃತಿ, ಮಣ್ಣಿನ ಸಂಪತ್ತು ಉಳಿಸಿದಾಗ ಭಾರತಕ್ಕೆ ಭವಿಷ್ಯವಿದೆ. ದೊಡ್ಡ ಉದ್ಯೋಗ ಕೊಡುವ ಕ್ಷೇತ್ರ ಕೃಷಿ, ಕೃಷಿ ಉಳಿಸುವ ಕೆಲಸವಾಗಬೇಕಾದರೆ ಗೋವು ಸಂಪತ್ತು ಉಳಿಸಬೇಕು. ಮಣ್ಣಿನ ಫಲವತ್ತತೆ ಉಳಿಯಬೇಕಾದರೆ ಸೆಗಣಿ ಗೊಬ್ಬರ ಉಪಯೋಗಿಸಬೇಕು' ಎಂದು ಹೇಳಿದರು.

ನಂದಿ ರಥಯಾತ್ರೆಯನ್ನು ಗ್ರಾಮದ ಮೆರವಣಿಗೆಯೊಂದಿಗೆ ದೇವಲಾಪುರದಶ್ರೀ ಲಕ್ಷ್ಮಿಕಾಂತ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಂತ್ರಘೋಷಗಳೊಂದಿಗೆ ಪೂಜೆ ನೆರವೇರಿಸಲಾಯಿತು.

ಮೆರವಣಿಗೆಯಲ್ಲಿ ದೇವಲಾಪುರದ ಶಾರದಾ ಮಹಿಳಾ ಮಂಡಳಿಯ ಪದಾಧಿಕಾರಿಗಳು ಸದಸ್ಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ನವೀನ್ ಮರಳ ಮತ್ತು ತಂಡ ಜಿಲ್ಲಾ ಗೋ ಸೇವಾ ಸಂಯೋಜಕರಾದ ಮರಿಗೌಡ ಮಳವಳ್ಳಿ ಮಂಜುನಾಥ್ ವಿಜಯ ನರಸಿಂಹ. ತೂಬಿನಕೆರೆ ವೀರಪ್ಪ ಗ್ರಾಮದ ಮುಖಂಡರು ಹಾಜರಿದ್ದರು

# ಹದಗೆಟ್ಟ ಗ್ರಾಮೀಣ ರಸ್ತೆಗಳು ಸಂಚಾರಿಗಳ ಜೀವಕ್ಕೆ ಸಂಚಕಾರ

ಕುಕನೂರು: ಸಿಎಂ ಸಿದ್ದರಾಮಯ್ಯ ಅವರ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ್ ರಾಯರಡ್ಡಿ ಅವರ ಕ್ಷೇತ್ರದ ಗ್ರಾಮೀಣ ರಸ್ತೆಗಳು ಹದಗೆಟ್ಟಿದ್ದು ಸಂಚಾರಿಗಳ ಜೀವಕ್ಕೆ ಸಂಚಕಾರ ತರುತ್ತಿವೆ.

ಕುಕನೂರು ತಾಲೂಕಿನ ಗ್ರಾಮೀಣ ಭಾಗದ ಬಹುತೇಕ ರಸ್ತೆಗಳು ಹದಗೆಟ್ಟು ಹೋಗಿವೆ. ಮಂಗಳೂರು ಕುದ್ರಿಮೋತಿ, ಕುಕನೂರು, ಗವರಾಳ್, ರಸ್ತೆಗಳು ತಗ್ಗು ಗುಂಡಿಗಳಿಂದ ಸವಾರರು ನಿತ್ಯವೂ ಪರದಾಡುತ್ತಿದ್ದಾರೆ. ಮಕ್ಕಳು, ರೈತರು, ಪಾದಚಾರಿಗಳು,ವಾಹನ ಸವಾರರು ರಸ್ತೆ ಸಂಚಾರದ ವೇಳೆ ತೊಂದರೆ ಅನುಭವಿಸುತ್ತಿದ್ದಾರೆ, ಈ ರಸ್ತೆಗಳು ತಗ್ಗು ಗುಂಡಿಗಳಿಂದ ಹದಗೆಟ್ಟು ಹಳ್ಳಹಿಡಿದಿವೆ ರೈತರ ಗೋಳು ಕೇಳುವರು ಯಾರು ಎಂದು ಕರ್ನಾಟಕದ ರೈತ ಸಂಘ ಹಾಗು ಹಸಿರು ಸೇನೆಯ ತಾಲೂಕು ಅಧ್ಯಕ್ಷ ಶರಣಬಸಪ್ಪ ದಾನಕೈ ಅವರು ಭಾಗದ ಜನಪ್ರತಿನಿಧಿಗಳು, ಪಿ ಡಬ್ಲ್ಯೂ ಡಿ ಇಲಾಖೆ ಅಧಿಕಾರಿಗಳು ಸುಗಮ ರಸ್ತೆ ನಿರ್ಮಾಣಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದ್ದಾರೆ.



ಮಳೆ ಬಂದರೆ ರಸ್ತೆ ಮೇಲಿರುವ ಗುಂಡಿಗಳು ಮಾಯವಾಗಿ ಕೃಷಿ ಹೊಂಡಗಳಾಗಿ ಪರಿವರ್ತನೆಗೊಳ್ಳುವ ಸ್ಥಿತಿಯಲ್ಲಿವೆ , ಇಂತಹ ಹದಗೆಟ್ಟಿರುವ ರಸ್ತೆಗಳಿಂದ ರೈತರಿಗೆ ಕೃಷಿ ಕಾರ್ಯ ಚಟುವಟಿಕೆಗಳಿಗೆ ತೊಂದರೆಯಾಗುತ್ತದೆ ಎಂದು ಯಲಬುರ್ಗಾ ತಾಲೂಕ ರೈತ ಸಂಘದ ಅಧ್ಯಕ್ಷ ಶರಣಬಸಪ್ಪ ದಾನಕೈ ಅವರು ರಸ್ತೆಯನ್ನು ಸರಿಪಡಿಸುವಂತೆ ಒತ್ತಾಯಿಸಿದ್ದಾರೆ.

ಯಲಬುರ್ಗಾ ತಾಲೂಕಿನ ಶಿರಗುಂಪಿ ಗ್ರಾಮದ ಶ್ರೀ ಕರಿಬಸವೇಶ್ವರ ದೇವಸ್ಥಾನಕ್ಕೆ ಹೊಗುವ ಭಕ್ತರಿಗೆ ಹಾಗು ಈ ಮಾರ್ಗವಾಗಿ ರೈತರು ತಮ್ಮ ಜಮೀನುಗಳಿಗೆ ಹೊಗಬೇಕಾದರೆ ನಡು ಮದ್ಯದಲ್ಲಿ ಹಳ್ಳ ಇರುವದರಿಂದ ಈ ಭಾಗದ ರೈತರು ತಮ್ಮ ಹೊಲದಲ್ಲಿ ಬೆಳೆದಿರುವ ಕಾಳು ಕಡಿ,ಧವಸ ಧ್ಯಾನಗಳ ಫಸಲನ್ನು ತಮ್ಮ ಮನೆಗೆ ತರುವಲ್ಲಿ ಹರಸಾಹಸ ಮಾಡುತ್ತಿದ್ದಾರೆ ಇಂತಹ ರೈತರ ಸಮಸ್ಯೆಗಳನ್ನು ಸಿ.ಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರು ಅರಿತುಕೊಂಡು ರೈತರ ಸಮಸ್ಯೆಗೆ ಸ್ಪಂದಿಸಬೇಕು , ಇಂತಹ ಕುಕನೂರ ,ಯಲಬುರ್ಗಾ ತಾಲೂಕಿನ ಗ್ರಾಮಗಳ ಪಾದಚಾರಿಗಳು ರೈತರು ಹಿಡಿಶಾಪ ಹಾಕುತ್ತಿದ್ದಾರೆ ,ಜನಪ್ರತಿನಿಧಿಗಳು,ಅಧಿಕಾರಿಗಗಳು ಮುಂದಾಗಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಕಳವು ಪ್ರಕರಣ ಪತ್ತೆ: ವಾರಸುದಾರರಿಗೆ ಸ್ವತ್ತು ಹಸ್ತಾಂತರ



ಚಾಮರಾಜನಗರ: ದಕ್ಷಿಣ ವಲಯ ಪೊಲೀಸ್ ಮಹಾನಿರ್ದೇಶಕ ಬೋರ್ ಲಿಂಗಯ್ಯ ಅವರು ಕೆಲವು ಠಾಣೆಯ ಇನ್ಸ್‌ಪೆಕ್ಟರ್ ಅವರುಗಳಿಗೆ ಪ್ರಾಪರ್ಟಿ ಪೆರೆಡ್ ಕಾರ್ಯಕ್ರಮದಲ್ಲಿ ವಾರ್ನಿಂಗ್ ನೀಡುವ ಮೂಲಕ ಇಲಾಖಾ ಕಾರ್ಯವೈಖರಿ ಬಗ್ಗೆ ತಿಳಿ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದ್ದ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ವರದಿಯಾದ 88 ಸ್ವತ್ತು ಕಳವು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 15692636 ರೂ. (ಒಂದು ಕೋಟಿ ಐವತ್ತಾರು ಲಕ್ಷ ತೊಂಭತ್ತೆರಡು ಸಾವಿರದ ಆರುನೂರ ಮೂವತ್ತಾರು ರೂಪಾಯಿ) ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದು, ಪ್ರದರ್ಶನ ಹಾಗೂ ವಾರಸುದಾರರಿಗೆ ಸ್ವತ್ತುಗಳನ್ನು ಮರಳಿ ನೀಡಲು ಪ್ರಾಪರ್ಟಿ ರಿಟರ್ನ್ ಪೆರೇಡ್ ಕಾರ್ಯಕ್ರಮದಲ್ಲಿ ಸ್ವತ್ತಿನ ಮಾಲನ್ನ ವೀಕ್ಷಿಸುತ್ತಿದ್ದರ..ಈ ಸಂದರ್ಭದಲ್ಲಿ ಪ್ರದರ್ಶನಕ್ಕಿಟ್ಟಿದ್ದ. ಡಿಸ್ ಪ್ಲೆ ಬೋರ್ಡ್ ಅಲ್ಲಿದ್ದ ಖಾಸಗಿ ಜಾಹೀರಾತು ನೋಡಿ ಅದಿಕಾರಿಗಳಿಗೆ ಹಾಕದಂತೆ ಎಚ್ಚರಿಕೆ ನೀಡಿದರು.

ಚಾಮರಾಜನಗರ ವಿವಿಧ ಕೆಲವು ಠಾಣೆಯವರು ಖಾಸಗಿ ಜಾಹೀರಾತಿನ್ನೊಳಗೊಂಡಿದ್ದನ್ನು, ಅದನ್ನು ಹಾಕಿದ್ದನ್ನು ನೋಡಿ ಖಾಸಗಿ ಜಾಹಿರಾತನ್ನ ಯಾಕೆ ಬಳಸ್ತೀರಾ...ತೆಗಿರಿ ಮುಂದೆ, ಅದ್ನ ಹಾಕದಂತೆ ಎಚ್ಚರಿಸಿದ ಮೇಲೆ ಸಿಬ್ಬಂದಿಗಳು ಡಿಸ್ ಪ್ಲೇ ಬೋರ್ಡಿಗೆ ಪೇಪರ್ ತುಣುಕು ಮುಚ್ಚಿದರು

ಕಳ್ಳತನ ಆಗದಂತೆ ಸುರಕ್ಷತೆ ವಹಿಸುವುದು ತಡೆಗೆ ಪೂರಕ

ಕಳ್ಳತನ ಆಗೋದ್ಕಿಂತ ಆಗದಂತೆ ಜಾಗೃತ ವಹಿಸಲು ಮೊದಲ ಆದ್ಯತೆ ನೀಡಬೇಕೆಂದು ದಕ್ಷಿಣ ವಲಯ ಪೊಲೀಸ್ ಮಹಾನಿರ್ದೇಶಕರ ಬೋರಲಿಂಗಯ್ಯ ಅವರು ಹೇಳಿದರು. ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಏರ್ಪಡಿಸಲಾಗಿದ್ದ , ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ವರದಿಯಾದ 88 ಸ್ವತ್ತು ಕಳವು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಕಳ್ಳತನಕ್ಕೆ ವ್ಯಸದಂತಹ ಚಟುವಟಿಕೆಗಳಿಂದ ಪ್ರೇರಕವಾಗಿ ಕಳ್ಳತನದ ಹಾದಿ ಹಿಡಿಯಲಾರಂಬಿಸುತ್ತಾರೆ..ಮನೆ ಮಾಲೀಕರು ಕಳ್ಳತನ ಆಗದಂತೆ ಜಾಗೃತ ವಹಿಸಲು ಮುಂದಾದಾಗ ಅಪರಾದ ತಡೆಗೆ ಪೂರಕವಾಗಲಿದೆ ಎಂದರು.

ಶೂನ್ಯ ವೇಳೆಯಲ್ಲಿ ಶ್ರವಣಬೆಳಗೊಳದ ಶಾಸಕರು ಅದಿವೇಶನದಲ್ಲಿ ಚರ್ಚೆಯಾದ ವಿಚಾರ ಸಂಬಂಧಿಸಿದಂತೆ ಮಾದ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿ ಪೊಲೀಸರು ತಮ್ಮ ಖಾಸಗಿ ವಾಹನದಲ್ಲಿ ಪೊಲೀಸ್ ನಾಮಾಂಕಿತ ಬಳಸುವಂತಿಲ್ಲ ಎಂದು ದಕ್ಷಿಣ ವಲಯ ಪೊಲೀಸ್ ಮಹಾನಿರ್ದೇಶಕ ಬೋರಲಿಂಗಯ್ಯ ಅವರು ಇದೆ ಸಂದರ್ಭದಲ್ಲಿ ಹೇಳಿದರು.

ಜಾಗೃತ ವಹಿಸೋದೊಂದೆ ಪರಿಹಾರ: ಕಳ್ಳತನ ಪ್ರಕರಣಗಳನ್ನ ತಡೆಯಲು, ಪದಾರ್ಥಗಳನ್ನು ಜಾಗೃತವಾಗಿ ಇಟ್ಟುಕೊಳ್ಳೊದೊಂದೆ ಪರಿಹಾರ ಎಂದು ದಕ್ಷಿಣವಲಯ ಪೊಲೀಸ್ ಮಹಾನಿರ್ದೆಶಕ ಬೋರಲಿಂಗಯ್ಯ ಅವರು ಸಲಹೆ ನೀಡಿದರು.

ಚಾಮರಾಜನಗರ ಪೊಲೀಸ್ ಇಲಾಖೆ ಎಸ್ಪಿ ಕವಿತಾ ಮಾರ್ಗದರ್ಶನದಲ್ಲಿ ಉತ್ತಮ ರಿಕವರಿ ಮಾಡಿದ್ದಾರೆ..ಚಾಮರಾಜನಗರ ಗಡಿಭಾಗ ತಮಿಳುನಾಡು ಕೇರಳ ಎರಡು ರಾಜ್ಯಗಳೂ ಇದೆ.. ಸಾರ್ವಜನಿಕರು ಜಾಗೃತ ವಹಿಸಬೇಕು... ಎಷ್ಟೊ ಸಲ ಸುತ್ತಮುತ್ತಲಿನ ರಾಜ್ಯದವರೂ ಕಳ್ಳತನ ಮಾಡಿದ ಪ್ರಕರಣ ಇದೆ. ಚಿನ್ನ ಒಡವೆ, ಹಣ ವಾಹನ ಇನ್ನಿತರ ಬೆಲೆ ಬಾಳುವ ಪದಾರ್ಥಗಳನ್ನು. ಜೋಪಾನವಾಗಿ ಇಟ್ಟುಕೊಳ್ಳಿ. ಕೆಲವೊಮ್ಮೆ ಸ್ಥಳೀಯವಾಗಿ ಕಳ್ಳತನ ಮಾಡೊವ್ರು ದುಶ್ಚಟಗೊಳಪಟ್ಟವ್ರು ಹೆಚ್ಚಾಗಿದ್ದಾರೆ. ಖರ್ಚಿಗೆ ಹಣ ಬೇಕಾಗಿರುತ್ತದೆ ,ಕಳ್ಳತನ ಮಾಡ್ತಾರೆ... ಮಕುಟುಂಬದವರೂ ಕೂಡ ತಮ್ಮ ಮಕ್ಕಳ ಜೀವನಶೈಲಿ ನೊಡಬೇಕು.. ಆದಾಯ ಮೀರಿ ಖರ್ಚು ಮಾಡಿದಾಗ ಅದನ್ನ ಪರಿಶೀಲಿಸಬೇಕು ಎಂದು ಸಲಹೆ ನೀಡಿದರು.

88 ಪ್ರಕರಣಗಳ ಪೈಕಿ ಚಾಮರಾಜನಗರ ಉಪವಿಭಾಗದಲ್ಲಿ 50 ಹಾಗೂ ಕೊಳ್ಳೇಗಾಲ ಉಪವಿಭಾಗದಲ್ಲಿ 38 ಪ್ರಕರಣ ದಾಖಲಾಗಿತ್ತು. ಚಾಮರಾಜನಗರ ಉಪವಿಭಾಗದಲ್ಲಿ 8131317 ರೂ., ಹಾಗೂ ಕೊಳ್ಳೇಗಾಲ ಉಪವಿಭಾಗದಲ್ಲಿ 7560819 ರೂ.ಗಳ ಮೌಲ್ಯದ ವಸ್ತುಗಳನ್ನು ಹಸ್ತಾಂತರ ಮಾಡಲಾಗಿದೆ. ವಶಪಡಿಸಿಕೊಂಡ ಮಾಲುಗಳನ್ನ ವಾರಸುದಾರರಿಗೆ ಇದೆ ಸಂದರ್ಭದಲ್ಲಿ ವಿತರಿಸಿದರು.

# ನಂದಿ ಸಾಲಗಾರರ ಸಾಮಾನ್ಯ ಕ್ಷೇತ್ರಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಶ್ರೀನಿವಾಸ್ ಆಯ್ಕೆ

**ಚಿಕ್ಕಬಳ್ಳಾಪುರ:** ತಾಲೂಕಿನ ಕೃಷಿ ಸಹಕಾರ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್(ಪಿಕಾರ್ಡ್) ಬ್ಯಾಂಕಿನ ನಂದಿ ಸಾಲಗಾರರ ಸಾಮಾನ್ಯ ಕ್ಷೇತ್ರಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿದ್ದ ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಜಿ.ಆರ್.ಶ್ರೀನಿವಾಸ್ ಆಯ್ಕೆಗೊಂಡಿದ್ದಾರೆ.

ಫೆ.13 ರಂದು ಪಿಕಾರ್ಡ್‌ನ ಒಟ್ಟು 12 ಕ್ಷೇತ್ರಗಳ ಪೈಕಿ ಅವಿರೋಧವಾಗಿ ಆಯ್ಕೆ ಗೊಂಡಿದ್ದ 5 ಕ್ಷೇತ್ರಗಳನ್ನು ಹೊರತುಪಡಿಸಿ,ಉಳಿದ 7 ಕ್ಷೇತ್ರಗಳಿಗೆ ಚುನಾವಣೆ ನಡೆದಿತ್ತು. ಆದರೆ ನಂದಿ ಕ್ಷೇತ್ರ ಹೊರತುಪಡಿಸಿಉಳಿದ 6 ಕ್ಷೇತ್ರಗಳಿಗೆ ಆಗ ಚುನಾವಣೆ ನಡೆದು ಫಲಿತಾಂಶ ಸಹ ಪ್ರಕಟಗೊಂಡು ಚುನಾವಣೆ ನಡೆದ 6 ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಬೆಂಬಲಿಗರು ಜಯ ಸಾಧಿಸಿದ್ದರು.

ಹೈಕೋರ್ಟ್ ಆದೇಶದ ಮೇರೆಗೆ ನಂದಿ ಸಾಲಗಾರರ ಕ್ಷೇತ್ರಕ್ಕೆ ನಡೆದಿದ್ದ ಚುನಾವಣೆಯ ಮತ ಎಣಿಕೆ ಶಾಂತಿಯುತವಾಗಿ ನಡೆದಿದ್ದು ಬಿಜೆಪಿ–ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಜಿ.ಆರ್.ಶ್ರೀನಿವಾಸ್ ಒಟ್ಟು 51 ಮತಗಳನ್ನು ಪಡೆದು ತಮ್ಮ ಪ್ರತಿ ಸ್ಪರ್ಧಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜೆಸಿಬಿ ಮಂಜುನಾಥ(44) ಅವರನ್ನು 7 ಮತಗಳ ಅಂತರದಿಂದ ಸೋಸಿಪಿಕಾರ್ಡ್ ಬ್ಯಾಂಕಿನ ನಿರ್ದೇಶಕರಾಗಿ ಶ್ರೀನಿವಾಸ್ ಆಯ್ಕೆ ಚುನಾಯಿತರಾಗಿದ್ದಾರೆಂದು ಪಿಕಾರ್ಡ್ ಬ್ಯಾಂಕಿನ ಆಡಳಿತ ಮಂಡಳಿ ಆಯ್ಕೆಗೆ ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಕೆ.ಎನ್.ನಾಗರಾಜ್ ಘೋಷಿಸಿದ್ದಾರೆ.

ಚಿಕ್ಕಬಳ್ಳಾಪುರ ನಂದಿ ಸಾಲಗಾರರ ಸಾಮಾನ್ಯ ಕ್ಷೇತ್ರಕ್ಕೆ ಫೆ.13 ರಂದು ಮತದಾನ ನಡೆದರೂ ಫಲಿತಾಂಶ ಪ್ರಕಟಿಸದಂತೆ ಹೈಕೋರ್ಟ್‌ನಿಂದ ನಂದಿ ಸಾಲಗಾರರ ಸಾಮಾನ್ಯ ಕ್ಷೇತ್ರದಲ್ಲಿ ಬಿಜೆಪಿ – ಜೆಡಿಎಸ್ ಮೈತ್ರಿ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಜಿ.ಆರ್.ಶ್ರೀನಿವಾಸ್ ಅನರ್ಹರ ಮತದಾರರ ವಿಚಾರದಲ್ಲಿ ಫಲಿತಾಂಶ ಪ್ರಕಟಿಸದಂತೆ ಹೈಕೋರ್ಟ್ ಮೆಟ್ಟಿಲೇರಿ ತಡೆತಯಾಜ್ಞೆ ತಂದಿದ್ದು, ಸದ್ಯ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಜಿ.ಆರ್.ಶ್ರೀನಿವಾಸ್ ಗೆಲುವು ಸಾಧಿಸಿದ್ದಾರೆ. ಈ ಸಂಧರ್ಭದಲ್ಲಿ ಕೆವಿ ನಾಗರಾಜ್, ನಂದಿ ಮುನಿಸ್ವಾಮಿ ಒಳಗೊಂಡಂತೆ ಮತ್ತಿತರರು ಉಪಸ್ಥಿತರಿದ್ದರು.



# ನೆಮ್ಮದಿ ಇಲ್ಲದ ಜೀವನ ವ್ಯರ್ಥ

**ಚೇಳೂರು:** ಮಾನವರಿಗೆ ಎಷ್ಟೆ ಇದ್ದರೂ ನೆಮ್ಮದಿ ಮುಖ್ಯವಾಗಿದೆ ನೆಮ್ಮದಿ ಇಲ್ಲದ ಜೀವನ ವ್ಯರ್ಥ ಜೀವನದಲ್ಲಿ ಕಷ್ಟಗಳು ಬಂದಾಗ ದೇವರಿಗೆ ಮೊರೆ ಹೋಗುವುದು ಪ್ರಾಚೀನ ಕಾಲದಿಂದಲೂ ರೂಡಿಯಲ್ಲಿದೆ ಅತಂಹ ಧನಾತ್ಮಕ ಶಕ್ತಿ ಇರುವುದು ದೇವಾಲಯಗಳಲ್ಲಿ ಪವಿತ್ರ ಜಾಗದಲ್ಲಿ ದೇವರುಗಳನ್ನ ಪ್ರತಿಷ್ಠಾಪನೆ ಮಾಡಬೇಕು ಮಹಾಧ್ವಾರ ಉದ್ಘಾಟನೆಗೆ ಪುಷ್ಪವೃಷ್ಟಿ ಮಾಡಿರುವುದು ಸಂತಸ ತಂದಿದೆ ದೇವರು ಸುಖ ಶಾಂತಿ ಮತ್ತು ನೆಮ್ಮದಿಯ ಬದುಕು ಪ್ರತಿಯೊಬ್ಬರಿಗೂ ಕರುಣಿಸಲಿ ಮುಂಗಾರು ಬೆಳೆಗಳು ಬೆಳೆಯಲು ಉತ್ತಮ ಮಳೆ ಬರಲಿ ಜನ–ಜಾನುವಾರುಗಳಿಗೆ ಆರೋಗ್ಯ ನೀಡಲಿ ಎಂದು ಚಿತ್ರದುರ್ಗ ಪೀಠಾಧೀಕಾರಿಗಳಾದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜೀ ರವರು ಆಶೀರ್ವಾದ ಮಾಡಿದರು.

ಅವರು ಚೇಳೂರು–ಬಾಗೇಪಲ್ಲಿ ಮುಖ್ಯ ರಸ್ತೆಯಲ್ಲಿ ಕೊಂಡಿಕೊಂಡೆ ಗಂಗಮ್ಮ ದೇವತೆಯ ಮಹಾದ್ವಾರದ ಪ್ರತಿಷ್ಠಾಪನೆಯ ಉದ್ಘಾಟನೆಯನ್ನ ಹೆಲಿಕ್ಯಾಪ್ಟರ್‌ನಿಂದ ಪುಷ್ಪಾಭಿಷೇಕ ಮಾಡುವ ಮೂಲಕ ಧಾರ್ಮಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಏರ್ಪಾಡಿಸಿದ್ದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು ಇತರರಲ್ಲಿ ಭೇದಭಾವವನ್ನು ಕಲ್ಪಿಸಿಕೊಂಡು, ತಾರತಮ್ಯ, ಮೇಲು–ಕೀಳು, ರಾಗದ್ವೇಷ ಗಳಿಂದ ವರ್ತಿಸಬಾರದು. ಈ ರೀತಿ ಭೇದ ಮಾಡುವುದರಿಂದ ಮತ್ತೆ ಮತ್ತೆ ಹುಟ್ಟು ಸಾವುಗಳ ಚಕ್ರದಲ್ಲಿ ಸಿಲುಕಬೇಕಾಗುತ್ತದೆ. ಪರಮಾತ್ಮನು ಸರ್ವ ವ್ಯಾಪಕನಾಗಿರುವುದರಿಂದ ಯಾರಲ್ಲೂ ಭೇದವೆಣಿಸದೆ ಎಲ್ಲರೂ ಒಂದೇ ಎಂಬ ಜ್ಞಾನವನ್ನು ಪಡೆಯುವುದೇ ವೇದಾರ್ಥದ ಸಾರಾಂಶ ಎಂದರು.

ಧಾರ್ಮಿಕ ಸಭೆಯಲ್ಲಿ ದೇವಾಲಯದ ರಾಮಾಂಜಿಸ್ವಾಮೀಜೀ ಮಾತನಾಡಿ ಅಪಾರ ಮಹಿಮೆಯುಳ್ಳ ಶಕ್ತಿ ದೇವತೆಯಾದ ಗಂಗಾಭವಾನಿ ಅಮ್ಮನವರ ದೇವಾಲಯಯದ ಪಕ್ಕದಲ್ಲಿ ಸುಮಾರು ವರ್ಷಗಳಿಂದ ಬೆಟ್ಟದ ಮೇಲೆ ನೀರಿನ ದೋಣೆ ಇದ್ದು ಇದೇ ಇಲ್ಲಿನ ಪವಾಡವಾಗಿದೆ ಬೆಟ್ಟಕ್ಕೆ ಸಿಸಿ ರೋಡ್ ಹೈಮಾಸ್ಕ್ ದೀಪಗಳು ಇತರೆ ದೇವಾಲಯದ ಅಭಿವೃದ್ದಿ ಮಾಡಲು ಮನವಿ ಮಾಡಿದರು.

ಕಾರ್ಯಕ್ರಮಕ್ಕೂ ಮುನ್ನಾ ಮಹಾಧ್ವಾರದಿಂದ ಗಂಗಾಭವಾನಿ ಬೆಟ್ಟದ ಮೇಲಿನ ಧಾರ್ಮಿಕ ಸಭೆಯತನಕ ಸ್ವಾಮೀಜಿಗಳನ್ನು ಪೂರ್ಣ ಕುಂಭ ಸ್ವಾಗತದೊಂದಿಗೆ ಭಜನಾ ಕಲಾ ತಂಡಗಳೊಂದಿಗೆ ಕರೆ ತರಲಾಯಿತು. ಚೇಳೂರು–ಬಾಗೇಪಲ್ಲಿ ಮುಖ್ಯ ರಸ್ತೆಯಲ್ಲಿರುವ ಗಂಗಮ್ಮ ಬೆಟ್ಟದ ಮಹಾಧ್ವಾರಕ್ಕೆ ಹೆಲಿಕಾಪ್ಟರ್‌ನಿಂದ ಪುಷ್ಪವೃಷ್ಟಿ ನೋಡಲು ಸುತ್ತಮುತ್ತಲಿನ ನೂರಾರು ಜನರು ಸೇರಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ತಾ ಆರೋಗ್ಯಧಿಕಾರಿ ಸತ್ಯನಾರಾಯಣರೆಡ್ಡಿ ಕಂದಾಯ ಇಲಾಖೆ ಅಧಿಕಾರಿ ಎಂ.ಎನ್.ಈಶ್ವರ್ ದೇವಾಲಯದ ಪ್ರಧಾನ ಅರ್ಚಕ ಸುಬ್ಬರಾವ್ ಪಿಡಿಓ ಕೆ. ವೆಂಕಟಾಚಲಪತಿ ದೇವಾಲಯದ ಸಮಿತಿ ಅಧ್ಯಕ್ಷ ಎಸ್.ವಿ.ವೆಂಕಟರಮಣಾರೆಡ್ಡಿ ಉಪಾಧ್ಯಕ್ಷ ಎನ್.ವಿ.ಬಯ್ಯಪ್ಪ. ಜನಪರ ಚಿಂತಕರಾದ ಕೆ.ಟಿ.ವೀರಾಂಜನೇಯ ಪಿ.ಡಿ.ವೆಂಕಟರಾಮ್ ರಾಜೋಳ್ಳಪಲ್ಲಿ ಆರ್.ಎ.ವಿನೋದ್‌ರೆಡ್ಡಿ. ಆರ್.ಬಿ.ಮಂಜುನಾಥರೆಡ್ಡಿ. ಗುಂತೂರುಪಲ್ಲಿ ಜಿ,ವಿ. ವೆಂಕಟರಮಣಪ್ಪ. ವೆಂಕಟಾಪುರ ವೆಂಕಟರಮಣಾರೆಡ್ಡಿ ಮೂಗಿರೆಡ್ಡಿಪಲ್ಲಿ ಎಸ್. ಆಂಜನೇಯ ಗ್ರಾ.ಪಂ. ಮಾಜಿ ಉಪಾಧ್ಯಕ್ಷ ಕೆ.ಕೆ.ವಿ.ಪಲ್ಲಿ ಬೈರೆಡ್ಡಿ ಆರ್. ವಿ. ರವೀರೆಡ್ಡಿ. ದೇವಾಲಯದ ಪದಾಧಿಕಾರಿಗಳು ಹಾಜರಿದ್ದರು.



# ರಾಯರ ಮಠದಲ್ಲಿ ಭರತನಾಟ್ಯ ಪ್ರದರ್ಶನ

**ಬೆಂಗಳೂರು:** ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಆದೇಶದಂತೆ ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ರಾಘವೇಂದ್ರತೀರ್ಥ ಗುರುಸಾರ್ವಭೌಮರ ಪಟ್ಟಾಭಿಷೇಕ ಮಹೋತ್ಸವದ ಪ್ರಯುಕ್ತ ವಿದುಷಿ ಶ್ರೀ ಮತಿ ರೂಪ ಶ್ರೀ, ಕೆ ಎಸ್ ಅವರ ನಿರ್ದೇಶನದಲ್ಲಿ ಶ್ರೀ ಹೃದ್ಯಾ ಅಕಾಡೆಮಿಯ ಗುರು ವಿದುಷಿ ಶ್ರೀಮತಿ ರೂಪ ಶ್ರೀ ಕೆ ಎಸ್ ಹಾಗೂ ವಿದ್ಯಾರ್ಥಿನಿಯರಾದ ಹೃದ್ಯಾ ಭಟ್ ಕೆ., ಪ್ರಣಮ್ಯ, ಹಂಸ, ಲಿಕ, ಅವನಿ ಹೆಗಡೆ, ತನ್ವಿಕ, ಸ್ಮರಣಿ, ದುತಿ ಶ್ರೀ, ಶ್ರೇಯ ಮಹೇಶ್, ಸೇಜಲ್, ಸನ್ಮತಿ ಪವನ್, ಆಕಾಂಕ್ಷ ಪವನ್, ಅಭಿಶ್ರುತ, ನಿದರ್ಶ, ಲಕ್ಷ್ಮಿ, ಪಾವನಿ, ತನ್ವಿ, ನಮಿತಾ, ಅಶ್ವತಿ ಮಹೇಶ್, ಪ್ರತಿಕ್ಷ ಪಿ., ಕುಲಕರ್ಣಿ, ಲಕ್ಷಣ ಶ್ರೀ ಇವರುಗಳು ನಡೆಸಿಕೊಟ್ಟ ಭರತನಾಟ್ಯ ಪ್ರದರ್ಶನವು ನೆರೆದಿದ್ದ ಭಕ್ತರಿಂದ ಅಪಾರ ಮೆಚ್ಚುಗೆ ಗಳಿಸಿತು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು.



# ಸಂಪುಟ ನಿರ್ಧಾರಕ್ಕೆ ರಾಮನಗರದಲ್ಲಿ ಉತ್ತಮ ಸ್ಪಂದನೆ

**ರಾಮನಗರ:** ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಪಡೆದು ಒಂದುವರೆ ದಶಕದಿಂದ ಅತಂತ್ರರಾಗಿದ್ದ ನಿವೇಶನ ಮಾಲೀಕರನ್ನು ಕಾನೂನು ತೊಡಕುಗಳಿಂದ ಹೊರತಲು ಸಚಿವ ಸಂಪುಟ ತೆಗೆದುಕೊಂಡ ನಿರ್ಧಾರಕ್ಕೆ ರಾಮನಗರ ಪ್ರಾಧಿಕಾರ ವ್ಯಾಪ್ತಿಯಲ್ಲಿ ಉತ್ತಮ ಸ್ಪಂದನೆ ದೊರೆಯುತ್ತಿದೆ.

ಒಂದು ಅಡಿ ಜಾಗಕ್ಕೆ 200 ರೂ ನಂತೆ ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡು ಬಡಾವಣೆ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಹಾಗೂ ಮಾಲೀಕರಿಗೆ ಶುದ್ಧಕ್ರಯ ಪತ್ರ ಹಾಗೂ ಇ-ಖಾತೆಗಳನ್ನು ವಿತರಿಸಲು ಸರಕಾರ ಸೂಚಿಸಿತ್ತು. ಇದಕ್ಕೆ 1800ಕ್ಕೂ ಅಧಿಕ ನಿವೇಶನ ಮಾಲೀಕರ ಪೈಕಿ ಬಹುತೇಕ ಮಂದಿ ಶಾಸಕ ಇಕ್ಬಾಲ್ ಹುಸೇನ್ ಅವರು ಕರೆದಿದ್ದ ಸಭೆಯಲ್ಲಿ ಸಮ್ಮತಿ ಸೂಚಿಸಿದ್ದರು.

ಇದರಂತೆ ಪ್ರಾಧಿಕಾರದ ನಿವೇಶನ ಮಾಲೀಕರು ಅಭಿವೃದ್ಧಿ ಶುಲ್ಕ ಪಾವತಿಸಲು ಮುಂದಾಗಿದ್ದಾರೆ. ಈವರೆಗೆ 25ಕ್ಕೂ ಅಧಿಕ ಮಂದಿ ಡಿಡಿ ಮೂಲಕ ಅಭಿವೃದ್ಧಿ ಶುಲ್ಕ ಪಾವತಿಸಿದ್ದಾರೆ. ಇವರಿಗೆ 10 ದಿನದೊಳಗೆ ಖಾತೆಗಳನ್ನು ನೀಡಲು ಅಗತ್ಯ ಪ್ರಕ್ರಿಯೆಗಳನ್ನು ಪ್ರಾಧಿಕಾರ ಕೈಗೊಂಡಿದೆ.

ಪ್ರತಿನಿತ್ಯ ಈ ಬಗ್ಗೆ ಕಚೇರಿಯಲ್ಲಿ ನಿವೇಶನ ಮಾಲೀಕರು ಬಂದು ಪಾವತಿ ಮೊತ್ತ, ಪಾವತಿ ವಿಧಾನ ಹಾಗೂ ಒದಗಿಸಬೇಕಾದ ದಾಖಲೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.




ಕಚೇರಿಯಲ್ಲಿ ನಿವೇಶನ ಮಾಲೀಕರಿಂದ ಡಿಡಿ ಸ್ವೀಕರಿಸಿ ಮಾತನಾಡಿದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಅವರು, ಅಭಿವೃದ್ಧಿ ಶುಲ್ಕ ಪಾವತಿಸಿ ಅಧಿಕೃತ ಖಾತಾ ದಾಖಲೆಗಳನ್ನು ಪಡೆದುಕೊಳ್ಳಲು ನಿವೇಶನ ಮಾಲೀಕರು ಉತ್ಸುಕರಾಗಿದ್ದಾರೆ. ಈಗಾಗಲೇ ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿವೇಶನದಾರರು ಅಭಿವೃದ್ಧಿ ಶುಲ್ಕ ಪಾವತಿಸಲು ಸಮ್ಮತಿ ಸೂಚಿಸಿದ್ದರು.

> 17 ವರ್ಷಗಳ ಹಿಂದೆ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಖರೀದಿಸಿ ಅತಂತ್ರರಾಗಿದ್ದೇವು. ನಮಗೆ ತಾತ್ಕಾಲಿಕ ನೋಂದಣಿ ಪತ್ರಗಳು ಮಾತ್ರ ದೊರೆತಿತ್ತು. ನಿವೇಶನಗಳನ್ನು ಮಾರಲೂ ಆಗದೇ, ಅಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಲೂ ಆಗದೆ ಅತಂತ್ರರಾಗಿದ್ದೇವು. ಇದೀಗ ಸರ್ಕಾರ ನಮ್ಮ ಕಾನೂನು ತೊಡಕುಗಳನ್ನು ಬಗೆಹರಿಸಿದೆ. ಅಭಿವೃದ್ಮಿ ಶುಲ್ಕ ಪಾವತಿಸಿ, ಬಡಾವಣೆ ಅಭಿವೃದ್ಧಿ ನಿರೀಕ್ಷೆಯಲ್ಲಿದ್ದೇವೆ"
>
> **–ಚಂದ್ರು** । ಪ್ರಾಧಿಕಾರ ಬಡಾವಣೆ, ನಿವೇಶನದಾರರು.

ಅದರಂತೆ ನಿವೇಶನದಾರರು ಡಿಡಿ ಮೂಲಕ ಶುಲ್ಕ ಪಾವತಿಸುತ್ತಿದ್ದಾರೆ. ಎಂದು ಹೇಳಿದರು.

ಪ್ರತಿನಿತ್ಯ ಹತ್ತಾರು ನಿವೇಶನ ಮಾಲೀಕರು ಕಚೇರಿಗೆ ಬಂದು ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ. ಈಗಾಗಲೇ ಅಭಿವೃದ್ಧಿ ಶುಲ್ಕ ಪಾವತಿಸಿದವರಿಗೆ ಮುಂದಿನ ವಾರ ಖಾತೆಗಳನ್ನು ವಿತರಿಸಲಾಗುವುದು. ಹಾಗೂ ಬಡಾವಣೆಗಳ ಸ್ವಚ್ಛತೆ ಕಾರ್ಯಕ್ಕೆ ಚಾಲನೆ ನೀಡಲಾಗುವುದು ಎಂದರು.

ಅಲ್ಲದೆ ಲೇಔಟ್ ಅಭಿವೃದ್ಧಿಗೆ ಅಂದಾಜು ಪಟ್ಟಿ ಸಿದ್ಧಪಡಿಸಲಾಗಿತ್ತು. ಡಿಪಿಆರ್ ಸಿದ್ಧತೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಆದಷ್ಟು ಬೇಗ ಟೆಂಡರ್ ಪ್ರಕ್ರಿಯೆಗಳನ್ನು ಮುಕ್ತಾಯಗೊಳಿಸಿ ಅಭಿವೃದ್ಧಿಗೆ ಚಾಲನೆ ನೀಡಲಾಗುವುದು. ಈಗಾಗಲೇ ಆಯಾ ಇಓಗಳ ಜೊತೆ ಸಭೆ ನಡೆಸಲಾಗಿದ್ದು, ಯಾವುದೇ ಅಡೆತಡೆ ಇಲ್ಲದೆ ಖಾತೆಗಳು ಲಭ್ಯವಾಗಲಿದೆ. ನಿವೇಶನದಾರರು ಆದಷ್ಟು ಬೇಗ ಶುಲ್ಕ ಪಾವತಿಸಿ ಎಂದು ಅವರು ಮನವಿ ಮಾಡಿದರು.

> ಅತಂತ್ರ ಸ್ಥಿತಿಯಲ್ಲಿದ್ದ ಪ್ರಾಧಿಕಾರದ ನಿವೇಶನಗಳ ಕಾನೂನು ತೊಡಕುಗಳನ್ನು ಸಚಿವ ಸಂಪುಟದ ನಿರ್ಣಯದ ಮೂಲಕ ನಮ್ಮ ಸರಕಾರ ಬಗೆಹರಿಸಿದೆ. ನಿಕಟಪೂರ್ವ ಸಂಸದರಾದ ಡಿ.ಕೆ.ಸುರೇಶ್, ಶಾಸಕರಾದ ಇಕ್ಬಾಲ್ ಹುಸೇನ್, ನಮ್ಮ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪರಿಶ್ರಮದಿಂದ ಇದು ಸಾಧ್ಯವಾಗಿದೆ. ಶೀಘ್ರದಲ್ಲೆ ಅಭಿವೃದ್ಧಿ ಶುಲ್ಕ ಪಾವತಿಸಿದ ನಿವೇಶನ ಮಾಲೀಕರಿಗೆ ಖಾತೆ ಹಸ್ತಾಂತರಿಸಲಾಗುವುದು.
>
> **ಎ.ಬಿ.ಚೇತನ್ ಕುಮಾರ್** । ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ.

# ಸಾಕ್ಷರತೆ, ಸಂಖ್ಯಾಜ್ಞಾನ ಹೆಚ್ಚಳಕ್ಕೆ ಕಲಿಕಾ ಹಬ್ಬ

ಕುಕನೂರು: ವಿದ್ಯಾರ್ಥಿಗಳಿಗೆ ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಹೆಚ್ಚಿಸುವ ದೃಷ್ಟಿಯಿಂದ ಕಲಿಕಾ ಹಬ್ಬ ಆಯೋಜಿಸಲು ಸಮಗ್ರ ಶಿಕ್ಷಣ ಇಲಾಖೆ ಸೂಚಿಸಿದ್ದು ವಿದ್ಯಾರ್ಥಿಗಳಿಗೆ ಇದೊಂದು ಉತ್ತಮ ಕಾರ್ಯಕ್ರಮ ಎಂದು ರಾಜ್ಯ ಸರ್ಕಾರ ನೌಕರ ಸಂಘದ ತಾಲೂಕು ಅಧ್ಯಕ್ಷ ಮಹೇಶ್ ಸಬರದ್ ಹೇಳಿದರು.

ಪಟ್ಟಣದ ರಾಯರಡ್ಡಿ ಆಶ್ರಯ ಕಾಲನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಕುಕನೂರು ವಲಯ ಮಟ್ಟದ ಮಕ್ಕಳ ಕಲಿಕಾ ಹಬ್ಬ ಉದ್ಘಾಟಿಸಿ ಮಾತನಾಡಿದ ಅವರು ಒಳಾಂಗಣ ಮತ್ತು ಹೊರಾಂಗಣದ ಮೋಜಿನ ಆಟಗಳು, ಸಂವಾದತ್ಮಕ, ಸೃಜನಾತ್ಮಕ ಚಟುವಟಿಕೆ ಆಯೋಜಿಸಿ ವಿದ್ಯಾರ್ಥಿಗಳಿಗೆ ಸಂತೋಷದಾಯಕ ಅನುಭವಯುಕ್ತ ಕಲಿಕೆಯ ವಾತಾವರಣ ಪ್ರೇರೇಪಿಸಲು ಈ ಕಲಿಕಾ ಹಬ್ಬ ಆಯೋಜನೆ ಉದ್ದೇಶವಾಗಿದೆ ಎಂದರು.

ಮಕ್ಕಳು ಕಲಿಕೆಯಲ್ಲಿ ಆಸಕ್ತಿ ಹೊಂದಬೇಕು. ಕಲಿಕೆ ಎಂಬುದು ಮಕ್ಕಳಿಗೆ ಉತ್ಸಾಹ ದಾಯಕವಾಗಿರಬೇಕು. ವಿಷಯ, ಆಟ, ಸಂಸ್ಕೃತೀ, ಕ್ರೀಯಾ ಚಟುವಟಿಕೆಗಳಲ್ಲಿ ಮಕ್ಕಳು ಸದಾ ಕ್ರೀಯಾಶೀಲರಾಗಿರಬೇಕು. ಮಕ್ಕಳಲ್ಲಿ ವಿಷಯ ಜ್ಞಾನ ಬೆಳೆಯಬೇಕು. ಆ ನಿಟ್ಟಿನಲ್ಲಿ ಶಾಲೆಯಂಗಳ, ಮನೆ, ಶಾಲೆ ಕೊಠಡಿಯಲ್ಲಿ ಮಕ್ಕಳ ಕಲಿಕೆಗೆ ಅನುಗುಣವಾದ ವಾತಾವರಣ ಅವಶ್ಯಕ. ಆ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಕಲಿಕಾ ಹಬ್ಬ ಆಯೋಜನೆ ಮಾಡಿ ಮಕ್ಕಳಲ್ಲಿ ಕಲಿಕಾಸಕ್ತಿ ಹೆಚ್ಚಿಸುವ ಕಾರ್ಯ ಮಾಡುತ್ತಿದೆ ಎಂದು ಮಹೇಶ್ ಸಬರದ್ ಹೇಳಿದರು.




ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪತ್ರಕರ್ತ ಅಮರೇಶ್ವರ್ ಕಂದಗಲ್ ಮಾತನಾಡಿ, ಪಾಲಕರು, ಶಿಕ್ಷಕರು ಮಕ್ಕಳನ್ನು ಕಲಿಕೆಯಲ್ಲಿ ಹಿಂದುಳಿದ ಕಾರಣಕ್ಕೆ ದಡ್ಡನೆಂದು ಸಂಭೋಧಿಸುವುದು ನಕಾರಾತ್ಮಕ ಪರಿಣಾಮ ಬೀರುತ್ತದೆ. ಸಾಕಾರಾತ್ಮಕವಾಗಿ ಮಕ್ಕಳಿಗೆ ಕಲಿಕೆ ವಾತಾವರಣ ನಿರ್ಮಿಸಿ ಎಂದರು.

ತಾಲೂಕ ಪ್ರಾಥಮಿಕ ಶಾಲಾಶಿಕ್ಷಕರ ಸಂಘದ ಅಧ್ಯಕ್ಷ ಮಾರುತೇಶ್ ತಳವಾರ್, ಆರ್.ಪಿ ಫೀರಸಾಬ್ ದಫೇದಾರ, ಶಿಕ್ಷಕ ಉಮೇಶ ಕಂಬಳಿ, ಪ.ಪಂ ಉಪಾಧ್ಯಕ್ಷ ಪ್ರಶಾಂತ ಆರಬೆರಳಿನ್, ಎಸ್.ಡಿ.ಎಂ.ಸಿ ಅಧ್ಯೆಕ್ಷೆ ತೀರ್ಮಾ ನೂರಭಾಷಾ, ಪಪಂ ಸದಸ್ಯೆ ರಾಧಾ ಸಿದ್ದಪ್ಪ ದೊಡ್ಮನಿ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ರುದ್ರಪ್ಪ ಭಂಡಾರಿ, ತಾಲೂಕ ವಚನ ಸಾಹಿತ್ಯ ಪರಿಷತ್ ಅಧ್ಯಕ್ಷ ಈರಯ್ಯ ಕುರ್ತಕೋಟಿ, ಮುಖ್ಯ ಶಿಕ್ಷಕ ನಿಂಗಪ್ಪ ಹ್ಯೆದ್ರಿ, ಬಿ.ಆರ್.ಪಿ ಮಹೇಶ ಅಸೂಟಿ, ಪ್ರಮುಖರಾದ ಮಂಜುನಾಥ ಯಡಿಯಾಪೂರ, ಅಬ್ದುಲ್ ಖದೀರ, ಶಾಂತಾದೇವಿ ಹಿರೇಮಠ, ಶಂಭುಲಿಂಗಯ್ಯ ಶಿರೂರಮಠ, ಪ್ರಭು ಶಿವನಗೌಡ, ಚಿದಾನಂದ ಪತ್ತಾರ, ಗಿರಿಜಾ ನರೇಗಲ್ಲಮಠ, ಲಕ್ಕಪ್ಪ ತಳವಾರ, ಮಾಬು ನೂರಬಾಷ, ಶಾಲೆ ಶಿಕ್ಷಕರು, ಪಾಲಕರು, ಮಕ್ಕಳಿದ್ದರು.

# ಚಿಕ್ಕಬಳ್ಳಾಪುರದಲ್ಲಿ ಹಕ್ಕಿ ಜ್ವರ ಪತ್ತೆ

**ಚಿಕ್ಕಬಳ್ಳಾಪುರ:** ರಾಜ್ಯಾದ್ಯಂತ ತೀವ್ರ ಕುತೂಹಲಕ್ಕೆ ಎಡೆ ಮಾಡಿರುವ ಹಕ್ಕಿ ಜ್ವರ ಪ್ರಕರಣ ತಾಲೂಕಿನ ವರದಹಳ್ಳಿ ಗ್ರಾಮದಲ್ಲಿ ಕಂಡು ಬಂದಿದ್ದು ಜಿಲ್ಲೆಯಲ್ಲಿ ಆತಂಕ ಮೂಡಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರಕ್ಕೆ ಕೇವಲ ನಾಲ್ಕು ಕಿಲೋಮೀಟರ್ ಸಮೀಪ ಇರುವ ವರದಹಳ್ಳಿಯಲ್ಲಿ ಇತ್ತೀಚಿಗೆ 35 ಕೋಳಿಗಳು ಏಕಕಾಲದಲ್ಲಿ ಮೃತಪಟ್ಟಿದ್ದು ಬೆಳಕಿಗೆ ಬಂದಿದ್ದು ಕೂಡಲೇ ಕಾರ್ಯಪ್ರವೃತ್ತರಾಗಿ ಮೃತ ಕೋಳಿಗಳನ್ನು ಪರಿಶೋಧನೆಗೆ ಕಳುಹಿಸಿದ್ದು ಭೂಪಾಲ್‌ನಿಂದ ಪರಿಶೋಧನೆ ವರದಿ ಬಂದಿದ್ದು ಹಕ್ಕಿ ಜ್ವರ ಇರುವುದು ದೃಢಪಟ್ಟಿದೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾಕ್ಟರ್ ಮಹೇಶ್ ತಿಳಿಸಿದರು.

ಹಕ್ಕಿ ಜ್ವರ ಇರುವುದು ಜಿಲ್ಲಾ ಆರೋಗ್ಯ ಇಲಾಖೆ ವ್ಯಾಪಕವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹಕ್ಕಿ ಜ್ವರದ ಬಗ್ಗೆ ಜಾಗೃತಿ ಆಂದೋಲನ ಆರಂಭಿಸಿದ್ದು ಸಾರ್ವಜನಿಕರು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದೆ ಎಂದರು.

ಹಕ್ಕಿ ಜ್ವರ ಪ್ರಕರಣದಲ್ಲಿ ಕೇವಲ ಕೋಳಿಗಳು ಮಾತ್ರ ಮೃತಪಟ್ಟಿದೆಯ ಹೊರತು ಈವರೆಗೂ ಮಾನವರಿಗೆ ಯಾರಿಗೂ ಸಹ ಈ ರೀತಿ ಹಕ್ಕಿ ಜ್ವರದ ಸೋಂಕು ತಗಲಿ ಮೃತ ಪಟ್ಟಿರುವ ಪ್ರಕರಣ ಅಥವಾ ಪಾಸಿಟಿವ್ ಹೊಂದಿರುವ ಪ್ರಕರಣ ನಡೆದಿಲ್ಲ ಎಂದರು.



ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಮನೆ ಮನೆಗೆ ತೆರಳಿ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿ ಜನಜಾಗೃತಿ ಮೂಡಿಸುತ್ತಿದ್ದಾರೆ ಆರೋಗ್ಯ ಇಲಾಖೆಯವರು ನೀಡಿರುವ ಸೂಚನೆಯ ಮೇರೆಗೆ ಗ್ರಾಮಸ್ಥರು ಸಹ ಅರಿವು ಪಡೆದುಕೊಂಡು ತಮ್ಮ ಜೀವವನ್ನು ತಾವು ರಕ್ಷಿಸಿಕೊಳ್ಳುವಂತೆ ನಾವು ಮನವಿ ಮಾಡುತ್ತೇವೆ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಮಹೇಶ್ ತಿಳಿಸಿದರು.

# 156 ಲೀಟರ್ ಗೋವಾ ಮದ್ಯ, ಕಾರು ಜಪ್ತಿ

ಶಿಡ್ಲಘಟ್ಟ: ತಾಲ್ಲೂಕಿನ ಹೊಸಪೇಟೆ-ನಾಗಮಂಗಲ ರಸ್ತೆಯ ಎದ್ದಲತಿಪ್ಪೇನಹಳ್ಳಿ ಗೇಟ್ ಬಳಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಸುಮಾರು 156 ಲೀಟರ್ ಗೋವಾ ಮದ್ಯ ಹಾಗೂ ಮಾರುತಿ ಓಮ್ನಿ ಕಾರನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಅಬಕಾರಿ ಅಪರ ಆಯುಕ್ತ, ಜಂಟಿ ಆಯುಕ್ತ ಹಾಗೂ ಜಿಲ್ಲಾ ಅಬಕಾರಿ ಉಪ ಆಯುಕ್ತರ ನಿರ್ದೇಶನದ ಮೇರೆಗೆ ಚಿಂತಾಮಣಿ ಉಪ ವಿಭಾಗದ ಉಪ ಅಧೀಕ್ಷಕರ ನೇತೃತ್ವದಲ್ಲಿ ಜಂಗಮಕೋಟೆ ಕ್ರಾಸ್ ಬಳಿ ಅಬಕಾರಿ ಅಧಿಕಾರಿಗಳ ತಂಡ ಗಸ್ತು ತಿರುಗುವಾಗ ಖಚಿತ ಮಾಹಿತಿ ಲಭಿಸಿದ್ದು, ಈ ಮೇರೆಗೆ ಅವರು ಹೊಸಪೇಟೆ-ನಾಗಮಂಗಲ ರಸ್ತೆಯ ಎದ್ದಲತಿಪ್ಪೇನಹಳ್ಳಿ ಗೇಟ್ ಬಳಿ ಮಾರುತಿ ಓಮ್ನಿ ಕಾರಿನ ಮೇಲೆ ದಾಳಿ ನಡೆಸಿದ್ದಾರೆ.



ಪರಿಶೀಲನೆಯ ವೇಳೆ, ಕಾರಿನೊಳಗೆ ಗೋವಾ ರಾಜ್ಯದಲ್ಲಿ ಉತ್ಪಾದನೆಯಾದ 18 ಬಾಕ್ಸ್ ಗಳಲ್ಲಿ ಸುಮಾರು 156 ಲೀಟರ್ ಮದ್ಯವನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಪತ್ತೆಯಾಗಿದ್ದು, ಮಾರುತಿ ಓಮ್ನಿ ಕಾರಿನೊಂದಿಗೆ ಜಪ್ತಿ ಮಾಡಲಾಗಿದೆ. ಪರಾರಿಯಾದ ಆರೋಪಿಗಳಾದ ಎಸ್. ರವಿಚಂದ್ರನ್ ಬಿನ್ ಆರ್.ಸುಬ್ರಮಣಿ ಮತ್ತು ಬೆನಕ್‌ರಾಜ್ ಬಿನ್ ಆರ್.ಎನ್.ಉಮೇಶ್ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ. ಈ ಕಾರ್ಯಾಚರಣೆಯಲ್ಲಿ ಚಿಂತಾಮಣಿ ಉಪ ವಿಭಾಗದ ಉಪ ಅಧೀಕ್ಷಕ ಜಿ.ಎಸ್.ಪಾಟೀಲ್, ಅಬಕಾರಿ ನಿರೀಕ್ಷಕರು ಮಂಜುಳ, ರೇಣುಕಾ, ರಾಮು, ಕೆ.ಸಿ.ನಾಗೇಂದ್ರ ಸಿಂಗ್, ಉಪ ನಿರೀಕ್ಷಕ ದೇವರಾಜ್, ಮುಖ್ಯ ಪೇದೆಗಳು ಮೋಹನ್, ನಿತಿನ್, ಹಾಗೂ ಪೇದೆ ಶಿವಸ್ವಾಮಿ ಪಾಲ್ಗೊಂಡಿದ್ದರು.

# ನೊಸಗೆರೆ ಗ್ರಾ.ಪಂ: ಬಹಿರಂಗ ಹರಾಜು ಸಭೆ

**ಮಾಲೂರು:** ನೋಸಗೆರೆ ಗ್ರಾ.ಪಂ.ನಲ್ಲಿ ಕಳೆದ 15 ವರ್ಷಗಳಿಂದ ಸಂಗ್ರಹವಾಗಿದ್ದ ಕೊಳವೆ ಬಾವಿಯ ಪೈಪುಗಳು, ಹಳೆ ಮೋಟರ್ ಗಳು ಕೇಬಲ್ ಹಳೆ ಬೀದಿ ದೀಪಗಳನ್ನು ಬಹಿರಂಗ ಹರಾಜು ನಡೆಸಲಾಗಿದ್ದು 3,55,000 ರೂ.ಗಳು ಸಂಗ್ರಹವಾಗಿದ್ದು, ಈ ಹಣವನ್ನು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಬಳಸಲಾಗುವುದು ಎಂದು ಗ್ರಾ.ಪಂ.ಅಧ್ಯಕ್ಷ ಪಿ.ಎಸ್.ವಿನಯ್ ಗೌಡ ಹೇಳಿದರು.

ತಾಲೂಕಿನ ನೊಸಗೆರೆ ಗ್ರಾಪಂ ಆವರಣದಲ್ಲಿ ಗ್ರಾಪಂ.ನ ವಿವಿಧ ಬಾಬ್ತುಗಳಿಗೆ ನಡೆದ ಬಹಿರಂಗ ಹರಾಜು ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿಯಲ್ಲಿ ಕೊಳವೆ ಬಾವಿಗಳಿಂದ ತೆಗೆದ ಹಳೆಯದಾದ ಪೈಪುಗಳು ದುರಸ್ತಿಯಾದ ಹಳೆ ಮೋಟರ್ ಗಳು ಕೇಬಲ್ ಕಳೆದ 15 ವರ್ಷಗಳಿಂದ ಬಹಿರಂಗ ಹರಾಜು ನಡೆಸಿರಲಿಲ್ಲ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಈ ವಸ್ತುಗಳ ಹರಾಜು ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಪಂಚಾಯಿತಿ ಆವರಣದಲ್ಲಿ ನಡೆಸಿದ ಬಹಿರಂಗ ಹರಾಜು ಸಭೆಯಲ್ಲಿ 22 ಮಂದಿ ಬಿಡ್ ದಾರರು ಭಾಗವಹಿಸಿ ಪೈಪುಗಳು ಹಳೆ ಮೋಟರ್ ಗಳು ಕೇಬಲ್ ದುರಸ್ತಿಯಾಗಿದ್ದ ಬೀದಿ ದೀಪಗಳು ಹರಾಜಿನಲ್ಲಿ ಪಡೆದರು ಹರಾಜಿನಿಂದ ಮೂರು ಲಕ್ಷ 55,000 ರೂಗಳು ಗ್ರಾಮ ಪಂಚಾಯಿತಿಗೆ ಸಂಗ್ರಹವಾಗಿದ್ದು ಹಣವನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮಗಳಲ್ಲಿ ಪೈಪ್ ಲೈನ್, ಪಂಪ ಮೋಟರ್ ದುರಸ್ತಿ ಹಾಗೂ ಇನ್ನಿತರೆ ಅಭಿವೃದ್ಧಿ ಕೆಲಸಗಳಿಗೆ ಈ ಹಣವನ್ನು ಬಳಕೆ ಮಾಡಲಾಗುವುದು ಎಂದರು.



ಗ್ರಾಮ ಪಂಚಾಯಿತಿಗೆ ಸಂಗ್ರಹವಾಗುವ ತೆರಿಗೆ ಹಣದಿಂದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸಿಸಿ ರಸ್ತೆ ಬೀದಿ ದೀಪ ನಿರ್ವಹಣೆ ಹೈಮಾಸ್ ಲೈಟ್ ಗಳ ಅಳವಡಿಕೆ ಸೇರಿದಂತೆ ವಿವಿಧ ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದ್ದು, ಬೇಸಿಗೆಯಲ್ಲಿ ನೀರಿನ ಸಮಸ್ಯೆ ಬಾರದಂತೆ ಮುನ್ನೆಚ್ಚರಿಕೆಯಾಗಿ ಕೊಳವೆ ಬಾವಿ ಕೊರೆಸುವುದು ಹಾಗೂ ಅಳವಡಿಸುವ ಕೆಲಸವನ್ನು ಸಹ ಮಾಡಲಾಗುತ್ತಿದೆ ಎಂದರು

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸದಸ್ಯರುಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸುರೇಶ್ ಬಾಬು, ಕಾರ್ಯದರ್ಶಿ ಲಕ್ಷ್ಮಣ್ ರೆಡ್ಡಿ , ದ್ವಿತೀಯ ದರ್ಜೆ ಸಹಾಯಕ ಪ್ರಸನ್ನ ಕುಮಾರ್, ಬಿಲ್ ಕಲೆಕ್ಟರ್ ವೆಂಕಟೇಶ್,ಸದಸ್ಯರಾದ ಬ್ಯಾಲಹಳ್ಳಿ ಚಂದ್ರಶೇಖರ ಗೌಡ, ನಾರಾಯಣಸ್ವಾಮಿ, ರವಿ, ಮುಖಂಡರಾದ ಮಾದನಹಟ್ಟಿ ರವಿಕುಮಾರ್, ವೆಂಕಟೇಶಪ್ಪ, ಕೆ.ಪಿ.ಮೋಹನ್ ಸೇರಿದಂತೆ ಇನ್ನಿತರರು ಹಾಜರಿದ್ದರು.

# ನೀಲಕಂಠ ಅಗ್ರಹಾರಕ್ಕೆ ಕುಡಿಯುವ ನೀರು ಪೂರೈಕೆ

**ಮಾಲೂರು:** ಮಾಲೂರು ಪಟ್ಟಣಕ್ಕೆ ಕೂಗಳತೆ ದೂರದಲ್ಲಿರುವ ನೀಲಕಂಠ ಅಗ್ರಹಾರ ಗ್ರಾಮದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ ಗ್ರಾಮದಲ್ಲಿ ಮೂಲ ಭೂತ ಸೌಕರ್ಯಗಳು ನೀಡೋದ್ರಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿ ಮಾಧ್ಯಮ ಹಾಗೂ ಪತ್ರಿಕೆಗಳಲ್ಲಿ ಸುದ್ದಿ ಮಾಡಲಾಗಿ ಎಚ್ಚತ್ತ ಅಧಿಕಾರಿಗಳು ಗ್ರಾಮಕ್ಕೆ ಬೇಟಿ ನೀಡಿ ಪರಿಶೀಲಿಸಿದರು.




ತಾಲ್ಲೂಕಿನ ಅರಳೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನೀಲಕಂಠ ಅಗ್ರಹಾರ ಗ್ರಾಮದಲ್ಲಿ ಬೇಸಿಗೆ ಆರಂಭಕ್ಕೂ ಮುನ್ನವೇ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಗ್ರಾಮಸ್ಥರು, ಗ್ರಾ.ಪಂ.ಸದಸ್ಯ ಶ್ಯಾಮಣ್ಣ ಆಕ್ರೋಶ ವ್ಯಕ್ತಪಡಿಸಿದ್ದರು.

ತಾಲ್ಲೂಕು ಪಂಚಾಯಿತಿ ಇಓ ವಿ.ಕೃಷ್ಣಪ್ಪ ತಕ್ಷಣ ಅರಳೇರಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅವರಿಗೆ ಪತ್ರ ಮುಖೇನಾ ಸರ್ಕಾರಗಳು ಗ್ರಾಮೀಣ ಪ್ರದೇಶದ ಹಳ್ಳಿಗಳಿಗೆ ಮೊದಲ ಆದ್ಯತೆಯಂತೆ ಶ್ರೀಘ್ರವಾಗಿ ಗ್ರಾಮಕ್ಕೆ ಬೇಟಿ ನೀಡಿ ಗ್ರಾಮದಲ್ಲಿನ ಸಮಸ್ಯೆಯನ್ನು ಬಗೆಹರಿಸಿ ನಮ್ಮ ಗಮನಕ್ಕೆ ತರುವಂತೆ ಸೂಚನೆ ನೀಡಿ ಎಂದು ಆದೇಶಿಸಿದರು, ಅದರಂತೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಹಾಗೂ ವಾಟರ್ ಮ್ಯಾನ್ ನೀಲಕಂಠ ಆಗ್ರಹಾರ ಗ್ರಾಮದಲ್ಲಿ ಕುಡಿಯುವ ನೀರಿಗೆ ಸ್ವಚ್ಛತೆ ಇಲ್ಲದೆ ರೋಗರುಜುನಗಳು ಬಾರದಂತೆ ಮುನ್ನೆಚ್ಚರಿಕೆವಹಿಸಿ ಸ್ವಚ್ಛತೆ ಕಾರ್ಯ ಕೈಗೊಳ್ಳಬೇಕು. ಅಲ್ಲದೆ ಬೇಸಿಗೆ ಸಮೀಪಿಸಿರುವುದರಿಂದ ನೀರಿಗೆ ಯಾವುದೇ ರೀತಿ ನೀರಿಗೆ ಅಹಾಕಾರ ಉಂಟಾಗದಂತೆ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಜಲಗಾರರಿಗೆ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಸೂಚಿಸಿದರು. ಗ್ರಾಪಂ.ಸದಸ್ಯ ನೀಲಕಂಠ ಅಗ್ರಹಾರಶಾಮಣ್ಣ, ಪಿಡಿಒ ಎಸ್.ಕೆ.ಸುಮತಿ, ಜಲಗಾರರಾದ ಅನಿಲ್ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

# ಬಜೆಟ್ ಅನುದಾನ: ಪ್ರಾಮಾಣಿಕವಾಗಿ ಖರ್ಚಾಗುವಂತಹ ಯೋಜನೆ ರೂಪಿಸಿ

ಶಿಡ್ಲಘಟ್ಟ : ಗುತ್ತಿಗೆದಾರರು ಮತ್ತು ಸಮಾಲೋಚಕರ ಅಭಿಪ್ರಾಯದ ಮೇರೆಗೆ ನೀರಾವರಿ ಯೋಜನೆ ಕೈಗೆತ್ತಿಕೊಳ್ಳದೆ ಬಜೆಟ್ ಅನುದಾನಗಳು ಪ್ರಾಮಾಣಿಕವಾಗಿ ಖರ್ಚಾಗುವಂತಹ ಯೋಜನೆಗಳನ್ನು ರೂಪಿಸಬೇಕು ಎಂದು ಶಾಶ್ವತ ನೀರಾವರಿ ಹೋರಾಟಗಾರರಾದ ಆರ್. ಆಂಜನೇಯರೆಡ್ಡಿ ಅವರು ಶುಕ್ರವಾರ ನಡೆಯುವ ಸರ್ಕಾರದ ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ.

ಎತ್ತಿನಹೊಳೆ ಯೋಜನೆ ರೂಪಿಸಿದ್ದು ಬಯಲು ಸೀಮೆಯ ಅವಿಭಾಜ್ಯ ಜಿಲ್ಲೆಗಳಾದ ಕೋಲಾರ ಹಾಗು ಚಿಕ್ಕಬಳ್ಳಾಪುರಕ್ಕೆ ಆದರೆ ನೀರು ಕೊಟ್ಟಿದ್ದು ತುಮಕೂರಿಗೆ



ಇಚ್ಛಾ ಶಕ್ತಿ ಇಲ್ಲದ ಆಳುವ ಸರ್ಕಾರಗಳು ಅವಿಭಾಜ್ಯ ಜಿಲ್ಲೆಗಳನ್ನು ಕಡೆಗಣಿಸುತ್ತಿವೆ ಎಂದ ಅವರು ಎತ್ತಿನಹೊಳೆ ಯೋಜನೆ 8 ಸಾವಿರ ಕೋಟಿ ರೂ.ಗಳಿಂದ ಈಗ 24 ಸಾವಿರ ಕೋಟಿ ರೂ.ಗಳಿಗೆ ಹೋಗಿದ್ದು ಈ ಯೋಜನೆ ಫಲಿತಾಂಶ ನೀಡುವ ಯಾವ ಸೂಚನೆಯೂ ಇಲ್ಲ,ಭದ್ರಾ ಮೇಲ್ದಂಡೆ ಯೋಜನೆಗೆ ಆರಂಭದಲ್ಲಿ 2 ಸಾವಿರ ಕೋಟಿ ರೂ.ಗಳ ಯೋಜನಾ ವೆಚ್ಚ ಇದ್ದದ್ದು ಇದೀಗ 20 ಸಾವಿರ ಕೋಟಿ ರೂ.ಗಳಿಗೆ ಏರಿದೆ ,ಅದರೆ ಪೂರ್ಣ ಫಲಿತಾಂಶ ಯಾರಿಗೂ ಸಿಗುತ್ತಿಲ್ಲ, ತುಂಗಭದ್ರಾ ಜಲಾಶಯ ದಲ್ಲಿ ಹೂಳು ತುಂಬಿ ಆಂಧ್ರ ಪ್ರದೇಶಕ್ಕೆ ಹೆಚ್ಚಿನ ನೀರು ಹರಿದು ಹೋಗುತ್ತಿದೆ,ಆಲಮಟ್ಟಿ ಯೋಜನೆಯಿಂದ ಸಿಗಬೇಕಾದಷ್ಟು ಪ್ರಯೋಜನ ಪಡೆದುಕೊಳ್ಳಲು ವಿಫಲವಾಗಿದ್ದೇವೆ, ಮಹದಾಯಿ ವ್ಯಾಜ್ಯ ಪರಿಹಾರವಾಗುವ ಲಕ್ಷಣ ಕಾಣುತ್ತಿಲ್ಲ , ಮಹತ್ವದ ಮೇಕೆದಾಟು ಕುಡಿಯುವ ನೀರು ಯೋಜನೆ ಚುನಾವಣಾ ವಿಷಯ ಆಗುತ್ತದೆ ಆದರೆ ಯೋಜನೆ ಮಾಡುವ ಬದ್ಧತೆ ಯಾವ ಪಕ್ಷಕ್ಕೂ ಇಲ್ಲ ಎಂದು ಹೇಳಿದರು.

ನೀರಾವರಿಗೆ ಬಜೆಟ್ ಗಾತ್ರ ದೊಡ್ಡದಾಗುತ್ತಿದೆಯೇ ಹೊರತು ನೀರಾವರಿ ಪ್ರದೇಶ ವಿಸ್ತರಣೆ ಆಗುತ್ತಿಲ್ಲ ನೀರಾವರಿಗೆ ಹಂಚಿಕೆ ಆಗಿರುವ ಹಣವನ್ನು ಬಳಸಿಕೊಳ್ಳಲು ನಮ್ಮಿಂದ ಆಗುತ್ತಿಲ್ಲ ಎಂದರು.

ಇತ್ತೀಚಿನ 2-3 ದಶಕಗಳನ್ನು ನಾವು ಗಮನಿಸಿದರೆ ಎಲ್ಲಾ ನೀರಾವರಿ ಯೋಜನೆಗಳು ಬಿಳಿಯಾನೆಯಾಗಿದ್ದು, ಯೋಜನೆಗಳಿಂದ ಪ್ರಯೋಜನ ಎಂಬುದು ಮರೀಚಿಕೆಯಾಗಿದೆ ಎಂದು ಅವರು ವಿಷಾಧ ವ್ಯಕ್ತಪಡಿಸಿದರು.

# 10 ಭಾಷೆ ಕಲಿಯುವಂತೆ ಪ್ರೋತ್ಸಾಹಿಸುತ್ತಿದ್ದೇನೆ: ಆಂಧ್ರ ಸಿಎಂ

**ನವದೆಹಲಿ:** "ಜ್ಞಾನ ಬೇರೆ, ಭಾಷೆ ಬೇರೆ. ನಾನು ಈಗ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಭಾಷೆಗಳೂ ಸೇರಿ 10 ಭಾಷೆಗಳನ್ನು ಕಲಿಯುವಂತೆ ಪ್ರೋತ್ಸಾಹಿಸುತ್ತಿದ್ದೇನೆ. ವಿದ್ಯಾರ್ಥಿಗಳು ಭಾಷೆ ಕಲಿತು ಹೊರಹೋಗಿ ಕೆಲಸ ಮಾಡಬಹುದು. ವಿದೇಶದಲ್ಲಿ ಭಾರತೀಯ ವಿದ್ಯಾರ್ಥಿಗಳ ಸೇವೆಯ ಅವಶ್ಯಕತೆ ಇದೆ. ಹಾಗಾಗಿ ನಾನು ಕೇವಲ ಮೂರು ಭಾಷೆ ಮಾತ್ರವಲ್ಲ, ಬಹುಭಾಷೆಗಳನ್ನೂ ಪ್ರೋತ್ಸಾಹಿಸುತ್ತಿದ್ದೇನೆ" ಎಂದು ಆಂಧ್ರ ಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ತಿಳಿಸಿದರು.

ಹಿಂದಿ ಕಲಿಯುವುದೂ ಒಳ್ಳೆಯದೇ, ಏಕೆಂದರೆ,: "ನಾವು ನಮ್ಮ ರಾಜ್ಯದ ಮಾತೃಭಾಷೆ ತೆಲುಗು ಭಾಷೆಯನ್ನೂ ಪ್ರೋತ್ಸಾಹಿಸಬೇಕು. ಅದರ ಜೊತೆಗೆ, ಇಂಗ್ಲಿಷ್ ಅಂತಾರಾಷ್ಟ್ರೀಯ ಭಾಷೆ. ಬದುಕು ನಡೆಸಲು ಬೇಕು. ಹಾಗಾಗಿ, ಅದನ್ನೂ ಪ್ರೋತ್ಸಾಹಿಸಬೇಕಿದೆ. ಇನ್ನು, ಹಿಂದಿ ಕಲಿಯುವುದೂ ಒಳ್ಳೆಯದೇ. ಹಿಂದಿ ಕಲಿತರೆ ನಾವು ಇತರರೊಂದಿಗೆ ಸುಲಭವಾಗಿ ಬೆರೆಯಬಹುದು" ಎಂದು ನಾಯ್ಡು ಅಭಿಪ್ರಾಯಪಟ್ಟರು.

ಕ್ಷೇತ್ರ ಮರುವಿಂಗಡಣೆ ಚರ್ಚೆ: ಲೋಕಸಭಾ ಕ್ಷೇತ್ರ ಮರುವಿಂಗಡಣೆಯ ಕುರಿತ ಅನುಮಾನಗಳಿಗೆ ಸ್ಪಷ್ಟನೆ



ನೀಡಿದ ಅವರು, "ಕ್ಷೇತ್ರ ಮರುವಿಂಗಡಣೆ ಜನಸಂಖ್ಯಾ ನಿರ್ವಹಣೆಯಿಂದ ಪ್ರತ್ಯೇಕವಾದ ವಿಚಾರ. ಇದನ್ನು ಸದ್ಯ ನಡೆಯುತ್ತಿರುವ ರಾಜಕೀಯ ಚರ್ಚೆಗಳೊಂದಿಗೆ ಸೇರಿಸಬಾರದು" ಎಂದರು.

"ಕ್ಷೇತ್ರ ಮರುವಿಂಗಡಣೆ ಎಂಬುದು ನಿರಂತರ ಪ್ರಕ್ರಿಯೆಯಾಗಿದ್ದು, ಪ್ರತಿ 25 ವರ್ಷಗಳಿಗೊಮ್ಮೆ ನಡೆಯುತ್ತದೆ. ಎಲ್ಲಾ ವಿಚಾರಗಳನ್ನು ಒಂದೇ ಬಾರಿಗೆ ಜೋಡಿಸಬೇಡಿ. ಕ್ಷೇತ್ರ ಮರುವಿಂಗಡಣೆ ಮತ್ತು ಜನಸಂಖ್ಯಾ ನಿರ್ವಹಣೆ ಎಂಬುದು ಬೇರೆ ಬೇರೆ ಸಂಗತಿಗಳು. ನಾನು ರಾಷ್ಟ್ರೀಯ ಹಿತಾಸಕ್ತಿಯ ಬಗ್ಗೆ ಮಾತನಾಡುತ್ತಿದ್ದೇನೆ" ಎಂದರು.

ಇದೇ ವೇಳೆ, "ಈ ಕುರಿತು ವಿಭಿನ್ನ ಅಭಿಪ್ರಾಯಗಳಿವೆ. ಅದನ್ನು ನಾವು ಸ್ವೀಕರಿಸುತ್ತೇವೆ. ಆದರೆ ಎಲ್ಲ ವಿಷಯಗಳನ್ನು ಒಂದೇ ಬಾರಿ ಒಟ್ಟಿಗೆ ಸೇರಿಸಬೇಡಿ" ಎಂದು ಮನವಿ ಮಾಡಿದರು.

ಜನಸಂಖ್ಯಾ ಲಾಭಾಂಶ ಪಡೆಯುವುದು ಹೇಗೆ: "ನಾನು ಜನಸಂಖ್ಯೆ ಕುರಿತ ನನ್ನ ಅಭಿಪ್ರಾಯವನ್ನು ಬದಲಿಸಿದ್ದೇನೆ. ಜನಸಂಖ್ಯಾ ಬೆಳವಣಿಗೆಯನ್ನು ನಾನು ಪೋತ್ಸಾಹಿಸುತ್ತಿದ್ದೇನೆ. ಭಾರತ ಜನಸಂಖ್ಯಾ ಲಾಭಾಂಶದ ಅತಿ ದೊಡ್ಡ ಅನುಕೂಲ ಪಡೆಯಲು ಸಾಧ್ಯವಿದೆ. ನಾವೇನಾದರೂ ಈ ಜನಸಂಖ್ಯಾ ಲಾಭವನ್ನು ಭವಿಷ್ಯಕ್ಕೋಸ್ಕರ ಸೂಕ್ತವಾಗಿ ನಿಭಾಯಿಸಿದರೆ ಭಾರತ ಮತ್ತು ಭಾರತೀಯರೇ ಶ್ರೇಷ್ಠರಾಗಬಹುದು. ಜಾಗತಿಕ ಸಮುದಾಯಗಳು ಸೇವೆಗಳಿಗಾಗಿ ಭಾರತೀಯರನ್ನು ಆಶ್ರಯಿಸಿವೆ. ಇದು ಕೇವಲ ರಾಜಕೀಯ ವಿಷಯವಲ್ಲ. ನಮ್ಮಲ್ಲಿ ದೇಶಾಭಿಮಾನ ಇರಬೇಕು. ನೀವೇನಾದರೂ ವಿಶ್ವಾದ್ಯಂತ ಹೋಗುವಿರಾದರೆ, ಸಂಪತ್ತು ಸೃಷ್ಟಿ ಮತ್ತು ಜನಸಂಖ್ಯೆಯ ನಡುವೆ ಪರಸ್ಪರ ಸಂಘರ್ಷವನ್ನು ಕಾಣುವಿರಿ. ನಿಮ್ಮಲ್ಲಿ ಹೆಚ್ಚು ಹಣ ಇರುತ್ತೆ, ಆದರೆ ಮಕ್ಕಳೇ ಇರುವುದಿಲ್ಲ" ಎಂದು ಸಿಎಂ ನಾಯ್ಡು ಹೇಳಿದರು.

# ಬಬ್ಬರ್ ಖಾಲ್ಸ್ ಗುಂಪಿನ ಉಗ್ರ ಸೆರೆ

**ಲಕ್ನೋ:** ಪಾಕಿಸ್ತಾನದ ಐಎಸ್ಐ ನಂಟು ಹೊಂದಿರುವ ಭಯೋತ್ಪಾದಕ ಗುಂಪು ಬಬ್ಬರ್ ಖಾಲ್ಸ್ ಇಂಟರ್‌ನ್ಯಾಶನಲ್‌ನ (ಬಿಕೆಐ) ಓರ್ವ ಉಗ್ರನನ್ನು ಉತ್ತರ ಪ್ರದೇಶದ ಕೌಶಂಬಿಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆ ಮತ್ತು ಪಂಜಾಬ್ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ಈತನನ್ನು ಬಂಧಿಸಿದ್ದಾರೆ.

ಶಂಕಿತ ಭಯೋತ್ಪಾದಕನನ್ನು ಲಾಜರ್ ಮಾಸಿಹ್ ಎಂದು ಗುರುತಿಸಲಾಗಿದೆ. ಈತ ಪಂಜಾಬ್‌ನ ಅಮೃತಸರದ ರಾಮದಾಸ್ ಪ್ರದೇಶದ ಕುರ್ಲಿಯನ್ ಗ್ರಾಮದ ನಿವಾಸಿ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೌಶಂಬಿಯ ಕೊಖ್ರಾಜ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮುಂಜಾನೆ 3.20ರ ಸುಮಾರಿಗೆ ನಡೆಸಿದ ಕಾರ್ಯಾಚರಣೆಯಲ್ಲಿಈತನನ್ನು ಬಂಧಿಸಲಾಗಿದೆ ಎಂದು ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆ, ಕಾನೂನು ಮತ್ತು ಸುವ್ಯವಸ್ಥೆ ಡಿಜಿಪಿ ಅಮಿತಾಬ್ ಯಶ್ ತಿಳಿಸಿದ್ದಾರೆ.

ಲಭ್ಯವಾಗಿರುವ ಮಾಹಿತಿ ಪ್ರಕಾರ, ಬಂಧಿತ ಉಗ್ರ ಜರ್ಮನಿ ಮೂಲದ ಬಬ್ಬರ್ ಖಾಲ್ಸಾ ಇಂಟರ್ನ್ಯಾಷನಲ್ ಘಟಕದ ಮುಖ್ಯಸ್ಥ ಸ್ವರ್ಣ್



ಸಿಂಗ್ ಅಲಿಯಾಸ್ ಜೀವನ್ ಫೌಜಿಗಾಗಿ ಕಾರ್ಯ ನಿರ್ವಹಿಸುತ್ತಿದ್ದ. ಹಾಗೆಯೇ ಪಾಕಿಸ್ತಾನದ ಐಎಸ್ಐ ಜೊತೆಗೂ ನೇರ ಸಂಪರ್ಕ ಹೊಂದಿದ್ದಾನೆ.

ಈತ 2024ರ ಸೆಪ್ಟೆಂಬರ್ 24ರಂದು ಪಂಜಾಬ್‌ನಲ್ಲಿ ನ್ಯಾಯಾಂಗ ಬಂಧನದಿಂದ ತಪ್ಪಿಸಿಕೊಂಡಿದ್ದ. ಇದೀಗ ಉಗ್ರನಿಂದ ಕೆಲವು ಸ್ಫೋಟಕ ವಸ್ತುಗಳು ಮತ್ತು ಅಕ್ರಮ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ ಮೂರು ಸಕ್ರಿಯ ಹ್ಯಾಂಡ್ ಗ್ರೆನೇಡ್‌ಗಳು, ಎರಡು ಸಕ್ರಿಯ ಡಿಟೋನೇಟರ್‌ಗಳು, ಒಂದು ವಿದೇಶಿನಿರ್ಮಿತ ಪಿಸ್ತೂಲ್ ಮತ್ತು ವಿದೇಶಿನಿರ್ಮಿತ 13 ಕಾರ್ಟ್ರಿಡ್ಜ್‌ಗಳಿವೆ. ಇದರ ಜೊತೆಗೆ ಬಿಳಿ ಬಣ್ಣದ ಸ್ಫೋಟಕ ಪುಡಿ, ಗಾಜಿಯಾಬಾದ್ ವಿಳಾಸದ ಆಧಾರ್ ಕಾರ್ಡ್ ಮತ್ತು ಸಿಮ್ ಕಾರ್ಡ್ ಇಲ್ಲದ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ವಿಧಾನಸಭೆಯಲ್ಲಿ ಯಶೋಗಾಥೆಯ ಪ್ರಸ್ತಾಪ

**ಪ್ರಯಾಗ್‌ರಾಜ್:** ಇತ್ತೀಚೆಗೆ ಮುಗಿದ ಮಹಾ ಕುಂಭಮೇಳದ ಯಶಸ್ಸು ವಿಶ್ವವೇ ನಿಬ್ಬೆರಗಾಗುವಂತೆ ಮಾಡಿದೆ. 66 ಕೋಟಿ ಭಕ್ತರು ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ್ದಾರೆ. 3 ಲಕ್ಷ ಕೋಟಿಗೂ ಅಧಿಕ ವಹಿವಾಟು ಕೂಡ ಇಲ್ಲಿ ನಡೆದಿದೆ. ಇದರ ಮಧ್ಯೆ, ದೋಣಿ ಚಾಲಕರ ಕುಟುಂಬವೊಂದು 30 ಕೋಟಿ ರೂಪಾಯಿ ಗಳಿಕೆ ಮಾಡಿದೆ ಎಂದರೆ ನೀವು ನಂಬಲೇಬೇಕು.

ಪಿಂಟು ಮಹಾರಾ ಎಂಬ ದೋಣಿ ಚಾಲಕರ ಕುಟುಂಬವು ಈ ಸಾಧನೆ ಮಾಡಿದೆ. 45 ದಿನಗಳು ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ತಮ್ಮ 70 ದೋಣಿಗಳಿಂದ 30 ಕೋಟಿ ರೂಪಾಯಿ ವಹಿವಾಟು ನಡೆದಿದೆ. 300 ಜನರು ಇದರಲ್ಲಿ ಕೆಲಸ ಮಾಡಿದ್ದೇವೆ ಎಂದು ಹೇಳಿಕೊಂಡಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಕೂಡ ವಿಧಾನಸಭೆಯಲ್ಲಿ ಮಂಗಳವಾರ ಮಾಹಿತಿ ನೀಡಿದ್ದಾರೆ. ದೋಣಿ ಚಾಲಕರನ್ನು ಸರ್ಕಾರ ಒಕ್ಕಲೆಬ್ಬಿಸಿದೆ ಎಂಬ ವಿಪಕ್ಷಗಳ ಆರೋಪಕ್ಕೆ ಇದು ತಕ್ಕ ಉತ್ತರ ಎಂದೂ ಹೇಳಿದ್ದಾರೆ.

ಕೋಟಿ ಗಳಿಕೆ ಬಗ್ಗೆ ಪಿಂಟು ಹೇಳಿದ್ದಿಷ್ಟು: ದೋಣಿ ಚಾಲನೆ ಮಾಡುವ





ಕುಟುಂಬದವರಾದ ಪಿಂಟು ಮಹಾರಾ ತಮ್ಮ ಅನುಭವವನ್ನು ಹಂಚಿಕೊಂಡಿದ್ದು, 45 ದಿನಗಳ ಭವ್ಯ ಧಾರ್ಮಿಕ ಉತ್ಸವದಲ್ಲಿ ಭಕ್ತರು ಮತ್ತು ಯಾತ್ರಿಕರನ್ನು ಸಾಗಿಸಲು 70 ದೋಣಿಗಳನ್ನು ಹೊಂದಿದ್ದೆವು. ಇದಕ್ಕಾಗಿ ಬ್ಯಾಂಕ್ ಸಾಲ, ಆಭರಣಗಳನ್ನು ಅಡಮಾನ ಇಟ್ಟಿದ್ದೆವು. ದೊಡ್ಡ ಮೊತ್ತದಲ್ಲಿ ನಾವು ಹೂಡಿಕೆ ಮಾಡಿದ್ದೆವು. ಆದರೆ, ಇದೆಲ್ಲವನ್ನೂ ಮೀರಿದ ಲಾಭವಾಗಿದೆ ಎಂದು ತಿಳಿಸಿದರು.

300ಕ್ಕೂ ಹೆಚ್ಚು ಜನರು ದೋಣಿ ಚಾಲನೆಯಲ್ಲಿ ತೊಡಗಿದ್ದೆವು. ಪ್ರಯಾಗ್‌ರಾಜ್‌ಗೆ ಬಂದ ಭಕ್ತರಿಗೆ ದೋಣಿ ವಿಹಾರ, ಸ್ನಾನದ ವ್ಯವಸ್ಥೆ ಮತ್ತು ಇತರ ಸೇವೆಗಳಲ್ಲಿ ನೀಡಿದ್ದೇವೆ. ಇದರಿಂದ ನಾವು ದೊಡ್ಡ ಮೊತ್ತವನ್ನು (30 ಕೋಟಿ ರೂಪಾಯಿ) ಪಡೆದಿದ್ದೇವೆ. ಗಂಗಾಮಾತೆ ನಮ್ಮ ಕಷ್ಟವನ್ನು ಅರಿತು ಫಲ ನೀಡಿದಳು ಎಂದ ಅವರು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇದೇ ವೇಳೆ ಕೃತಜ್ಞತೆ ಸಲ್ಲಿಸಿದರು.

12 ವರ್ಷಗಳ ನಂತರ ಮತ್ತೊಮ್ಮೆ ನಡೆಯುವ ಕುಂಭಮೇಳದಲ್ಲಿ ಭಾಗವಹಿಸುವ ಆಶಯವನ್ನು ವ್ಯಕ್ತಪಡಿಸಿದರು. ಸ್ಥಳೀಯ ಕಾರ್ಮಿಕರು ಮತ್ತು ವ್ಯಾಪಾರಿಗಳ ಮೇಲೆ ದಯಾಳುವಾಗಿತ್ತು. ನಮ್ಮನ್ನು ಶೋಷಿಸಲಾಗಿತ್ತು ಎಂಬುದು ಸುಳ್ಳು ಎಂದು ವಿರೋಧ ಪಕ್ಷಗಳ ಹೇಳಿಕೆಯನ್ನು ತಳ್ಳಿಹಾಕಿದರು.

ವಿಧಾನಸಭೆಯಲ್ಲೂ 'ದೋಣಿ' ಯಶೋಗಾಥೆ: ಜನವರಿ 13 ರಿಂದ ಫೆಬ್ರವರಿ 26 ರವರೆಗೆ 45 ದಿನಗಳ ಕಾಲ ನಡೆದ ಮಹಾಕುಂಭದಲ್ಲಿ ದೋಣಿ ಚಾಲಕರ ಗಳಿಕೆಯ ಯಶೋಗಾಥೆಯ ಬಗ್ಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಮಂಗಳವಾರ ವಿಧಾನಸಭೆಯಲ್ಲಿ ಹಂಚಿಕೊಂಡರು.

"ಹಲವಾರು ದೋಣಿ ಚಾಲಕರ ಕುಟುಂಬವೊಂದು ಮಹಾಕುಂಭದಲ್ಲಿ 30 ಕೋಟಿ ರೂಪಾಯಿಗಳನ್ನು ಗಳಿಸಿದೆ. ಇದರರ್ಥ ಪ್ರತಿ ದೋಣಿ 45 ದಿನಗಳಲ್ಲಿ 23 ಲಕ್ಷ ರೂ.ಗಳನ್ನು ಗಳಿಸಿತು. ಅಂದರೆ ದಿನಕ್ಕೆ ಸುಮಾರು 50 ರಿಂದ 52 ಸಾವಿರ ರೂಪಾಯಿ ಆದಾಯ ಬಂದಿದೆ ಎಂದು ತಿಳಿಸಿದರು.

ಮಹಾಕುಂಭಮೇಳದಲ್ಲಿ ದೋಣಿ ಚಾಲಕರ ಮೇಲೆ ಸರ್ಕಾರ ದಬ್ಬಾಳಿಕೆ ಮಾಡಿದೆ ಎಂದು ಸಮಾಜವಾದಿ ಪಕ್ಷದ ಆರೋಪಗಳನ್ನು ಈ ಯಶೋಗಾಥೆಯು ಅಳಿಸಿ ಹಾಕಿದೆ. ಜನರು ಉತ್ತಮವಾಗಿ ವ್ಯಾಪಾರ ನಡೆಸಿ ಬದುಕು ಕಟ್ಟಿಕೊಂಡಿದ್ದಾರೆ ಎಂದು ಹೇಳಿದರು.

# ಹಮಾಸ್‌ಗೆ ಡೋನಾಲ್ಡ್ ಟ್ರಂಪ್ ಎಚ್ಚರಿಕೆ

**ವಾಷಿಂಗ್ಟನ್:** ಇಸ್ರೇಲ್‌ನ ಉಳಿದ ಒತ್ತೆಯಾಳುಗಳನ್ನು ಕೂಡಲೇ ಬಿಡುಗಡೆ ಮಾಡಿ. ಇಲ್ಲದ್ದರೆ, ಗಾಜಾವನ್ನು ನಾಶ ಮಾಡುವ ಎಚ್ಚರಿಕೆಯನ್ನು ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ನೀಡಿದ್ದು, ಹಮಾಸ್‌ಗೆ ಪಲಾಯನ ಮಾಡುವುದೊಂದೇ ಈಗ ಉಳಿದಿರುವ ದಾರಿ ಎಂದಿದ್ದಾರೆ.

ಇಸ್ರೇಲ್‌ಗೆ ಬೆಂಬಲವಾಗಿ ನಿಂತಿರುವ ಟ್ರಂಪ್, "ಗಾಜಾ ನಾಶ ಮಾಡಲು ಇಸ್ರೇಲ್‌ಗೆ ಬೇಕಾದ ಅಗತ್ಯ ನೆರವನ್ನು ಕಳುಹಿಸಲಾಗುವುದು. ಈ ಕೂಡಲೇ ಒತ್ತೆಯಾಳುಗಳನ್ನು ಬಿಡುಗಡೆ ಮಾಡಿ. ನೀವು ಹತ್ಯೆ ಮಾಡಿದ ಎಲ್ಲಾ ಮೃತದೇಹಗಳು ತಕ್ಷಣವೇ ಇಸ್ರೇಲ್‌ಗೆ ಮರಳಬೇಕು ಅಥವಾ ಇಲ್ಲಿಗೆ ಎಲ್ಲವೂ ಮುಗಿದಂತೆ ಎಂದೇ ಭಾವಿಸಿ" ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದಿದ್ದಾರೆ.

ಒತ್ತೆಯಾಳುಗಳ ಬಿಡುಗಡೆ ಸಂಬಂಧ ನಡೆದ ಸಭೆಯ ಬಳಿಕ ಟ್ರಂಪ್ ಈ ಎಚ್ಚರಿಕೆ ನೀಡಿದ್ದು, "ಇದು ಕಡೆಯ ಎಚ್ಚರಿಕೆ. ಹಮಾಸ್ ನಾಯಕರು ಈ ಕೂಡಲೇ ಗಾಜಾ ತೊರೆಯಬೇಕು. ನಿಮಗೆ ಇನ್ನೂ ಅವಕಾಶವಿದೆ" ಎಂದು ಹೇಳಿದ್ದಾರೆ.

"ಗಾಜಾದ ಜನರೇ ನಿಮಗಾಗಿ ಸುಂದರ ಭವಿಷ್ಯ ಕಾಯುತ್ತಿದೆ. ಆದರೆ, ನೀವು ಒತ್ತೆಯಾಳುಗಳನ್ನು ನಿಮ್ಮ ಬಳಿಯೇ ಇಟ್ಟುಕೊಂಡರೆ ನೀವು ಸತ್ತಂತೆ" ಎಂದು ಟ್ರಂಪ್ ತಿಳಿಸಿದ್ದಾರೆ.

"ಅಕ್ಟೋಬರ್ 7ರ ದಾಳಿಯಲ್ಲಿ ವಶಪಡಿಸಿಕೊಂಡ ಉಳಿದ ಒತ್ತೆಯಾಳುಗಳನ್ನು ಹಮಾಸ್ ಹಸ್ತಾಂತರಿಸದಿದ್ದರೆ ನೀವು ಊಹಿಸಲು ಅಸಾಧ್ಯವಾದ



ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ" ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಸಿದ್ದರು.

ಮೊದಲ ಹಂತದ ಕಂದನ ವಿರಾಮ ಮುಗಿದಿದ್ದು, ಆರು ವಾರಗಳಲ್ಲಿ ಇಸ್ರೇಲ್ ಒತ್ತೆಯಾಳುಗಳು ಮತ್ತು ಜೈಲಿನಲ್ಲಿದ್ದ ಪ್ಯಾಲೆಸ್ತೇನಿ ಖೈದಿಗಳ ವಿನಿಮಯ ನಡೆದಿದೆ. ಮೊದಲ ಹಂತದ ಕದನ ವಿರಾಮವನ್ನು ಏಪ್ರಿಲ್ ಮಧ್ಯಭಾಗದವರೆಗೆ ವಿಸ್ತರಿಸಬೇಕು ಎಂದು ಇಸ್ರೇಲ್ ತಿಳಿಸಿದೆ. ಆದರೆ, ಹಮಾಸ್ ಯುದ್ಧವನ್ನು ಶಾಶ್ವತವಾಗಿ ಅಂತ್ಯಕ್ಕೆ ಕೊಂಡೊಯ್ಯುವ ಎರಡನೇ ಹಂತದ ಒಪ್ಪಂದ ಮುಂದುವರೆಸಲು ಸೂಚಿಸಿದೆ. ಇಸ್ರೇಲ್ ಗಾಜಾಕ್ಕೆ ಎಲ್ಲಾ ಸರಕು ಮತ್ತು ಪೂರೈಕೆ ಪ್ರವೇಶವನ್ನು ನಿಲ್ಲಿಸುವ ಬೆದರಿಕೆ ಹಾಕಿದೆ. ಹಮಾಸ್ ನಿಜವಾಗಿಯೂ ತೀವ್ರ ಆಘಾತಗಳನ್ನು ಅನುಭವಿಸಿದೆ. ಆದರೆ ಅದನ್ನು ಇನ್ನೂ ಸೋಲಿಸಿಲ್ಲ. ನಮ್ಮ ಉದ್ದೇಶ ಇನ್ನೂ ಈಡೇರಿಲ್ಲ ಎಂದು ಇಸ್ರೇಲ್‌ನ ಹೊಸ ಮಿಲಿಟರಿ ಮುಖ್ಯಸ್ಥ ಇಯಾಲ್ ಜಮೀರ್ ಬುಧವಾರ ಹೇಳಿದ್ದಾರೆ.

# ಹಸೀನಾ ಹಸ್ತಾಂತರದ ಬಗ್ಗೆ ಭಾರತ ಪ್ರತಿಕ್ರಿಯೆ ನೀಡಿಲ್ಲ

**ಢಾಕಾ:** ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವಂತೆ ಕೋರಿ ಢಾಕಾ ಭಾರತಕ್ಕೆ ಔಪಚಾರಿಕ ಪತ್ರಗಳನ್ನು ಕಳುಹಿಸಿದೆ, ಆದರೆ, ನವದೆಹಲಿಯಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನುಸ್ ಹೇಳಿದ್ದಾರೆ.

ಯುಕೆ ಮೂಲದ ಸ್ಕೈ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ, ಮಾನವೀಯತೆಯ ವಿರುದ್ಧದ ಅಪರಾಧಗಳಿಗಾಗಿ ಹಸೀನಾ ವಿಚಾರಣೆ ಎದುರಿಸಲಿದ್ದಾರೆ ಎಂದು ಯೂನುಸ್ ಹೇಳಿದರು ಎಂದು ಸರ್ಕಾರಿ ಸ್ವಾಮ್ಯದ ಬಿಎಸ್ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ಬೃಹತ್ ಪ್ರತಿಭಟನೆಯ ನಂತರ 16 ವರ್ಷಗಳಿಂದ ಆಡಳಿತದಲ್ಲಿದ್ದ ಅವಾಮಿ ಲೀಗ್ ಸರ್ಕಾರ ಪತನಗೊಂಡಿತ್ತು. ಆಗ ಭಾರತಕ್ಕೆ ಪಲಾಯನ ಮಾಡಿದ 77 ವರ್ಷದ ಹಸೀನಾ ಕಳೆದ ವರ್ಷ ಆಗಸ್ಟ್ 5 ರಿಂದ ಭಾರತದಲ್ಲಿಯೇ ವಾಸಿಸುತ್ತಿದ್ದಾರೆ.

ಬಾಂಗ್ಲಾದೇಶದ ಅಂತಾರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ (ಐಸಿಟಿ) ಹಸೀನಾ ಮತ್ತು ಹಲವಾರು ಮಾಜಿ ಕ್ಯಾಬಿನೆಟ್ ಮಂತ್ರಿಗಳು, ಸಲಹೆಗಾರರು ಮತ್ತು ಮಿಲಿಟರಿ ಹಾಗೂ ಸಿವಿಲ್ ಅಧಿಕಾರಿಗಳ ವಿರುದ್ಧ "ಮಾನವೀಯತೆಯ ವಿರುದ್ಧದ ಅಪರಾಧಗಳು ಮತ್ತು ನರಮೇಧದ ಆರೋಪಗಳ ಮೇಲೆ ಬಂಧನ ವಾರಂಟ್ ಹೊರಡಿಸಿದೆ.





"ಹಸೀನಾ ಮಾತ್ರವಲ್ಲದೇ ಅವರ ಕುಟುಂಬಸ್ಥರು, ಸಹವರ್ತಿಗಳು ಸೇರಿದಂತೆ ಅವರೊಂದಿಗೆ ಸಂಬಂಧ ಹೊಂದಿದ್ದ ಎಲ್ಲ ಜನರ ವಿಚಾರಣೆ ನಡೆಯಲಿದೆ." ಎಂದು ಯೂನುಸ್ ಹೇಳಿದರು.

ಹಸೀನಾ ವಿರುದ್ಧ ಎರಡು ಬಂಧನ ವಾರಂಟ್: ಸದ್ಯ ಬಾಂಗ್ಲಾದೇಶ ಸರ್ಕಾರವು ಹಸೀನಾ ವಿರುದ್ಧ ಎರಡು ಬಂಧನ ವಾರಂಟ್ ಹೊರಡಿಸಿದೆ. ಹಸೀನಾರನ್ನು ಹಸ್ತಾಂತರಿಸುವಂತೆ ಭಾರತಕ್ಕೆ ಔಪಚಾರಿಕ ಪತ್ರ ಕಳುಹಿಸಲಾಗಿದೆಯಾದರೂ ನವದೆಹಲಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಯೂನುಸ್ ತಿಳಿಸಿದರು. ಹಸೀನಾರನ್ನು ಹಸ್ತಾಂತರಿಸುವಂತೆ ಕೋರಿ ನವದೆಹಲಿಯ ಬಾಂಗ್ಲಾದೇಶ ಹೈಕಮಿಷನ್‌ನಿಂದ ಕಳೆದ ವರ್ಷ ಪತ್ರ ಬಂದಿದೆ ಎಂಬುದನ್ನು ಭಾರತ ದೃಢಪಡಿಸಿದೆಯಾದರೂ ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ.

ಆದಾಗ್ಯೂ, ಹಸೀನಾ ಬಾಂಗ್ಲಾದೇಶದಲ್ಲಿ ದೈಹಿಕವಾಗಿ ಹಾಜರಿರದಿದ್ದರೂ ಅವರ ಗೈರುಹಾಜರಿಯಲ್ಲಿಯೇ ಅವರ ವಿರುದ್ಧ ವಿಚಾರಣೆ ನಡೆಯಲಿದೆ ಎಂದು ಯೂನುಸ್ ಪ್ರತಿಪಾದಿಸಿದರು.

'ಹೌಸ್ ಆಫ್ ಮಿರರ್ಸ್' ಎಂಬ ಗುಪ್ತ ಹೆಸರಿನ ಕುಖ್ಯಾತ ರಹಸ್ಯ ಜೈಲುಗಳಲ್ಲಿ ಒಂದಕ್ಕೆ ಭೇಟಿ ನೀಡಿದಾಗ ಅಲ್ಲಿನ ದೃಶ್ಯ ನೋಡಿ ಆಘಾತಕ್ಕೊಳಗಾಗಿದ್ದೆ ಎಂದು ಯೂನುಸ್ ಹೇಳಿದರು. ಅಧಿಕಾರದಲ್ಲಿದ್ದಾಗ ಹಸೀನಾ ನೂರಾರು ಕಾರ್ಯಕರ್ತರ ಅಪಹರಣ, ಚಿತ್ರಹಿಂಸೆ ಮತ್ತು ಹತ್ಯೆಗಳಿಗಾಗಿ ತನ್ನ ಭದ್ರತಾ ಪಡೆಗಳು ಹಾಗೂ ಪೊಲೀಸರನ್ನು ಬಳಸಿಕೊಂಡಿದ್ದರು ಎಂದು ಆರೋಪಿಸಲಾಗಿದೆ.

## 17ಕ್ಕೆ ಹಾಲುಉತ್ಪಾದಕರ ಸಹಕಾರ ಸಂಘದ ಚುನಾವಣೆ

**ಮಾಗಡಿ:** ತಾಲೂಕಿನ ಕೋಡಿಪಾಳ್ಯ ಹೆಚ್. ಹಾಲುಉತ್ಪಾದಕರ ಸಹಕಾರ ಸಂಘಕ್ಕೆ ಮಾ. 17 ರಂದು ಸೋಮವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಕೆ.ಟಿ.ಉಮೇಶ ತಿಳಿಸಿದ್ದಾರೆ.

ಆಕಾಂಕ್ಷೆಯುಳ್ಳ ಅಭ್ಯರ್ಥಿಗಳು ಮಾ.10 ಸೋಮವಾರ ಮಧ್ಯಾಹ್ನ 3 ಗಂಟೆಯ ಒಳಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕವಾಗಿದೆ, ಮಾ. 11 ರಂದು ಮಂಗಳವಾರ ಬೆಳಗ್ಗೆ 10 ಗಂಟೆಗೆ ನಾಮಪತ್ರಗಳ ಪರಿಶೀಲನೆ, ಮಾ.12 ರಂದು ಬುಧವಾರ ಮಧ್ಯಾಹ್ನ 3 ಗಂಟೆಯ ಒಳಗೆ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ, 3 ಗಂಟೆಯ ನಂತರ ಅವಶ್ಯವಿದ್ದಲ್ಲಿ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ, ಕ್ರಮಬದ್ಧವಾಗಿ ಸ್ಪರ್ದೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ನೋಟೀಸ್ ಬೋರ್ಡ್‌ನಲ್ಲಿ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ, ಮಾ.17 ರಂದು ಸೋಮವಾರ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಂಘದ ಕಚೇರಿಯಲ್ಲಿ ಮತದಾನ, ನಂತರ ಮತ ಎಣಿಕೆ, ಫಲಿತಾಂಶಗಳ ಘೋಷಣೆ ಎಂದು ಚುನಾವಣಾಧಿಕಾರಿ ಕೆ.ಟಿ.ಉಮೇಶ ತಿಳಿಸಿದ್ದಾರೆ.

## ಕರ್ತವ್ಯ ಲೋಪ ಬಿಆರ್‌ಪಿ, ಸಿಆರ್‌ಪಿಗಳ ಅಮಾನತು

**ಕೊಪ್ಪಳ:** ಕರ್ತವ್ಯ ಲೋಪ ಹಿನ್ನೆಲೆ ಜಿಲ್ಲೆಯ ಮೂವರು ಸಿಆರ್‌ಪಿ ಹಾಗೂ ಓರ್ವ ಬಿಆರ್‌ಪಿಯನ್ನು ಅಮಾನತು ಮಾಡಿ ಕೊಪ್ಪಳ ಜಿಲ್ಲಾ ಡಿಡಿಪಿಐ ಶ್ರೀಶೈಲ ಬಿರಾದರ್ ಆದೇಶ ಹೊರಡಿಸಿದ್ದಾರೆ.

ಕರ್ತವ್ಯದಲ್ಲಿ ಲೋಪದ ಹಿನ್ನೆಲೆ ಮಾ.01ರಂದೇ ಈ ನಾಲ್ವರನ್ನು ಅಮಾನತು ಮಾಡಲಾಗಿದ್ದು ತಡವಾಗಿ ಬೆಳಕಿಗೆ ಬಂದಿದೆ.

ಕೊಪ್ಪಳ ತಾಲೂಕಿನ ಹಿಟ್ನಾಳ್ ಹೋಬಳಿ ಸಿಆರ್‌ಪಿ ಹಸನಸಾಬ, ಗಂಗಾವತಿಯ ಸಿಆರ್‌ಪಿ ನಾಗರಾಜ್ ಎಸ್, ಯಲಬುರ್ಗಾ ಸಿಆರ್‌ಪಿ ವೆಂಕಟೇಶ ಹಾಗೂ ಗುನ್ನಾಳದ ಬಿಆರ್‌ಪಿ ಸಂಗಮೇಶ ತೋಟದ ಅವರನ್ನು ಮಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಇಲಾಖೆ ಅನುಷ್ಠಾನಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶೈಕ್ಷಣಿಕ ಗುಣಮಟ್ಟದ ಕುರಿತು ಪರಿಶೀಲನೆ ಕೈಗೊಂಡಾಗ ಈ ನಾಲ್ವರು ಸಭೆಯಲ್ಲಿ ಮಾಹಿತಿ ನೀಡದ ಕಾರಣ ಕರ್ತವ್ಯ ನಿರ್ಲಕ್ಷ್ಯತನ ಮರೆತಿದ್ದಾರೆ. ಅಲ್ಲದೇ ಶಾಲಾ ಸಂದರ್ಶನ ಅವಧಿಯಲ್ಲಿ ನಿಯಮಾನುಸಾರ ಸಂದರ್ಶನ ಮಾಡದೇ ಇರುವುದು, ಶಾಲೆಗಳಿಗೆ ತಿಂಗಳಿಗೆ 20 ದಿನ ಹೋಗಬೇಕಾಗಿದ್ದರೂ ತೆರಳದೇ ಇರುವುದು, ಶಿಕ್ಷಕರಿಗೆ ಮಾದರಿ ಪಾಠ ಮಾಡದಿರುವುದು ಹೀಗೆ ಹಲವು ಲೋಪ ಪತ್ತೆ ಹಚ್ಚಿ ಕರ್ತವ್ಯದಲ್ಲಿ ಬೇಜಬ್ದಾರಿತನ ತೋರಿದ ಹಿನ್ನೆಲೆಯಲ್ಲಿ ಅಮಾನತುಗೊಳಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಶ್ರೀಶೈಲ ಬಿರಾದಾರ್ ಅವರು ಅಮಾನತು ಆದೇಶದಲ್ಲಿ ತಿಳಿಸಿದ್ದಾರೆ.

# ಅನಧಿಕೃತ ಬಡಾವಣೆಗಳ ಬಿ ಖಾತಾ ಅಭಿಯಾನ

**ಮಾಲೂರು:** ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳ ನಿವೇಶನಗಳ ಖಾತೆ ಸಮಸ್ಯೆ ಪರಿಹರಿಸಲು ಸರ್ಕಾರ ಒಂದೇ ಬಾರಿ ಅಧಿಕೃತ ಬಡಾವಣೆಗಳ ಇ ಖಾತೆ ಅನಧಿಕೃತ ಬಡಾವಣೆಗಳ ಬಿ ಖಾತಾ ಅಭಿಯಾನ ಪಟ್ಟಣದಲ್ಲಿ ವಾರ್ಡು ವಾರು ಏರ್ಪಡಿಸಲಾಗಿತ್ತು. ಆದರೆ ವಿದ್ಯುತ್ ಹಾಗೂ ನೆಟ್‌ವರ್ಕ್ ಸಮಸ್ಯೆಯಿಂದ ಪಟ್ಟಣದ ಪುರಸಭೆ ಆವರಣದಲ್ಲಿರುವ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರಂಗಮಂದಿರದಲ್ಲಿ ಮಂಗಳವಾರ ದಿಂದ ಮೇ 10ರವರೆಗೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಪುರಸಭಾ ಮುಖ್ಯ ಅಧಿಕಾರಿ ಎ.ಬಿ.ಪ್ರದೀಪ್ ಹೇಳಿದರು.

ಅನಧಿಕೃತ ಬಡಾವಣೆಗಳಲ್ಲಿ ನಿವೇಶನಗಳನ್ನು ಖಾತೆ ಮಾಡಿಕೊಡುವ ಬಗ್ಗೆ ನಾಗರಿಕರ ಬಹುದಿನಗಳ ಬೇಡಿಕೆಯಾಗಿದ್ದು ಈ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇದೇ ಮೊದಲ ಬಾರಿಗೆ ಮೇ 10ರವರೆಗೆ ಪುರಸಭಾ ವ್ಯಾಪ್ತಿಯ ವಾರ್ಡುಗಳ ಬಡಾವಣೆಗಳಲ್ಲಿ ಅಧಿಕೃತ ಬಡಾವಣೆಗಳಲ್ಲಿ ಈ ಖಾತೆ ಅನಧಿಕೃತ ಬಡಾವಣೆಗಳಲ್ಲಿ ಬಿ ಖಾತೆ ಮಾಡಲು ಆದೇಶಿಸಿದ್ದು ಅದರಂತೆ ಇಲ್ಲಿನ ಪುರಸಭೆಯು ವಾರ್ಡ್ವಾರು ಹಮ್ಮಿಕೊಳ್ಳಲು ಸಿದ್ಧತೆಗಳನ್ನು ನಡೆಸಲಾಗಿತ್ತು, ಆದರೆ ವಾರ್ಡ್ಗಳಲ್ಲಿ ವಿದ್ಯುತ್ ಹಾಗೂ ನೆಟ್‌ವರ್ಕ್ ಸಮಸ್ಯೆಯಿಂದಾಗಿ ಇ ಖಾತೆ ಹಾಗೂ ಬಿ ಖಾತೆ ಅಭಿಯಾನ ಪಟ್ಟಣದ ಪುರಸಭೆಯ ಆವರಣ ದಲ್ಲಿರುವ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರಂಗಮಂದಿರ ದಲ್ಲಿ ಹಮ್ಮಿಕೊಂಡಿದ್ದು ನಿವೇಶನ ಹೊಂದಿರುವ ಫಲಾನುಭವಿಗಳು ಈ ಖಾತೆ ಅಥವಾ ಬಿ ಖಾತೆಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿ ಅರ್ಜಿ ಸಲ್ಲಿಸಿದ 7 ದಿನಗಳಲ್ಲಿ ಪುರಸಭೆಯ ಅಧಿಕಾರಿಗಳು ಪರಿಶೀಲನೆ ನಡೆಸಿ ಆದೇಶದ ಪ್ರತಿಯನ್ನು ನೀಡಲಿದೆ. ಇ ಖಾತೆಗೆ ಸಂಬಂದಿಸಿದಂತೆ



ಭೂ ಪರಿವರ್ತನೆ ನಿವೇಶನ, ನಗರ ಯೋಜನಾ ಪ್ರಾಧಿಕಾರ ಅನುಮೋದನೆ ಪತ್ರ, ಋಣಬಾರೆ ಪತ್ರ, ಸ್ವತ್ತಿನ ಹಾಗೂ ಮಾಲೀಕರ ಭಾವಚಿತ್ರ, ಸ್ವತ್ತಿನ ಕ್ರಯಪತ್ರ, ಆಧಾರ್ ಕಾರ್ಡ್ ನಕಲು, 2024–25ನೇ ಸಾಲಿನ ವರೆಗೆ ತೆರಿಗೆ ಪಾವತಿ, ಬಿ–ಖಾತೆ ಆಸ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕತ್ವ ಸಾಭಿತು ಪಡಿಸುವ ನೊಂದಾಯಿತ ಮಾರಾಟ ಪತ್ರ, ದಾನ ಪತ್ರ, ವಿಭಾಗ ಪತ್ರಗಳು, 10.09.2024ರಿಂದ 2024–25ನೇ ಸಾಲಿನ ವರೆಗೆ ಆಸ್ತಿ ತೆರಿಗೆ ಋಣ ಬಾರೆ ದಾಖಲೆಗಳನ್ನು ಅರ್ಜಿ ಸಲ್ಲಿಸುವವರು ನೀಡಬೇಕಾಗಿದೆ. ಫಲಾನುಭವಿಗಳು ಅಭಿಯಾನದಡಿ ಅರ್ಜಿ ಸಲ್ಲಿಸಿ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿಕೊಟ್ಟಲ್ಲಿ ಬಿ ಕಾತೆ ಮಾಡಿಕೊಡಲಾಗುವುದು ಈ ಅವಕಾಶವನ್ನು ಬಳಸಿಕೊಳ್ಳದಿದ್ದಲ್ಲಿ ನಿಮ್ಮ ನಿವೇಶನಕ್ಕೆ ಸಂಬಂಧಿಸಿದಂತೆ ವ್ಯವಹಾರಗಳನ್ನು ಮಾಡಲು ಸಾಧ್ಯವಾಗುವುದಿಲ್ಲ ಅನಧಿಕೃತ ಬಡಾವಣೆಗಳಲ್ಲಿ ಬಿ ಖಾತೆ ನೀಡಿದ ಮೇಲೆ ಪುರಸಭೆಯು ನೀರು ಒಳಚರಂಡಿ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲತ್ತುಗಳನ್ನು ಒದಗಿಸುವ ಜವಾಬ್ದಾರಿ ಹೆಚ್ಚಾಗುತ್ತದೆ ಕೆಲವರು ಅನಧಿಕೃತ ಬಡಾವಣೆಗಳನ್ನು ನಿರ್ಮಿಸಿ ಆ ಬಡಾವಣೆಗಳಲ್ಲಿ ಯಾವುದೇ ರೀತಿಯ ಸವಲತ್ತುಗಳನ್ನು ಒದಗಿಸದೆ ನಿವೇಶನಗಳನ್ನು ಮಾರಿ ಕೊಂಡು ಹೋಗಿದ್ದಾರೆ. ಇ ಬಿ ಖಾತಾ ಆಂದೋಲನವನ್ನು ಸರ್ಕಾರ ಕೈಗೊಂಡಿರುವುದರಿಂದ ನಾಗರಿಕರಿ ಗೆ ಪ್ರಂಯೋಜನವಾಗಲಿದೆ ಪುರಸಭಾ ಸದಸ್ಯರು ಪುರಸಭಾ ಸಿಬ್ಬಂದಿಯೊಂದಿಗೆ ಕೈಜೋಡಿಸಿ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂದರು.

# ಜೈಶಂಕರ್ ಮೇಲೆ ದಾಳಿಗೆ ಉಗ್ರರ ಯತ್ನ

**ಲಂಡನ್:** ಲಂಡನ್‌ನಲ್ಲಿ ವಿದೇಶಾಂಗ ಸಚಿವ ಎಸ್ ಜೈಶಂಕರ್ ಮೇಳೆ ಖಲಿಸ್ತಾನಿ ಉಗ್ರರು ದಾಳಿಗೆ ಮುಂದಾಗಿದ್ದ ವಿಚಾರ ಕುರಿತು ಭಾರತ ಪ್ರತಿಕ್ರಿಯಿಸಿದೆ. ಭದ್ರತಾ ವೈಫಲ್ಯವನ್ನು ಭಾರತ ಖಂಡಿಸಿದೆ. ಪ್ರತ್ಯೇಕತಾವಾದಿ ಶಕ್ತಿಗಳಿಂದ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳ ದುರುಪಯೋಗವಾಗುತ್ತಿದೆ. ಪ್ರತ್ಯೇಕತಾವಾದಿಗಳು ಮತ್ತು ಉಗ್ರಗಾಮಿಗಳ ಗುಂಪಿನ ಪ್ರಚೋದನಕಾರಿ ಚಟುವಟಿಕೆಗಳನ್ನು ಖಂಡಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಜೈಶಂಕರ್ ಯುಕೆ ಭೇಟಿಯ ಸಮಯದಲ್ಲಿ ಭದ್ರತಾ ಉಲ್ಲಂಘನೆಯ ದೃಶ್ಯಗಳನ್ನು ನಾವು ನೋಡಿದ್ದೇವೆ, ಇದನ್ನು ನಾವು ಖಂಡಿಸುತ್ತೇವೆ ಎಂದು ಹೇಳಿದರು.

ಆನ್‌ಲೈನ್‌ನಲ್ಲಿ ಹರಿದಾಡುತ್ತಿರುವ ವೀಡಿಯೊವೊಂದರಲ್ಲಿ ವ್ಯಕ್ತಿಯೊಬ್ಬ ವಿದೇಶಾಂಗ ಸಚಿವರ ಕಾರಿನ ಕಡೆಗೆ ಓಡಿಹೋಗಿ ರಾಷ್ಟ್ರಧ್ವಜವನ್ನು ಹರಿದು ಹಾಕುತ್ತಿರುವುದನ್ನು ತೋರಿಸಲಾಗಿದೆ. ಮತ್ತೊಂದು ವೀಡಿಯೊದಲ್ಲಿ ಖಲಿಸ್ತಾನ್ ಉಗ್ರಗಾಮಿಗಳು ಸ್ಥಳದ ಹೊರಗೆ ಧ್ವಜಗಳನ್ನು ಬೀಸುತ್ತಾ ಮತ್ತು ಖಲಿಸ್ತಾನಿ ಪರ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸುತ್ತಿರುವುದನ್ನು ತೋರಿಸಲಾಗಿದೆ.

ಯುಕೆ ಮತ್ತು ಐರ್ಲೆಂಡ್‌ಗೆ ಅರು ದಿನಗಳ ಭೇಟಿಯ ಸಮಯದಲ್ಲಿ, ವಿದೇಶಾಂಗ ಸಚಿವರು ಉನ್ನತ ಮಟ್ಟದ ಮಾತುಕತೆಗಳು, ವಿದೇಶಾಂಗ ನೀತಿಯ ತೊಡಗಿಸಿಕೊಳ್ಳುವಿಕೆಗಳು ಮತ್ತು ಭಾರತೀಯ ಸಮುದಾಯದೊಂದಿಗೆ ಸಂವಾದಗಳನ್ನು ನಡೆಸಲಿದ್ದಾರೆ. ಈ ಭೇಟಿಯು ಎರಡೂ ದೇಶಗಳೊಂದಿಗಿನ ಭಾರತದ ಸ್ನೇಹ ಸಂಬಂಧಕ್ಕೆ ಹೊಸ ಉತ್ತೇಜನ ನೀಡುತ್ತದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.



ಟ್ರಂಪ್ ಸಮಾರಂಭದಲ್ಲಿ ಪನ್ನುನ್; ಅಮೆರಿಕದೊಂದಿಗೆ ಚರ್ಚಿಸುತ್ತೇವೆಂದ ಭಾರತ

ಇದಕ್ಕೂ ಮೊದಲು ಯುಕೆಯಲ್ಲಿ, ಕಂಗನಾ ರಣಾವತ್ ಅಭಿನಯದ ಎಮರ್ಜೆನ್ಸಿ ಚಿತ್ರ ಪ್ರದರ್ಶನವನ್ನು ತಡೆಯಲು ಖಲಿಸ್ತಾನ್ ಉಗ್ರಗಾಮಿಗಳು ಲಂಡನ್‌ನ ಹ್ಯಾರೋದಲ್ಲಿರುವ ಚಿತ್ರಮಂದಿರಕ್ಕೆ ನುಗ್ಗಿದ್ದರು. ಕಳೆದ ಎರಡು ದಿನಗಳಿಂದ ಚೆವೆನಿಂಗ್ ಹೌಸ್‌ನಲ್ಲಿ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಅವರೊಂದಿಗೆ ವ್ಯಾಪಕ ಮತ್ತು ಉತ್ಪಾದಕ ಮಾತುಕತೆಗಳನ್ನು ನಡೆಸಿದ್ದೇವೆ. ನಾವು ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವ್ಯಾಪ್ತಿಯನ್ನು ಚರ್ಚಿಸಿದ್ದೇವೆ. ವಿಶೇಷವಾಗಿ ಕಾರ್ಯತಂತ್ರದ ಸಮನ್ವಯ, ರಾಜಕೀಯ ಸಹಕಾರ, ವ್ಯಾಪಾರ ಒಪ್ಪಂದ ಮಾತುಕತೆ, ಶಿಕ್ಷಣ, ತಂತ್ರಜ್ಞಾನ, ಚಲನಶೀಲತೆ ಮತ್ತು ಜನರಿಂದ ಜನರ ವಿನಿಮಯದ ಮೇಲಿನ ನಮ್ಮ ಗಮನ ಅವುಗಳನ್ನು ಮತ್ತಷ್ಟು ಬಲಪಡಿಸಲು ಮತ್ತು ರೂಪಿಸಲು ಮುಂದಿನ ಹಂತಗಳನ್ನು ರೂಪಿಸಲು ಒಪ್ಪಿಕೊಂಡಿದ್ದೇವೆ ಎಂದು ಜೈಶಂಕರ್ ತಿಳಿಸಿದ್ದಾರೆ.

ಕಳೆದ ಕೆಲವು ವರ್ಷಗಳಿಂದ, ಯುಕೆ. ಯುಎಸ್ ಮತ್ತು ಕೆನಡಾದಲ್ಲಿರುವ ಖಲಿಸ್ತಾನ್ ಉಗ್ರಗಾಮಿಗಳಿಂದ ಭಾರತೀಯ ರಾಜತಾಂತ್ರಿಕರು ಮತ್ತು ವಲಸಿಗರಿಗೆ ಬೆದರಿಕೆ ಹೆಚ್ಚಾಗಿದೆ. ಈ ವಿವಾದವು ಭಾರತ ಮತ್ತು ಕೆನಡಾ ನಡುವಿನ ಸಂಬಂಧ ಹಳಸಲು ಕಾರಣವಾಗಿದ್ದರೂ, ಅಮೆರಿಕ ಮತ್ತು ಯುಕೆಯಲ್ಲಿ ಹೆಚ್ಚಿದ ಚಟುವಟಿಕೆಗಳ ಬಗ್ಗೆ ಭಾರತವು ತನ್ನ ಕಳವಳವನ್ನು ವ್ಯಕ್ತಪಡಿಸುತ್ತಲೇ ಇದೆ. ತಕ್ಷಣವೇ ಎಚ್ಚೆತ್ತುಕೊಂಡ ಪೊಲೀಸರು ವ್ಯಕ್ತಿಯನ್ನು ಹಾಗೂ ಇತರ ಖಲಿಸ್ತಾನಿ ಪ್ರತಿಭಟನಾಕಾರರನ್ನು ವಶಕ್ಕೆ ತೆಗೆದುಕೊಂಡು ಕರೆದೊಯ್ದಿರುವುದಾಗಿ ವರದಿ ತಿಳಿಸಿದೆ.

ಕ್ರೀಡೆ - ಸಿನಿಮಾ
ಮುಸ್ಸಂಜೆ



# ಮೌನ ಮುರಿದ ಮಾಧವನ್

ಕೆಲ ತಿಂಗಳ ಹಿಂದೆ ನಟ ಆರ್ ಮಾಧವನ್ ಹಾಗೂ ಮಹಿಳಾ ಅಭಿಮಾನಿಗಳ ನಡುವಿನ ಚಾಟ್ಸ್ ರೆಡ್ಡಿಟ್‌ನಲ್ಲಿ ಕಾಣಿಸಿಕೊಂಡು, ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಸೃಷ್ಟಿಸಿತ್ತು. ಮೆಸೇಜ್‌ನ ಸ್ಕ್ರೀನ್‌ಶಾಟ್‌ಗಳ ಬಗ್ಗೆ ಚರ್ಚೆ ಶುರುವಾಗಿ, ಮಾಧವನ್ ಅವರು ಸೋಷಿಯಲ್ ಮೀಡಿಯಾಗಳಲ್ಲಿ 'ಯುವತಿಯರಿಗೆ ರಿಪ್ಲೇ ಮಾಡುತ್ತಿದ್ದಾರೆ' ಎಂಬ ಮಾತುಗಳು ಕೇಳಿಬಂದವು.

ಇದೀಗ, ಮಾಧವನ್ ಆ ಎಲ್ಲಾ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ್ದಾರೆ. ಇತ್ತೀಚಿನ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಅಭಿಮಾನಿಗಳಿಗೆ ಕೊಡುವ ಸರಳ ರಿಪ್ಲೇಗಳನ್ನು ಎಷ್ಟು ತಪ್ಪಾಗಿ ಅರ್ಥೈಸಬಹುದು ಎಂಬುದರ ಬಗ್ಗೆ ತಮ್ಮ ಹತಾಶೆ ವ್ಯಕ್ತಪಡಿಸಿದ್ದಾರೆ.

ಅಭಿಮಾನಿಯೊಬ್ಬರು ಇನ್‌ಸ್ಟಾಗ್ರಾಮ್‌ನಲ್ಲಿ ಅವರ ನಟನೆಯನ್ನು ಶ್ಲಾಘಿಸಿ, ಹಾರ್ಟ್ ಎಮೋಜಿಗಳುಳ್ಳ ಸಂದೇಶವನ್ನು ಕಳುಹಿಸಿದ ನಂತರ ವಿವಾದ ಶುರುವಾಯಿತು. ಮಾಧವನ್ ಅಭಿಮಾನಿಗೆ "ಧನ್ಯವಾದಗಳು" ಎಂದು ಪ್ರತಿಕ್ರಿಯಿಸಿದರು.

ಅಭಿಮಾನಿ ಈ ಮೆಸೇಜ್‌ನ ಸ್ಕ್ರೀನ್‌ಶಾಟ್ ಅನ್ನು ಸೋಷಿಯಲ್ ಮೀಡಿಯಾದಲ್ಲಿ ಶೇರ್ ಮಾಡಿ ತಮ್ಮ ಖುಷಿಯನ್ನು ಹಂಚಿಕೊಂಡರು. ನಟ ನಿರ್ದಿಷ್ಟವಾಗಿ ಆ ಎಮೋಜಿಗಳಿಗೆ ಪ್ರತಿಕ್ರಿಯಿಸಿದ್ದಾರೆ ಎಂದು ಕೆಲವರು ಊಹಿಸಿದರು. ಈ ಬಗ್ಗೆ ಅಂತೆಕಂತೆಗಳು ಶುರುವಾದವು.

ಇತ್ತೀಚೆಗೆ ಒಂದು ಆ್ಯಪ್ ಲಾಂಚ್ ಈವೆಂಟ್‌ನಲ್ಲಿ ಮಾಧವನ್ ಹಾಜರಿದ್ದ ಸಂದರ್ಭ, ಸಾಮಾಜಿಕ ಮಾಧ್ಯಮದಲ್ಲಿ ಅಭಿಮಾನಿಗಳೊಂದಿಗೆ ಮೆಸೇಜ್, ರಿಪ್ಲೇ ಮಾಡುವ ಬಗ್ಗೆ ಅವರಲ್ಲಿ ಕೇಳಲಾಯಿತು.

ವಿಷಯವನ್ನು ವಿವರಿಸಿದ ಅವರು, "ನಾನೋರ್ವ ನಟ. ನನಗೆ ಇನ್‌ಸ್ಟಾಗ್ರಾಮ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಮಾನಿಗಳು ಸಂದೇಶ ಕಳುಹಿಸುತ್ತಿರುತ್ತಾರೆ. ನಾನು ನಿಮಗೆ ಒಂದು ಸರಳ ಉದಾಹರಣೆಯನ್ನು ಹೇಳಲಿಚ್ಛಿಸುತ್ತೇನೆ. ಓರ್ವ ಯುವತಿ ನನಗೆ ಮೆಸೇಜ್ ಮಾಡುತ್ತಾರೆ – 'ನಾನು ಈ ಸಿನಿಮಾ ವೀಕ್ಷಿಸಿದೆ. ನನಗಿದು ನಿಜವಾಗಿಯೂ ಇಷ್ಟವಾಯಿತು. ನೀವು ಅದ್ಭುತ ನಟ. ಚೆನ್ನಾಗಿ ನಿರ್ವಹಿಸಿದ್ದೀರಿ. ನೀವು ನನ್ನನ್ನು ಮೋಟಿವೇಟ್ ಮಾಡಿದ್ರಿ' ಎಂದು ಬರೆದು ಕೊನೆಯಲ್ಲಿ, ಸಾಕಷ್ಟು ಹಾರ್ಟ್, ಕಿಸ್, ಲವ್ ಸಿಂಬಲ್‌ಗಳನ್ನು ಬಳಸಿದ್ದರು. ಇಷ್ಟು ವಿವರವಾಗಿ ಮಾತನಾಡುವ ಅಭಿಮಾನಿ ಇದ್ದಾಗ, ನಾನು ಉತ್ತರಿಸಲ್ಪಡುತ್ತೇನೆ. ಹಾಗಾಗಿ, ನಾನು ಯಾವಾಗಲೂ 'ಥ್ಯಾಂಕ್ ಯು ಸೋ ಮಚ್' ಎಂದು ಹೇಳುತ್ತೇನೆ. ಅದರಂತೆ, "ಥ್ಯಾಂಕ್ ಯು ಸೋ ಮಚ್, ವೆರಿ ಕೈಂಡ್ ಆಫ್ ಯೂ. ಗಾಡ್ ಬ್ಲೆಸ್ ಯು' ಎಂಬುದು ನನ್ನ ರಿಪ್ಲೇ ಆಗಿತ್ತು. ನಂತರ, ಅವರು ನನ್ನ ರಿಪ್ಲೇಯ ಸ್ಕ್ರೀನ್‌ಶಾಟ್ ತೆಗೆದು ಅದನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ್ರು. ಈ ಸಂದರ್ಭ ಜನ ನೋಡೋದೇನು? ಹಾರ್ಟ್, ಕಿಸ್, ಲವ್ ಸಿಂಬಲ್‌ಗಳು ಎಂದು ತಿಳಿಸಿದರು.

"ತಪ್ಪಾಗಿ ಅರ್ಥೈಸಿಕೊಳ್ಳುವ ಭಯದಿಂದಾಗಿ ಹೆಚ್ಚು ಜಾಗರೂಕನಾಗಿದ್ದೇನೆ" ಎಂದು ಮಾಧವನ್ ಈ ವೇಳೆ ತಿಳಿಸಿದರು. "ಅದಕ್ಕೆ (ಎಮೋಜಿ) ಉತ್ತರಿಸುವುದು ನನ್ನ ಉದ್ದೇಶ ಆಗಿರಲಿಲ್ಲ. ಸಂದೇಶಕ್ಕೆ ಉತ್ತರಿಸುವುದು ನನ್ನ ಉದ್ದೇಶ ಆಗಿತ್ತು. ಆದ್ರೆ ಆ ಸಿಂಬಲ್ ಅನ್ನು ಮಾತ್ರ ನೋಡಿ 'ಓ ಮ್ಯಾಡಿ ಚಿಕ್ಕ ಹುಡುಗಿಯರೊಂದಿಗೆ ಮಾತನಾಡುತ್ತಿದ್ದಾರೆ' ಎಂದು ಜನ ಹೇಳುತ್ತಾರೆಂದು ತಮ್ಮ ಅಸಮಾಧಾನವನ್ನು ನಟ ಹೊರಹಾಕಿದರು.

ಸಿನಿಮಾ ವಿಷಯಕ್ಕೆ ಬಂದರೆ, ಆದಿತ್ಯ ಧರ್ ಅವರ 'ಧುರಂಧರ್' ಚಿತ್ರದಲ್ಲಿ ಸಂಜಯ್ ದತ್, ರಣ್‌ವೀರ್ ಸಿಂಗ್, ಅರ್ಜುನ್ ರಾಂಪಾಲ್ ಮತ್ತು ಅಕ್ಷಯ್ ಖನ್ನಾ ಅವರೊಂದಿಗೆ ಕಾಣಿಸಿಕೊಳ್ಳಲಿದ್ದಾರೆ. ಅಲ್ಲದೇ ಜಿ.ಡಿ.ನಾಯ್ಡು ಅವರ ಜೀವನ ಚರಿತ್ರೆಯಾದ 'ಜಿಡಿಎನ್' ಅನ್ನೂ ಹೊಂದಿದ್ದಾರೆ. ನೆಟ್‌ಫ್ಲಿಕ್ಸ್ ಸಿನಿಮಾ ಆಪ್ ಜೈಸಾ ಕೋಯಿ ಕೂಡಾ ನಟನ ಬಳಿ ಇದೆ.

# ರಾಜಮೌಳಿ – ಮಹೇಶ್ ಬಾಬು ಸಿನಿಮಾ ಶೂಟಿಂಗ್‌ಗೆ ಬೃಹತ್ ಸೆಟ್

ಸೌತ್ ಸೂಪರ್ ಸ್ಟಾರ್ ಮಹೇಶ್ ಬಾಬು ಹಾಗೂ ಖ್ಯಾತ ನಿರ್ದೇಶಕ ಎಸ್ ರಾಜಮೌಳಿ ಕಾಂಬಿನೇಶನ್ನಲ್ಲಿ ಮೂಡಿಬರುತ್ತಿರುವ ಬಹುನಿರೀಕ್ಷಿತ ಚಿತ್ರ. ಸಿನಿಮಾಗೆ ಸಂಬಂಧಿಸಿದಂತೆ ಮಾಹಿತಿಯನ್ನು ಆರಂಭದಿಂದಲೂ ಗೌಪ್ಯವಾಗಿಡಲಾಗಿದೆ. ಪೂಜಾ ಕಾರ್ಯಕ್ರಮ, ಚಿತ್ರೀಕರಣ ಆರಂಭ ಅಥವಾ ಪಾತ್ರವರ್ಗದ ಬಗ್ಗೆ ಚಿತ್ರತಂಡ ಇನ್ನೂ ಯಾವುದೇ ಮಾಹಿತಿಯನ್ನು ಅಧಿಕೃತವಾಗಿ ಬಹಿರಂಗಪಡಿಸಿಲ್ಲ. ಆದ್ರೀಗ ಫೋಟೋವೊಂದು ಸೋಷಿಯಲ್ ಮೀಡಿಯಾದಲ್ಲಿ ಸಖತ್ ಸದ್ದು ಮಾಡುತ್ತಿದೆ.

ಸಿನಿಮಾಗೆ ಸಂಬಂಧಿಸಿದಂತೆ ಫೋಟೋವೊಂದು ವೈರಲ್ ಆಗುತ್ತಿದೆ. ಈ ಸೆಟ್ ಅನ್ನು ಹೈದರಾಬಾದ್ನಲ್ಲಿ ನಿರ್ಮಿಸಲಾಗಿದೆ . ಈ ಬೃಹತ್ ಸೆಟ್ನಲ್ಲಿ ವಾರಾಣಸಿ ದೇವಾಲಯ ಗೋಚರಿಸಿದೆ. ಈ ಹಿಂದೆ, ಮಹೇಶ್ ಬಾಬು ವಾರಾಣಸಿ ಸೆಟ್ನಲ್ಲಿ ಶೂಟಿಂಗ್ ನಡೆಸಲಿದ್ದಾರೆ ಎಂಬ ವರದಿಗಳು ಬಂದಿದ್ದವು.

ಅದೇ ಸೆಟ್ನಂತೆ ತೋರುವ ಫೋಟೋಗಳೀಗ ವಿವಿಧ ಸೋಷಿಯಲ್ ಮೀಡಿಯಾ ಪ್ಲಾಟ್ಫಾರ್ಮ್ಗಳಲ್ಲಿ ವೈರಲ್ ಆಗುತ್ತಿವೆ. ಅಲ್ಲದೇ ಮಹೇಶ್ ಬಾಬು ಅವರ ಮುಂದಿನ ಚಿತ್ರೀಕರಣ ಅಲ್ಲೇ ನಡೆಯಲಿದೆ ಎಂದು ನೆಟ್ಟಿಗರು ಈ ಫೋಟೋವನ್ನು ಪೋಸ್ಟ್ ಮಾಡುತ್ತಿದ್ದಾರೆ. ಒಡಿಶಾ ಶೆಡ್ಯೂಲ್ ನಂತರ ' ಎಸ್ ಎಸ್ ಎಂಬಿ 29' ಚಿತ್ರದ ಚಿತ್ರೀಕರಣ ಹೈದರಾಬಾದ್ನಲ್ಲಿ ನಡೆಯಲಿದೆ .



ಮಲಯಾಳಂನ ಬಹುಬೇಡಿಕೆ ನಟ ಪೃಥ್ವಿರಾಜ್ ಸುಕುಮಾರನ್ ನಟಿಸಲಿದ್ದಾರೆ ಎಂಬ ವರದಿಗಳು ಬಹಳ ಸಮಯದಿಂದಲೂ ಇದೆ. ಅದರಂತೆ ಸೌತ್ ಸೂಪರ್ ಸ್ಟಾರ್ ಇತ್ತೀಚೆಗೆ ತಮ್ಮ ಇನ್ಸ್ಟಾಗ್ರಾಮ್ನಲ್ಲಿ ಪೋಸ್ಟ್ ಒಂದನ್ನು ಶೇರ್ ಮಾಡಿದ್ದರು. ಇದು ಖಖಔ29ರ ಸುಳಿವು ನೀಡುತ್ತಿದೆ ಎಂದು ನೆಟ್ಟಿಗರು ತಿಳಿಸಿದ್ದರು. "ನಿರ್ದೇಶಕನಾಗಿ ನಾನು ನನ್ನ ಕೈಯಲ್ಲಿರುವ ಎಲ್ಲಾ ಸಿನಿಮಾಗಳನ್ನು ಪೂರ್ಣಗೊಳಿಸಿದ್ದೇನೆ.

ಅವುಗಳಿಗೆ ಸಂಬಂಧಿಸಿದ ಮಾರ್ಕೆಟಿಂಗ್ ಕೆಲಸವೂ ಪೂರ್ಣಗೊಂಡಿದೆ. ಇದೀಗ ನಟನಾಗಿ ತೆರೆ ಮೇಲೆ ಕಾಣಿಸಿಕೊಳ್ಳಲು ತಯಾರಿ ನಡೆಸುತ್ತಿದ್ದೇನೆ.

ನಾನು ವಿದೇಶಿ ಭಾಷೆಯ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತೇನೆ. ಇದರಲ್ಲಿ ದೊಡ್ಡ ಡೈಲಾಗ್ಸ್ ಇವೆ ಎಂಬುದನ್ನು ತಿಳಿದು ನನಗೆ ಸ್ವಲ್ಪ ಭಯವಾಗುತ್ತಿದೆ" ಎಂದು ಸುಕುಮಾರನ್ ತಮ್ಮ ಪೋಸ್ಟ್ನಲ್ಲಿ ಬರೆದುಕೊಂಡಿದ್ದರು.

ಹಾಗಾಗಿ, ರಾಜಮೌಳಿ–ಮಹೇಶ್ ಬಾಬು ಕಾಂಬಿನೇಶನ್ನ ಚಿತ್ರಕ್ಕಾಗಿ ಪೃಥ್ವಿರಾಜ್ ತಮ್ಮೆಲ್ಲಾ ಸಿನಿಮಾ ಕೆಲಸಗಳನ್ನು ಪೂರ್ಣಗೊಳಿಸಿದ್ದಾರೆಂದು ನೆಟ್ಟಿಗರು ಊಹಿಸಿದ್ದಾರೆ.

ಕಾಡಿನ ಹಿನ್ನೆಲೆಯಲ್ಲಿ ಸಾಗುವ ಈ ಸಿನಿಮಾದಲ್ಲಿ ಗ್ಲೋಬಲ್ ಐಕಾನ್ ಪ್ರಿಯಾಂಕಾ ಚೋಪ್ರಾ ನಾಯಕಿಯಾಗಿ ನಟಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಮಹೇಶ್ ಬಾಬು ಹೊಸ ಲುಕ್ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಈವರೆಗೆ ನಿರ್ವಹಿಸದ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದು, ಪ್ರೇಕ್ಷಕರನ್ನು ಮನರಂಜಿಸುವ ಭರವಸೆಯಿದೆ. ಸಿನಿಮಾಗೆ ಎಂ.ಎಂ. ಕೀರವಾಣಿ ಸಂಗೀತ ಸಂಯೋಜಿಸುತ್ತಿದ್ದರೆ, ವಿಜಯೇಂದ್ರ ಪ್ರಸಾದ್ ಕಥೆ ಒದಗಿಸಿದ್ದಾರೆ.



# ಮದುವೆಗೆ ಮುನ್ನವೇ ತಮನ್ನಾ ಮತ್ತು ವರ್ಮಾ ಬ್ರೇಕಪ್?

**ಮುಂಬೈ:** ಕೆಲ ಸಮಯದಿಂದ ಪ್ರೀತಿಯಲ್ಲಿದ್ದ, ಇನ್ನೇನು ಮದುವೆಗೆ ಸಜ್ಜಾಗಿದ್ದಾರೆ ಎನ್ನಲಾದ ಬಾಲಿವುಡ್ ಜೋಡಿ ತಮನ್ನಾ ಭಾಟಿಯಾ ಮತ್ತು ವಿಜಯ್ ವರ್ಮಾ ನಡುವೆ ಬ್ರೇಕಪ್ ಆಗಿರುವುದು ಸುದ್ದಿಯಾಗಿದೆ.

ಸದ್ಯ ಇಬ್ಬರೂ ತಮ್ಮ ವೃತ್ತಿ ಮೇಲೆ ಹೆಚ್ಚಿನ ಗಮನ ಹರಿಸಲಿದ್ದಾರೆ. ಪ್ರೀತಿಯಲ್ಲಿ ಬೇರೆಯಾದರೂ ಪರಸ್ಪರರ ಮೇಲೆ ಗೌರವವಿದ್ದು, ಸ್ನೇಹಿತರಾಗಿ ಮುಂದುವರಿಯಲಿದ್ದಾರೆ ಎನ್ನಲಾಗಿದೆ. 2023ರಲ್ಲಿ ಇಬ್ಬರೂ ಜೊತೆಯಾಗಿ ನಟಿಸಿದ 'ಲಸ್ಟ್ ಸ್ಟೋರೀಸ್–2' ಸಿನಿಮಾ ಬಿಡುಗಡೆ ಬಳಿಕ ಅವರ ಪ್ರೇಮವಿಚಾರ ಹೊರಬಂದಿತ್ತು.

ಡೇಟಿಂಗ್ ಆರಂಭಿಸಿದಾಗಿನಿಂದಲೂ ಈ ಜೋಡಿ ಪ್ರಮುಖ ಜೋಡಿ ಗುರಿಗಳನ್ನು ಹೊಂದಿದ್ದರು. ತಮ್ಮ ಸಂಬಂಧವನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಅವರು ಮದುವೆಯಾಗಲು ಸಹ ಯೋಜಿಸಿದ್ದರು. ಆದಾಗ್ಯೂ, ಪಿಂಕ್ ವಿಲ್ಲಾದ ವಿಶೇಷ ವರದಿಯ ಪ್ರಕಾರ, ತಮನ್ನಾ ಮತ್ತು ವಿಜಯ್ ವರ್ಮಾ ಕೆಲವು ವಾರಗಳ ಹಿಂದೆ ತಮ್ಮ ಸಂಬಂಧವನ್ನು ಕೊನೆಗೊಳಿಸಿದರು ಎನ್ನಲಾಗಿದೆ. ತಮನ್ನಾ ಭಾಟಿಯಾ ಮತ್ತು ವಿಜಯ್ ವರ್ಮಾ ವಾರದ ಹಿಂದೆಯಷ್ಟೇ ಬ್ರೇಕ್ ಅಪ್ ಮಾಡಿಕೊಂಡಿದ್ದಾರೆ ಆದರೆ ಅವರು ಉತ್ತಮ ಸ್ನೇಹಿತರಾಗಿ ಮುಂದುವರಿಯಲು ನಿರ್ಧರಿಸಿದ್ದಾರೆ. ಜೋಡಿಗಳ ಪ್ರಣಯ ಜರ್ನಿ ಕೊನೆಗೊಂಡಿದ್ದರೂ, ಅವರು ಪರಸ್ಪರ ಗೌರವ ಮತ್ತು ಮೆಚ್ಚುಗೆಯನ್ನು ಹೊಂದಿದ್ದಾರೆ' ಎಂದು ವರದಿ ಹೇಳಿದೆ. ಆದರೆ ಇನ್ನೇನು ಮದುವೆಯಾಗಲಿದ್ದಾರೆ ಎಂಬ ನಿರೀಕ್ಷೆಯಲ್ಲಿ ಅಭಿಮಾನಿಗಳಿಗೆ ಈ ದಿಡೀರ್ ಬೆಳವಣಿಗೆ ಅಚ್ಚರಿ ಮೂಡಿಸಿದೆ. ಆದರೆ ಈ ಬಗ್ಗೆ ತಮ್ಮನ್ನಾ ವಿಜಯ ವರ್ಮಾ ಇನ್ನೂ ಅಧಿಕೃತ ಹೇಳಿಕೆ ನೀಡಿಲ್ಲ. ತಮನ್ನಾ ಮತ್ತು ವಿಜಯ್ ಅವರ ಸಂಬಂಧವು ಅವರು ಮೊದಲ ಬಾರಿಗೆ ಒಟ್ಟಿಗೆ ಕೆಲಸ ಮಾಡಿದ ಲಸ್ಟ್ ಸ್ಟೋರೀಸ್ 2 ಬಿಡುಗಡೆಯ ಸಮಯದಲ್ಲಿ ಸಾರ್ವಜನಿಕರ ಗಮನ ಸೆಳೆಯಿತು. ಚಿತ್ರದ ಪ್ರಚಾರದ ಸಮಯದಲ್ಲಿ, ಈ ಜೋಡಿ ಕೈಕೈ ಹಿಡಿದುಕೊಂಡು ಹಲವಾರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡಿತು, ಅಲ್ಲಿಂದ ಬಹಿರಂಗವಾಗಿ ಕೈ ಹಿಡಿದು ಸುತ್ತಾಡಿದ ಜೋಡಿ ಬಹಿರಂಗವಾಗಿ ತಮ್ಮ ಸಂಬಂಧದ ಹೇಳಿಕೊಂಡಿತ್ತು. ವರ್ಷಗಳ ಕಾಲ ಡೇಟಿಂಗ್ ಮಾಡಿದ ನಂತರ, ಇದೀಗ ಇನ್ನೇನು ಮದುವೆ ಆಗಲಿದ್ದಾರೆ ಎಂಬ ನಿರೀಕ್ಷೆ ಹೊತ್ತಲ್ಲಿ ಬೇರ್ಪಟ್ಟಿದ್ದಾರೆ ಎಂದು ವರದಿಯಾಗಿದೆ.



# ಮಕ್ಕಳ ಜೊತೆ ಆಯ್ತು, ಈಗ ತಂದೆ ಜೊತೆ ರೊಮ್ಯಾನ್ಸ್

ಬುಟ್ಟಬೊಮ್ಮ ಪೂಜಾ ಹೆಗ್ಡೆ ನಿಧಾನವಾಗಿ ಮತ್ತೆ ಫಾರ್ಮ್‌ಗೆ ಬರ್ತಿದ್ದಾರೆ. ಸೋಲುಗಳಿಂದ ಡಲ್ ಆಗಿದ್ದ ಅವರು ಈಗ ಮತ್ತೆ ಬ್ಯುಸಿ ಆಗ್ತಿದ್ದಾರೆ. ತೆಲುಗಿನಲ್ಲಿ ಸಿನಿಮಾಗಳಿಲ್ದಿದ್ರೂ, ತಮಿಳಿನಲ್ಲಿ ಮಾತ್ರ ಎರಡು ಸಿನಿಮಾಗಳಲ್ಲಿ ನಟಿಸ್ತಿದ್ದಾರೆ.

ಎರಡೂ ದೊಡ್ಡ ಮೂವೀಸ್ ಆಗಿರೋದು ವಿಶೇಷ. ಇದರ ಜೊತೆಗೆ ಸೂಪರ್ ಸ್ಟಾರ್ ರಜನಿಕಾಂತ್ ಹೀರೋ ಆಗಿ ಬರ್ತಿರೋ 'ಕೂಲಿ'ಯಲ್ಲಿ ಸ್ಪೆಷಲ್ ಸಾಂಗ್ ಮಾಡ್ತಿದ್ದಾರೆ. ನೋಡೋಕೆ ಅವ್ರು ಕಾಲಿವುಡ್ ಮೇಲೆ ಫೋಕಸ್ ಮಾಡಿದಂಗೆ ಕಾಣ್ತಿದೆ.

ಇದಿರ್ಲಿ, ಪೂಜಾ ಹೆಗ್ಡೆ ಇದುವರೆಗೂ ತೆಲುಗಿನಲ್ಲಿ ತುಂಬಾ ಸ್ಟಾರ್ ಹೀರೋಗಳ ಜೊತೆ ಆಕ್ಟ್ ಮಾಡಿದ್ದಾರೆ. ಪ್ರಭಾಸ್, ಎನ್ಟಿಆರ್, ಮಹೇಶ್ ಬಾಬು, ಅಲ್ಲು ಅರ್ಜುನ್, ರಾಮ್ ಚರಣ್, ನಾಗಚೈತನ್ಯ, ಅಖಿಲ್, ವರುಣ್ ತೇಜ್ ಅಂಥ ಹೀರೋಗಳ ಜೊತೆನೂ ಜೋಡಿ ಕಟ್ಟಿ ಥಿಯೇಟರ್‌ಗಳಲ್ಲಿ ಸೌಂಡ್ ಮಾಡಿದ್ದಾರೆ.

ಪೂಜಾ ಹೆಚ್ಚಾಗಿ ಅತಿಥಿ ಪಾತ್ರಗಳಲ್ಲೇ ಆಕ್ಟ್ ಮಾಡಿರೋದು. ಹೆಚ್ಚು ಪ್ರಾಮುಖ್ಯತೆ ಇಲ್ದೇ ಇರೋ ರೋಲ್ಸ್ ಅವ್ರಿಗೆ ಸಿಕ್ಕಿವೆ. ಸ್ಟಾರ್ ಹೀರೋಗಳ ಜೊತೆ ಸಿನಿಮಾಗಳಂದ್ರೆ ಸಾಮಾನ್ಯವಾಗಿ ಹಾಗೇ ಇರುತ್ತೆ. ಹೀರೋಯಿನ್‌ಗಳಿಗೆ ಜಾಸ್ತಿ ಸ್ಕೋಪ್ ಇರುವುದಿಲ್ಲ.



ಆದ್ರೆ ಈಗ ರೂಟ್ ಚೇಂಜ್ ಮಾಡಿದ್ದಾರೆ. ಕಂಟೆಂಟ್ ಇರೋ ಸಿನಿಮಾಗಳು, ಸ್ಟ್ರಾಂಗ್ ಪಾತ್ರಗಳೇ ಮಾಡ್ಬೇಕು ಅಂತ ಫಿಕ್ಸ್ ಆಗಿದ್ದಾರಂತೆ. ಅದ್ರಲ್ಲೇ ಭಾಗವಾಗಿ ಕಾಲಿವುಡ್‌ನಲ್ಲಿ ನಟಿಸ್ತಿರೋ ವಿಜಯ್ 'ಜನ ನಾಯಕನ್', ಸೂರ್ಯ 'ರೆಟ್ರೋ' ಚಿತ್ರಗಳು ಕೂಡ ಅಂಥವೇ ಅಂತ ಗೊತ್ತಾಗಿದೆ.


ಇದಕ್ಕೆ ಸ್ಪೆಷಲ್ ಸಾಂಗ್‌ಗಳು ಕೂಡ ಪೂಜಾಗೆ ಒಳ್ಳೆ ಕ್ರೇಜ್ ತಂದುಕೊಟ್ಟಿವೆ. 'ರಂಗಸ್ಥಳಂ'ನಲ್ಲಿ ಜಿಗೇಲ್ ರಾಣಿ ಅಂತ ಥಿಯೇಟರ್‌ಗಳನ್ನೇ ಕುಲುಕಿಸಿದ ವಿಷಯ ಗೊತ್ತಿರೋದೆ. ಈಗ ಅದನ್ನ ಮೀರಿಸಿ 'ಕೂಲಿ'ಯಲ್ಲಿ ಐಟಂ ಸಾಂಗ್ ಇರುತ್ತಂತೆ.

ಆದ್ರೆ ಇದ್ರಲ್ಲಿ ಮನ್ಮಥ ನಾಗಾರ್ಜುನ ಜೊತೆ ಅವ್ರು ಕುಣಿಯೋಕೆ ರೆಡಿಯಾಗಿದ್ದಾರೆ ಅಂತ ಗೊತ್ತಾಗಿದೆ. ಒಂದು ಪಾರ್ಟಿ ಸಾಂಗ್‌ನಲ್ಲಿ ಪೂಜಾ ಹೆಗ್ಡೆ ಕುಣಿಯೋಕೆ ರೆಡಿಯಾಗಿದ್ದಾರಂತೆ. ಇದ್ರಲ್ಲಿ ಮೇನ್ ಆಗಿ ನಾಗಾರ್ಜುನ ಇರ್ತಾರಂತೆ. ಅವರು ಪೂಜಾ ಜೊತೆಗೆ ಸ್ಟೆಪ್ ಹಾಕ್ತಾರೆ, ಊರಮಾಸ್ ಆಗಿ ಈ ಹಾಡು ಇರುತ್ತೆ ಅಂತ ಗೊತ್ತಾಗಿದೆ. ಇದರಲ್ಲಿ ಪೂಜಾ ಲುಕ್ ಸಖತ್ತಾಗಿ ಇರುತ್ತೆ ಅಂತ ಮಾಹಿತಿ.

'ಕೂಲಿ'ಯಲ್ಲಿ ನಾಗಾರ್ಜುನ ಪ್ರಮುಖ ರೋಲ್‌ನಲ್ಲಿ ನಟಿಸ್ತಿದ್ದಾರೆ. ನೆಗೆಟಿವ್ ಶೇಡ್ ಇರೋ ಪಾತ್ರ ಎನ್ನಲಾಗುತ್ತಿದೆ. ಆದ್ರೆ ಈ ಚಿತ್ರದಲ್ಲಿ ರಜನಿಕಾಂತ್ ಜೊತೆ ಪೂಜಾ ನೃತ್ಯ ಅಂತ ಎಲ್ಲರೂ ಅಂದ್ಕೊಂಡಿದ್ರು, ಆದ್ರೆ ನಾಗ್ ಜೊತೆನೆ ಪೂಜಾ ಕುಣಿಯೋಕೆ ರೆಡಿಯಾಗಿದ್ದಾರೆ ಅಂತ ಮಾಹಿತಿ ಬಹಿರಂಗವಾಗಿದೆ. ಈ ಹಾಡು ಸಿನಿಮಾಗೆ ಸ್ಪೆಷಲ್ ಅಟ್ರಾಕ್ಷನ್ ಎನ್ನಲಾಗಿದೆ.

ಈಗಾಗಲೇ ಅಕ್ಕಿನೇನಿ ಮಗ ನಾಗಚೈತನ್ಯ ಜೊತೆ 'ಒಕ ಲೈಲಾ ಕೋಸಂ', ಅಖಿಲ್ ಜೊತೆ 'ಮೋಸ್ಟ್ ಎಲಿಜಿಬಲ್ ಬ್ಯಾಚುಲರ್' ಚಿತ್ರಗಳಲ್ಲಿ ಆಕ್ಟ್ ಮಾಡಿದ್ದಾರೆ ಪೂಜಾ. ಈಗ ತಂದೆ ನಾಗಾರ್ಜುನ ಜೊತೆ ಸಾಂಗ್‌ನಲ್ಲಿ ರೊಮ್ಯಾನ್ಸ್ ಮಾಡೋಕೆ ರೆಡಿಯಾಗಿದ್ದಾರೆ.

ಹೀಗೆ ತಂದೆ–ಮಕ್ಕಳ ಜೊತೆ ಕುಣಿದಿರೋ ಹೀರೋಯಿನ್ ಆಗಿ ಪೂಜಾ ನಿಲ್ಲೋದು ವಿಶೇಷ. ಇನ್ನು ರಜನಿಕಾಂತ್, ನಾಗಾರ್ಜುನ, ಉಪೇಂದ್ರ, ಶ್ರುತಿ ಹಾಸನ್ ಮೇನ್ ರೋಲ್‌ನಲ್ಲಿ ನಟಿಸಿರೋ 'ಕೂಲಿ' ಮೇ 1ಕ್ಕೆ ರಿಲೀಸ್ ಆಗೋದಿತ್ತು. ಆದ್ರೆ ಮುಂದೂಡಲಾಗಿದ್ದು, ಆಗಸ್ಟ್ 15ಕ್ಕೆ ರಿಲೀಸ್ ಆಗಲಿದೆ ಎನ್ನಲಾಗಿದೆ.



# ನೆಪೋಟಿಸಂ: ನಕಾರಾತ್ಮಕತೆಗೆ ಬಲಿ

ಹಲವು ಯಶಸ್ವಿ ಚಿತ್ರಗಳನ್ನು ಹೊಂದಿರುವ ನಟ ಅಭಿಷೇಕ್ ಬಚ್ಚನ್ ಅವರು ತಮ್ಮ ಉತ್ತಮ, ವೈವಿಧ್ಯಮಯ ಸಿನಿಮಾಗಳ ಹೊರತಾಗಿಯೂ, "ಅನಗತ್ಯವಾಗಿ ಸ್ವಜನಪಕ್ಷಪಾತದ ನಕಾರಾತ್ಮಕತೆಗೆ ಬಲಿಯಾಗಿದ್ದಾರೆ" ಎಂದು ಬರೆಯಲಾಗಿರುವ ಎಕ್ಸ್ ಪೋಸ್ಟ್ ನೆಟ್ಟಿಗರ ಗಮನ ಸೆಳೆದಿದೆ. ಈ ಪೋಸ್ಟ್ ಹಲವು ಪ್ರತಿಕ್ರಿಯೆಗಳನ್ನು ಸ್ವೀಕರಿಸಿದೆ. ಬಿಗ್ ಬಿ ಕೂಡಾ ರಿಯಾಕ್ಟ್ ಮಾಡಿದ್ದಾರೆ.

ಚಿತ್ರರಂಗದಲ್ಲಿ ನೆಪೋಟಿಸಂ ಬಗ್ಗೆ ಚರ್ಚೆ ಮುಂದುವರಿದಿದ್ದು, ನಟ ಅಭಿಷೇಕ್ ಬಚ್ಚನ್ ಅವರ ವೃತ್ತಿಜೀವನದ ಮೇಲೆ ನೆಪೋಟಿಸಂ ಬೀರಿರುವ ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅಭಿಮಾನಿಗಳು ಮತ್ತು ವಿಮರ್ಶಕರಿಗೆ ಹಿರಿಯ ನಟ ಅಮಿತಾಭ್ ಬಚ್ಚನ್ ಎಕ್ಸ್ (ಟ್ವಿಟರ್)ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ನನಗೂ ಹಾಗೆಯೇ ಅನಿಸಿದೆ. ನಾನು ಅವರ ತಂದೆ ಎಂಬ ಕಾರಣಕ್ಕೆ ಮಾತ್ರವಲ್ಲ" ಎಂದು ಅಭಿಷೇಕ್ ತಂದೆ ಅಮಿತಾಭ್ ಪ್ರತಿಕ್ರಿಯಿಸಿದ್ದಾರೆ. ಬಾಲಿವುಡ್ ಐಕಾನ್ನ ಈ ಹೇಳಿಕೆ ಚಲನಚಿತ್ರೋದ್ಯಮದಲ್ಲಿ ಆಗಾಗ್ಗೆ ಕೇಳಿ ಬರುವ ಸ್ವಜನಪಕ್ಷಪಾತ ಅಥವಾ ನೆಪೋಟಿಸಂ ಚರ್ಚೆಯಲ್ಲಿ ಸಿಲುಕಿರುವ ಮಗನ ಸಮರ್ಥನೆ ಆಗಿರುವಂತೆ ತೋರುತ್ತಿದೆ.

2 ದಶಕಗಳಿಗೂ ಹೆಚ್ಚು ಕಾಲದಿಂದ ಬಾಲಿವುಡ್ನಲ್ಲಿ ಗುರುತಿಸಿಕೊಂಡಿರುವ ಅಭಿಷೇಕ್ ಬಚ್ಚನ್, ಗುರು, ಯುವ, ಸರ್ಕಾರ್, ಪಾ, ಧೂಮ್ ಮತ್ತು ಹೌಸ್ಫುಲ್ನಂತಹ ಚಿತ್ರಗಳಲ್ಲಿ ತಮ್ಮ ನಟನಾ ಪ್ರತಿಭೆ ಸಾಬೀತುಪಡಿಸಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ, 'ಬ್ರೀತ್: ಇನ್ಟು ದಿ ಶಾಡೋಸ್' ಮತ್ತು 'ಐ ವಾಂಟ್ ಟು ಟಾಕ್'ನಂತಹ ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ. ಈ ಯಶಸ್ಸಿನ ಹೊರತಾಗಿಯೂ, ಅವರ ತಂದೆಯ ಯಶಸ್ವಿ ವೃತ್ತಿಜೀವನ, ಸಿನಿಮಾಗಳೊಂದಿಗೆ ನಟನ ಕೆಲಸಗಳನ್ನು ನಿರಂತರವಾಗಿ ಹೋಲಿಕೆ ಮಾಡುತ್ತಿರೋದು ಅವರ ವೃತ್ತಿಜೀವನದ ಮೇಲೆ ಪರಿಣಾಮ ಬೀರಿದೆ. ಹೋಲಿಕೆ ನಿರಂತರವಾಗಿ ಸಾಗಿದ್ದು, ಅಭಿಷೇಕ್ ಪ್ರತಿಭೆ ಮತ್ತು ಯಶಸ್ಸು ಸೈಡ್ಲೈನ್ ಆಗಿದೆ ಅನ್ನೋದು ಅಪಾರ ಸಂಖ್ಯೆಯ ಅಭಿಮಾನಿಗಳ ಅಭಿಪ್ರಾಯ.

ತಂದೆಯ ಇಂತಹ ಹೊಗಳಿಕೆ ಹೊರತಾಗಿಯೂ, ಅಭಿಷೇಕ್ ಅವರ ವೃತ್ತಿಜೀವನವು ಸಾರ್ವಜನಿಕರಿಂದ ಮಿಶ್ರ ಪ್ರತಿಕ್ರಿಯೆ ಪಡೆಯುತ್ತಿವೆ. ಅಭಿಷೇಕ್ ಯಶಸ್ಸಿಗೆ ಅವರ ಸರ್ನೇಮ್ (ಬಚ್ಚನ್) ಎಷ್ಟರ ಮಟ್ಟಿಗೆ ಕಾರಣವಾಗಿದೆ? ಎಂದು ಹಲವರು ಪ್ರಶ್ನಿಸಿದ್ದಾರೆ. ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಪ್ರತಿಕ್ರಿಯಿಸಿ, "ಮೊದಲ 15 ಸಿನಿಮಾಗಳು ಸಂಪೂರ್ಣ ವಿಫಲವಾದರೂ ಚಿತ್ರರಂಗದಲ್ಲಿ ಬದುಕುಳಿದ ಹೊಸಬರನ್ನು ಊಹಿಸಿಕೊಳ್ಳಿ!" ಎಂದು ಟೀಕಿಸಿದ್ದಾರೆ. ಅಭಿಮಾನಿಯೊಬ್ಬರು ಪ್ರತಿಕ್ರಿಯಿಸಿ, "ಅವರು ಖಂಡಿತವಾಗಿಯೂ ಆ ನೆಪೋ ಕಿಡ್ಗಿಂತ ಉತ್ತಮರು" ಎಂದು ತಿಳಿಸಿದ್ದಾರೆ. ಹೀಗೆ ಅಭಿಷೇಕ್ ಪ್ರತಿಭೆ ಬಗ್ಗೆ ಎಕ್ಸ್‌ನಲ್ಲಿ ಪರ ವಿರೋಧ ಚರ್ಚೆ ಸಾಗಿದೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878